ಸಂಪುಟ: 05 ಸಂಚಿಕೆ: 139 ಪುಟಗಳು: 08 ಶುಕ್ರವಾರ 01 ಆಗಸ್ಟ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ನಿಮ್ಮ ಮೊದಲ ಗೆಲುವಿನ ಬಳಿಕ ವಿಶ್ರಾಂತಿ ತೆಗೆದುಕೊಳ್ಳಬೇಡಿ. ಏಕೆಂದರೆ, ಒಂದೊಮ್ಮೆ ನೀವು ಎರಡನೇ ಪ್ರಯತ್ನದಲ್ಲಿ ವಿಫಲರಾದರೆ ನಿಮ್ಮ ಮೊದಲ ಗೆಲುವು ಕೇವಲ ಅದೃಷ್ಟ ಎಂದು ಹೇಳಲು ಹೆಚ್ಚಿನ ತುಟಿಗಳು ಕಾಯುತ್ತಿರುತ್ತವೆ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಬಿ.ದಯಾನಂದ್, ಶೇಖರ್‌ಗೆ ಸ್ಥಳ ನಿಯೋಜಿಸಿದ ಸರ್ಕಾರ ಆದೇಶ

• ಉದಯವಾಹಿನಿ, ಬೆಂಗಳೂರು

ಹಿರಿಯ ಪೊಲೀಸ್ ಅಧಿಕಾರಿಗಳಾದ ಬಿ.ದಯಾನಂದ್, ಶೇಖರ್ ಎಚ್. ತೆಕ್ಕಣ್ಣವರ್ ಅವರ ಅಮಾನತು ವಾಪಸ್ ತೆಗೆದುಕೊಂಡಿದ್ದ ಸರ್ಕಾರವು ಇಬ್ಬರಿಗೂ ಸ್ಥಳ ನಿಯೋಜನೆ ಮಾಡಿ ಆದೇಶ ಹೊರಡಿಸಿದೆ. ಚಿನ್ನಸ್ವಾಮಿ ಕ್ರೀಡಾಂಗಣದ ಕಾಲ್ತುಳಿತ ದುರಂತ ಸಂಬಂಧ ನಗರ ಪೊಲೀಸ್ ಕಮಿಷನರ್ ಆಗಿದ್ದ ಬಿ.ದಯಾನಂದ ಸೇರಿದಂತೆ ನಾಲ್ವರು ಪೊಲೀಸ್ ಅಧಿಕಾರಿಗಳ ಅಮಾನತನ್ನು ಹಿಂಪಡೆದು ಆದೇಶ ಹೊರಡಿಸಿತ್ತು. ಐಜಿಪಿ ವಿಕಾಸ್‌ಕುಮಾರ್ ಅಮಾನತು ಮುಂದುವರಿಸಿದೆ. ಸದ್ಯ ದಯಾನಂದ್ ಅವರಿಗೆ ಎಡಿಜಿಪಿ ಹುದ್ದೆಗೆ (ಕಾರಾಗೃಹ) ನಿಯೋಜನೆ ಮಾಡಿದೆ. ಇನ್ನು ಶೇಖರ್ ಎಚ್. ತೆಕ್ಕಣ್ಣವರ್ ಅವರಿಗೆ ಗುಪ್ತಚರ ಇಲಾಖೆ ಎಸ್‌ಪಿ ಹುದ್ದೆ ನೀಡಲಾಗಿದೆ. ಜೂನ್ 4ರಂದು ನಡೆದಿದ್ದ ಚಿನ್ನಸ್ವಾಮಿ ಕಾಲ್ತುಳಿತ ಪ್ರಕರಣಕ್ಕೆ ಭದ್ರತಾ ವೈಫಲ್ಯ ಆರೋಪದ ಹಿನ್ನೆಲೆಯಲ್ಲಿ ಅಂದಿನ ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ, ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಸ್‌ಕುಮಾರ್ ವಿಕಾಸ್, ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಎಚ್. ತೆಕ್ಕಣ್ಣವರ್, ಕಬ್ಬನ್‌ಪಾರ್ಕ್ ಉಪವಿಭಾಗದ ಎಸಿಪಿ ಸಿ.ಬಾಲಕೃಷ್ಣ, ಕಬ್ಬನ್ ಪಾರ್ಕ್ ಠಾಣೆ ಇನ್ಸ್‌ಪೆಕ್ಟರ್ ಎ.ಕೆ. ಗಿರೀಶ್ ಅವರನ್ನು ಜೂ.5ರಂದು ಅಮಾನತುಗೊಳಿಸಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸ್ವತಃ ಐವರು ಅಧಿಕಾರಿಗಳ ಅಮಾನತನ್ನು ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿದ್ದರು.

## ಬಿವೈವಿ ಬಿಜೆಪಿ ರಾಜ್ಯಾಧ್ಯಕ್ಷ ಆದ್ರೆ, ಹೊಸ ಪಕ್ಷ ಆರಂಭಿಸುವುದು ಸತ್ಯ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಹೈಕಮಾಂಡ್ ಬಿವೈ ವಿಜಯೇಂದ್ರನನ್ನು ಕರ್ನಾಟಕದ ಬಿಜೆಪಿ ರಾಜ್ಯಾಧ್ಯಕ್ಷನಾಗಿ ಆಯ್ಕೆ ಮಾಡಿದರೆ, ನಾವು ಹೊಸ ಪಕ್ಷ ಆರಂಭಿಸುವುದು ಸೂರ್ಯನಷ್ಟೇ ಸತ್ಯ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದ್ದಾರೆ. ಬಿಜೆಪಿಯಲ್ಲಿ ಭಾರೀ ಒಗ್ಗಟ್ಟು ಇತ್ತು. ಆದರೆ, ಈಗ ಇಲ್ಲ. ಇನ್ನು ಬಿವೈ ವಿಜಯೇಂದ್ರನನ್ನು ಅಧ್ಯಕ್ಷನಾಗಿ ಮುಂದುವರೆಸಿದರೆ ಇರುವ ಒಗ್ಗಟ್ಟು ಹೊಡೆದು ಹೋಗುತ್ತೆ. ಸದ್ಯ ಬಿವೈ ರಾಘವೇಂದ್ರ ಅವರನ್ನು ಬಿಟ್ಟು ಯಾವ ಲೋಕಸಭಾ ಸದಸ್ಯರು ವಿಜಯೇಂದ್ರ ಅವರನ್ನು ಮುಂದುವರೆಸಲು ಬೆಂಬಲ ಕೊಟ್ಟಿಲ್ಲ ಎಂದರು.

## ಮುಡಾ: ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದ ವಿಚಾರಣಾ ಆಯೋಗ

• ಉದಯವಾಹಿನಿ, ಬೆಂಗಳೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ, ಪರಿಹಾರ ಮತ್ತು ಬದಲಿ ನಿವೇಶನಗಳ ಹಂಚಿಕೆಯಲ್ಲಿನ ಅವ್ಯವಹಾರಗಳ ವಿಚಾರಣೆಗೆ ರಚಿಸಲಾಗಿದ್ದ ನಿವೃತ್ತ ನ್ಯಾಯಮೂರ್ತಿ ಪಿ.ಎನ್ .ದೇಸಾಯಿ ನೇತೃತ್ವದ ಆಯೋಗವು, ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ನ್ಯಾಯಮೂರ್ತಿ ದೇಸಾಯಿ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿ, ವರದಿ ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ಪರಿಹಾರದ ನಿವೇಶನಗಳನ್ನು ಹಂಚಿಕೆ ಮಾಡುವಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಬಂದ ಬೆನ್ನಲ್ಲೇ, ರಾಜ್ಯ ಕೈ ಸರ್ಕಾರವು ನ್ಯಾಯಮೂರ್ತಿ ದೇಸಾಯಿ ನೇತೃತ್ವದಲ್ಲಿ ಆಯೋಗ ರಚಿಸಿತ್ತು. 2006ರಿಂದ 2024ರ ಜುಲೈ 15ರವರೆಗೂ ನಡೆದಿರುವ ಭೂಸ್ವಾಧೀನ, ಬಡಾವಣೆಗಳ ನಿರ್ಮಾಣ, ನಿವೇಶನ ಹಂಚಿಕೆ, ಪರಿಹಾರ ವಿತರಣೆಯ ಬಗ್ಗೆ ವಿಚಾರಣೆ ನಡೆಸುವಂತೆ ಸೂಚಿಸಿತ್ತು.

## ಲೋಕಸಭೆಯಲ್ಲಿ ರಾಜ್ಯದ ವಿರುದ್ಧವೇ ಮಾತನಾಡಿದ್ದು ಸರಿಯಲ್ಲ: ತನ್ವೀರ್ ಸೇಠ್

• ಉದಯವಾಹಿನಿ, ಮೈಸೂರು

ನಗರದಲ್ಲಿ ಮಾದಕ ವಸ್ತು ತಯಾರಿಕಾ ಘಟಕ ಪತ್ತೆಯಾಗಿರುವುದು ಹಾಗೂ ರಾಜಾರೋಷವಾಗಿ ನಡೆಯುತ್ತಿದ್ದುದ್ದನ್ನು ಗಮನಿಸಿದರೆ ಇಲ್ಲಿನ ಪೊಲೀಸ್ ಹಾಗೂ ಗುಪ್ತಚರ ವ್ಯವಸ್ಥೆಯ ವೈಫಲ್ಯವನ್ನು ಕಾಣಬಹುದು ಎಂದು ಶಾಸಕ ತನ್ನೀರ್ ಸೇಠ್ ಹೇಳಿದರು.

ಇಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜನಸಂಖ್ಯೆಗೆ ತಕ್ಕಂತೆ ಪೊಲೀಸ್ ಠಾಣೆಗಳನ್ನು ಹೆಚ್ಚಿಸಬೇಕು, ಠಾಣೆಗಳ ವ್ಯಾಪ್ತಿಯನ್ನು ಪುನರ್ ರಚಿಸಬೇಕು, ಜನರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಬೇಕು ಎಂದು ಹಿಂದಿನಿಂದಲೂ ಒತ್ತಾಯಿಸುತ್ತಲೇ ಬಂದಿದ್ದೇನೆ. ಕಾನೂನು-ಸುವ್ಯವಸ್ಥೆ ಕಾಪಾಡುವುದು, ಸಂಚಾರ ವ್ಯವಸ್ಥೆ ಹಾಗೂ ಪೊಲೀಸರ ನಿಯೋಜನೆಯಲ್ಲಿ ನನ್ನ ಕ್ಷೇತ್ರವನ್ನು ಕಡೆಗಣಿಸಲಾಗುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ವರ್ತುಲ ರಸ್ತೆ ನಿರ್ಮಾಣವಾದ ನಂತರ ಪ್ರವೇಶ ಹಾಗೂ ನಿರ್ಗಮನ ಸುಲಭವಾಗಿದೆ. ಇದಕ್ಕೆ ಕಡಿವಾಣ ಹಾಕಬೇಕಾದುದು ಹಾಗೂ ನಿಗಾ ವಹಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಈ ಸಂಬಂಧ ಸರ್ಕಾರದ ಗಮನವನ್ನೂ ಸೆಳೆದಿದ್ದೇನೆ. ಪೊಲೀಸ್ ಆಯುಕ್ತರೊಂದಿಗೂ ಮಾತನಾಡಿದ್ದೇನೆ. ಹೊಸದಾಗಿ ಪೊಲೀಸ್ ಠಾಣೆಯನ್ನೂ ಮಂಜೂರು ಮಾಡಿಸಿದ್ದೇನೆ. ನಮ್ಮ ಕೆಲಸವನ್ನು ನಾವು ಮಾಡುತ್ತಿದ್ದೇವೆ' ಎಂದರು.



## 6ನೇ ಸ್ಥಳದಲ್ಲಿ ಅಸ್ಥಿಪಂಜರ ಅವಶೇಷಗಳು ಪತ್ತೆ

# ಧರ್ಮಸ್ಥಳ ಬುರುಡೆ ರಹಸ್ಯ

**ಕೊನೆಗೂ ಅಸ್ಥಿಪಂಜರ ಪತ್ತೆ**

**SIT ಸಹಾಯವಾಣಿ ಆರಂಭ**

1. ಧರ್ಮಸ್ಥಳ ಗ್ರಾಮದಲ್ಲಿ ನೂರಾರು ಶವಗಳನ್ನು ಹೂತುಹಾಕಿರುವ ಬಗ್ಗೆ ಅನಾಮಿಕನಿಂದ ದೂರು
2. ಮೊದಲ ಗುಂಡಿಯಲ್ಲಿ ಪ್ಯಾನ್ ಕಾರ್ಡ್ ಮತ್ತು ಎಟಿಎಂ ಕಾರ್ಡ್‌ಗಳು ಪತ್ತೆ
3. ಬೆಂಗಳೂರು ಗ್ರಾಮಾಂತರದ ಸುರೇಶ್ ಎಂಬ ವ್ಯಕ್ತಿಯದ್ದು ಎಂದು ದೃಢ
4. 6ನೇ ಸ್ಥಳದಲ್ಲಿ 15 ಮೂಳೆಗಳು ಪತ್ತೆ, ವಿಶೇಷ ತನಿಖಾ ತಂಡದ ಅಧಿಕಾರಿಗಳಿಂದ ಮಾಹಿತಿ



• ಉದಯವಾಹಿನಿ, ಮಂಗಳೂರು

ಧರ್ಮಸ್ಥಳ ಗ್ರಾಮದಲ್ಲಿ ಪ್ರಭಾವಿಗಳ ಸೂಚನೆ ಮೇರೆಗೆ ನೂರಾರು ಶವಗಳನ್ನು ಹೂತುಹಾಕಿರುವುದಾಗಿ ಅನಾಮಿಕ ನೀಡಿದ ದೂರಿನ ಮೇರೆಗೆ ದಾಖಲಾದ ಪ್ರಕರಣದಲ್ಲಿ ಭಾರೀ ಬೆಳವಣಿಗೆಗಳು ನಡೆಯುತ್ತಿವೆ.

ಸಾಕ್ಷಿ ದೂರುದಾರ ತೋರಿಸಿದ ಮೊದಲ ಜಾಗದಲ್ಲಿ ಎಸ್ ಐಟಿ ನೆಲ ಅಗೆದಾಗ ಪಾನ್‌ಕಾರ್ಡ್ ಹಾಗೂ ಎಟಿಎಂ ಕಾರ್ಡ್ ಪತ್ತೆಯಾಗಿತ್ತು. ಇದೀಗ ಅದರ ವಿವರಗಳು ಬಹಿರಂಗವಾಗಿವೆ. ಇನ್ನೊಂದೆಡೆ 6ನೇ ಸ್ಥಳದಲ್ಲಿ ಅಸ್ಥಿಪಂಜರಗಳು ಸಿಕ್ಕಿವೆ.

3ನೇ ದಿನ ನಡೆಯುತ್ತಿರುವ ಉತ್ಖನನ ಕಾರ್ಯಾಚರಣೆಯಲ್ಲಿ 6ನೇ ಸ್ಥಳದಲ್ಲಿ ಅಸ್ಥಿಪಂಜರದ ಅವಶೇಷಗಳು ಪತ್ತೆಯಾಗಿದೆ. ಈ ಬೆಳವಣಿಗೆ ಪ್ರಕರಣಕ್ಕೆ ಒಂದು ಉತ್ತಮ ಮೈಲಿಗಲ್ಲನ್ನು ನೀಡಿದೆ. ನಾವು ಗುರುತಿಸಿದ ಸ್ಥಳ ಸಂಖ್ಯೆ 6ರಲ್ಲಿ ಭಾಗಶಃ ಅಸ್ಥಿಪಂಜರದ ಅವಶೇಷಗಳು ಕಂಡುಬಂದಿವೆ ಎಂದು ಎಸ್‌ಐಟಿಯ ಮೂಲಗಳು ಮಾಹಿತಿ ನೀಡಿದೆ. ಎಸ್‌ಐಟಿ ದಳ ನೇತ್ರಾವತಿ ನದಿಯ ಸಮೀಪವಿರುವ ಅರಣ್ಯ ಪ್ರದೇಶದಲ್ಲಿ ಸಾಕ್ಷಿ-ದೂರುದಾರರ ಸಮ್ಮುಖದಲ್ಲಿ 6ನೇ ಸ್ಥಳದಲ್ಲಿ ಶೋಧ ಕಾರ್ಯವನ್ನು ಪ್ರಾರಂಭಿಸಿತು.

ಎಸ್‌ಐಟಿಯು ಧರ್ಮಸ್ಥಳದ ಕಾಡುಪ್ರದೇಶದಲ್ಲಿ ಗುರುತಿಸಲಾದ ಪಾಯಿಂಟ್ ನಂಬರ್ 6 ರಲ್ಲಿ ಹಿಟಾಚಿ ಯಂತ್ರವನ್ನು ಬಳಸಿ ಉತ್ಖನನ ಕಾರ್ಯವನ್ನು ಕೈಗೊಂಡಿತು. ಈ ಸ್ಥಳದಲ್ಲಿ ನಡೆದ ಒಂದೂವರೆ ಗಂಟೆಗಳ ತೀವ್ರ ಶೋಧದ ನಂತರ, ಮೂಳೆ ರೀತಿಯ ವಸ್ತು ಪತ್ತೆಯಾಗಿದೆ.ನಂತರ ಆ ವಸ್ತುವನ್ನು ಎಚ್ಚರಿಕೆಯಿಂದ ಸಂಗ್ರಹಿಸಿ, ಫಾರೆನ್ಸಿಕ್ ವಿಶ್ಲೇಷಣೆಗಾಗಿ ರವಾನಿಸಲಾಗಿದೆ.

ಈ ಕಳೇಬರವು ಮಾನವನದ್ದೇ ಎಂಬುದನ್ನು ಖಚಿತಪಡಿಸಲು ಡಿಎನ್‌ಎ ಪರೀಕ್ಷೆ ಸೇರಿದಂತೆ ವೈಜ್ಞಾನಿಕ ವಿಶ್ಲೇಷಣೆ ನಡೆಸಲಾಗುವುದು ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

**ಸಹಾಯವಾಣಿ ಆರಂಭ:** ಧರ್ಮಸ್ಥಳ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣದ ಕುರಿತು ಯಾವುದೇ ಮಾಹಿತಿಯನ್ನು ಹಂಚಿಕೊಳ್ಳುವಂತೆ ನಾಗರಿಕರನ್ನು ಒತ್ತಾಯಿಸಿ ವಿಶೇಷ ತನಿಖಾ ತಂಡ ಸಹಾಯವಾಣಿಯನ್ನು ಪ್ರಾರಂಭಿಸಿದೆ.ನಾಗರಿಕರು ಬೆಳಿಗ್ಗೆ 10 ಗಂಟೆ ಸುಮಾರಿಗೆ ತನಿಖಾ ತಂಡವನ್ನು ಮಂಗಳೂರಿನ ಕದ್ರಿಯ ಮಲ್ಲಿಕಟ್ಟೆಯಲ್ಲಿರುವ ತಪಾಸಣಾ ಬಂಗ್ಲೆಯಲ್ಲಿರುವ ಕಚೇರಿಗೆ ಸಂಪರ್ಕಿಸಬಹುದು ಎಂದು ಎಸ್‌ಐಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ನಾಗರಿಕರು ಎಸ್‌ಐಟಿಯ ವಾಟ್ಸಾಪ್ ಸಂಖ್ಯೆ 8277986369 ಅಥವಾ ದೂರವಾಣಿ ಸಂಖ್ಯೆ 0824-2005301 ಅಥವಾ sitdps@ksp.gov.inಗೆ ಇಮೇಲ್ ಮೂಲಕ ಮಾಹಿತಿ ಹಂಚಿಕೊಳ್ಳಬಹುದು.

ಏತನ್ಮಧ್ಯೆ, ಧರ್ಮಸ್ಥಳ ಗ್ರಾಮದಲ್ಲಿ ಕಾಣೆಯಾದ ತನ್ನ ಮಗಳು ಎಂಬಿಬಿಎಸ್ ವಿದ್ಯಾರ್ಥಿನಿ ಅನನ್ಯ ಭಟ್ ಅವರ ಅಸ್ಥಿಪಂಜರದ ಅವಶೇಷಗಳನ್ನು ಹುಡುಕಲು ಸುಜಾತಾ ಭಟ್ ಅವರ ಕಾನೂನು ಸಲಹೆಗಾರರು ದೂರು ದಾಖಲಿಸಿದ್ದಾರೆ.

ಗುಂಡಿಯಲ್ಲಿ ಅಸ್ಥಿಪಂಜರದ ಅವಶೇಷಗಳು ಪತ್ತೆಯಾದ ಬೆನ್ನಲ್ಲೇ ಅನಾನ್ಯ ಭಟ್ ತಾಯಿ ಸುಜಾತಾ ಭಟ್ ಪರ ವಕೀಲ ಮಂಜುನಾಥ್ ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ. ಈ ಪತ್ತೆಯು ಸತ್ಯ ಮೇವ ಜಯತೇ ಎಂಬ ಧ್ಯೇಯವಾಕ್ಯಕ್ಕೆ ಸಾಕ್ಷಿಯಾಗಿದ್ದು, ಸತ್ಯಕ್ಕೆ ಜಯ, ದೇವರು ಮಹಾನ್ ಎಂಬ ಭಾವನೆಯನ್ನು ಬಲಪಡಿಸಿದೆ ಎಂದು ಹೇಳಿದ್ದಾರೆ.

ಕಾಣೆಯಾದ ವೈದ್ಯಕೀಯ ವಿದ್ಯಾರ್ಥಿನಿ ಅನನ್ಯಾ ಭಟ್ ಅವರ ತಾಯಿ ಸುಜಾತಾ ಭಟ್ ಅವರ ಪರ ವಕೀಲ ಮಂಜುನಾಥ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂಳೆ ಸಿಕ್ಕಿದ್ದಕ್ಕೆ ಸಂತೋಷವಾಗಿದೆ. ಈ ಪ್ರಕರಣಕ್ಕೆ ಮತ್ತಷ್ಟು ಸ್ಪೂರ್ತಿ ತುಂಬಿದೆ. ತನಿಖೆ ನ್ಯಾಯಯುತವಾಗಿ ನಡೆಯುತ್ತದೆ ಎಂಬ ನಂಬಿಕೆಯಿದೆ ಎಂದಿದ್ದಾರೆ. 2003 ರಲ್ಲಿ ಧರ್ಮಸ್ಥಳದಲ್ಲಿ ನಾಪತ್ತೆಯಾದ ವೈದ್ಯಕೀಯ ವಿದ್ಯಾರ್ಥಿನಿ ಅನನ್ಯಾ ಭಟ್ ಪ್ರಕರಣವು ಈ ತನಿಖೆಗೆ ಪ್ರಮುಖ ಕಾರಣವಾಗಿದೆ. ಇದೇ ಪ್ರದೇಶದಲ್ಲಿ 1998 ರಿಂದ 2014 ರವರೆಗೆ ನೂರಾರು ಮಹಿಳೆಯರು ಮತ್ತು ಮಕ್ಕಳ ಶವಗಳನ್ನು ಹೂತಿಟ್ಟಿದ್ದೇನೆ ಎಂದು ಮಾಜಿ ಸ್ವಚ್ಛತಾ ಕಾರ್ಮಿಕನೊಬ್ಬ ಆರೋಪಿಸಿದ್ದಾನೆ.

ಈ ಆರೋಪದಿಂದ ರಾಜ್ಯಾದ್ಯಂತ ಸಂಚಲನ ಮೂಡಿದ್ದು, ಸುಜಾತಾ ಭಟ್ ಅವರು ತಮ್ಮ ಮಗಳ ಕಳೇಬರವನ್ನು ಪತ್ತೆಹಚ್ಚಿ, ಹಿಂದೂ ಸಂಪ್ರದಾಯದಂತೆ ಅಂತ್ಯಕ್ರಿಯೆ ನಡೆಸುವ ಆಸೆಯೊಂದಿಗೆ ಜು.15, 2025 ರಂದು ದಕ್ಷಿಣ ಕನ್ನಡ ಜಿಲ್ಲಾ ಎಸ್‌ಪಿಯನ್ನು ಭೇಟಿಯಾಗಿ ದೂರು ದಾಖಲಿಸಿದ್ದರು.

**ಮಹಿಳೆಯ ಡೆಬಿಟ್ ಕಾರ್ಡ್ ಕಥೆ ಏನು?**

ಇನ್ನು ಎಟಿಎಂ ಕಾರ್ಡ್ ಜೊತೆ ಮಹಿಳೆ ಒಬ್ಬರ ಡೆಬಿಟ್ ಕಾರ್ಡ್ ಕೂಡ ಪತ್ತೆಯಾಗಿತ್ತು. ಈ ಬಗ್ಗೆ ಎಸ್‌ಐಟಿ ಅಧಿಕಾರಿಗಳು ಬ್ಯಾಂಕ್ ಅನ್ನು ಸಂಪರ್ಕಿಸಿದ್ದು, ಅವರು ಇನ್ನೂ ರೂಪೇ ಡೆಬಿಟ್ ಕಾರ್ಡ್ ಬಗ್ಗೆ ಮಾಹಿತಿ ನೀಡಿಲ್ಲ ಎಂದು ಹೇಳಿದ್ದಾರೆ. ಅವರು ಇರಬಹುದಾದ ಸ್ಥಳದ ಬಗ್ಗೆಯೂ ಪರಿಶೀಲನೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

### 6ನೇ ಸ್ಥಳದಲ್ಲಿ ಅಸ್ಥಿಪಂಜರ ಪತ್ತೆ

ಇನ್ನು ಸತತ ಮೂರನೇ ದಿನವೂ ನಿಗೂಢ ಸಮಾಧಿ ಅಗೆಯುವ ಕೆಲಸ ಜಾರಿಯಲ್ಲಿದ್ದು, ದೂರುದಾರರು ಗುರುತಿಸಿದ್ದ 6ನೇ ಸ್ಥಳದಲ್ಲಿ ಗುರುವಾರ ವಿಶೇಷ ತನಿಖಾ ತಂಡಕ್ಕೆ ದೇಹದ ಭಾಗಶಃ ಅಸ್ಥಿಪಂಜರ ಸಿಕ್ಕಿದೆ. ಇಲ್ಲಿ ತಲೆಬುರುಡೆ ಸಿಕ್ಕಿಲ್ಲ. ಆದರೆ 15 ಮೂಳೆಗಳು ಪತ್ತೆಯಾಗಿವೆ ಎಂದು ಎಸ್‌ಐಟಿ ಅಧಿಕಾರಿಗಳು ಹೇಳಿದ್ದು, ಸ್ಥಳದಲ್ಲೇ ಇದ್ದ ವಿಧಿವಿಜ್ಞಾನ ವೈದ್ಯರು ಮೇಲ್ನೋಟಕ್ಕೆ ನೋಡಿದಾಗ ಇದು ಪುರುಷನ ಮೂಳೆಗಳಂತೆ ಕಾಣಿಸುತ್ತವೆ ಎಂದು ಅಭಿಪ್ರಾಯ ನೀಡಿದ್ದಾರೆ. ಇದನ್ನು ವಿಧಿವಿಜ್ಞಾನ ಪರೀಕ್ಷೆಗೆ ಈಗಾಗಲೇ ಕಳುಹಿಸಿ ಕೊಟ್ಟಿದ್ದು, ಇದರಲ್ಲಿ ಸರಿಯಾದ ವಿವರ ತಿಳಿದು ಬರಲಿದೆ. ವಿಧಿವಿಜ್ಞಾನ ವೈದ್ಯರು, ಸ್ಥಳದಲ್ಲಿದ್ದ ಅಧಿಕಾರಿಗಳು ಹಾಗೂ ಪೊಲೀಸರು ಈ ಮೂಳೆಗಳನ್ನು ವಶಕ್ಕೆ ಪಡೆದಿರುವುದಲ್ಲದೆ, ಅವು ಪತ್ತೆಯಾದ ರೀತಿ ಸೇರಿದಂತೆ ವಿವಿಧ ವಿವರಗಳನ್ನು ದಾಖಲಿಸಿಕೊಂಡಿದ್ದಾರೆ.ಈ ವೇಳೆ ಪುತ್ತೂರು ಉಪವಿಭಾಗದ ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗೀಸ್ ಸ್ಥಳದಲ್ಲೇ ಹಾಜರಿದ್ದರು.



## ರಸಗೊಬ್ಬರ ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ

**ಡಿಜಿಪಿಗೆ ಸಿದ್ದರಾಮಯ್ಯ ಖಡಕ್ ಸೂಚನೆ!**

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರ ರಾಜ್ಯಕ್ಕೆ ಅಗತ್ಯವಾದ ರಸಗೊಬ್ಬರ ಸರಬರಾಜು ಮಾಡದೆ ಅನ್ಯಾಯ ಎಸಗಿರುವ ಸಂದರ್ಭದಲ್ಲಿ ಕಾಳಸಂತೆಕೋರರು ತಲೆ ಎತ್ತದಂತೆ ತೀವ್ರ ನಿಗಾ ವಹಿಸಿ, ಕಠಿಣ ಕ್ರಮ ಕೈಗೊಳ್ಳುವಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ.

ಕೇಂದ್ರ ಸರ್ಕಾರದ ಅಸಹಾಕಾರದ ನಡುವೆಯೂ ರಾಜ್ಯದ ರೈತರಿಗೆ ಅನಾನುಕೂಲ ಆಗದಂತೆ ರಾಜ್ಯ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುತ್ತಿದೆ. ಈ ನಡುವೆ ರಸಗೊಬ್ಬರಕ್ಕೆ ಕೃತಕ ಅಭಾವ ಸೃಷ್ಟಿಸಿ ದುರ್ಲಾಭ ಮಾಡಿಕೊಳ್ಳಲು ಕಾಳಸಂತೆಕೋರರು ಪ್ರಯತ್ನಿಸುತ್ತಿರುವ ಬಗ್ಗೆ ತೀವ್ರವಾದ ನಿಗಾ ವಹಿಸುವಂತೆ ಸಿಎಂ ಸೂಚನೆ ನೀಡಿದ್ದಾರೆ.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸಚಿವರು ಮತ್ತು ಶಾಸಕರುಗಳ ಜೊತೆ ಸತತವಾಗಿ ಸಭೆ ನಡೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆಯ ನಡುವೆಯೇ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ದೂರವಾಣಿ ಮೂಲಕ ಮಾತನಾಡಿ ಸ್ಪಷ್ಟ ಸೂಚನೆ ನೀಡಿದ್ದಾರೆ. ಜಿಲ್ಲೆ ಮತ್ತು ತಾಲ್ಲೂಕು, ಹೋಬಳಿ ಎಲ್ಲೂ ರಸಗೊಬ್ಬರಕ್ಕೆ ಕೃತಕ ಅಭಾವ ಸೃಷ್ಟಿಯಾಗಬಾರದು. ಈ ರೀತಿ ಅಭಾವ ಸೃಷ್ಟಿಸುತ್ತಿರುವವರ ಬಗ್ಗೆ ತೀವ್ರ ನಿಗಾ ಇಟ್ಟು ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದಾರೆ.

**ಕೇಂದ್ರದಿಂದ ಪೂರೈಕೆ ಕೊರತೆಯಿಂದ ರಾಜ್ಯದಲ್ಲಿ ರಸಗೊಬ್ಬರ ಸಮಸ್ಯೆ**

ಕೇಂದ್ರ ಸರ್ಕಾರದಿಂದ ಯೂರಿಯಾ ಪೂರೈಕೆ ಕೊರತೆಯಾದ ಹಿನ್ನೆಲೆಯಲ್ಲಿ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ವಿತರಣೆಯಲ್ಲಿ ಸಮಸ್ಯೆಯಾಗಿದ್ದು, ಅದನ್ನು ನಿಭಾಯಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಗೊಂದಲಗಳು ಬಗೆಹರಿಯಲಿವೆ ಎಂದು ಕೃಷಿ ಸಚಿವರಾದ ಎನ್. ಚಲುವರಾಯಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ರಾಜ್ಯದಲ್ಲಿ ಕಳೆದ 2ವರ್ಷಗಳಲ್ಲಿ 3 ಮುಂಗಾರು ಹಂಗಾಮಿನಲ್ಲಿ ಇದೇ ಸರ್ಕಾರ ಅಧಿಕಾರದಲ್ಲಿದೆ. ನಾನೇ ಕೃಷಿ ಸಚಿವನಾಗಿ ಇದ್ದೇನೆ. ಈ ವರೆಗೆ ಉಂಟಾಗದ ಸಮಸ್ಯೆ ಈಗೇಕೆ ಎಂಬುದನ್ನು ವಿಶ್ಲೇಷಿಸಬೇಕಾಗಿದೆ ಎಂದು ಹೇಳಿದರು.



ರಾಜ್ಯಕ್ಕೆ ಪೂರೈಕೆಯಾಗಬೇಕಾಗಿದ್ದ ಯೂರಿಯಾ ರಸಗೊಬ್ಬರದಲ್ಲಿ ಈ ಬಾರಿ 1.36ಲಕ್ಷ ಮೆಟ್ರಿಕ್ ಟನ್ ಕೊರತೆಯಾಗಿದೆ. ಇದೇ ಈ ಎಲ್ಲಾ ಸಮಸ್ಯೆಗಳು ಹೆಚ್ಚಲು ಪ್ರಮುಖ ಕಾರಣವಾಗಿದೆ ಎಂದು ಕೃಷಿ ಸಚಿವರು ಅಂಕಿ ಅಂಶಗಳೊಂದಿಗೆ ಮಾಹಿತಿ ನೀಡಿದರು. ಈ ಬಾರಿ ಮುಂಗಾರು ಬೇಗ ಪ್ರಾರಂಭವಾಗಿ ಉತ್ತಮ ಮಳೆಯಾಗಿದ್ದು, 2ಲಕ್ಷ ಹೆಕ್ಟೇರ್ ಹೆಚ್ಚುವರಿ ಮುಸುಕಿನ ಜೋಳ ಬಿತ್ತನೆ ಕೂಡ ಯೂರಿಯಾ ಬೇಡಿಕೆ ಹಠಾತ್ ಏರಿಕೆಗೆ ಕಾರಣವಾಗಿದೆ ಎಂದರು. ರಾಜ್ಯದಲ್ಲಿ ಅಕ್ರಮ ಸಾಗಾಟ, ಯೂರಿಯಾ ದುರ್ಬಳಕೆ ಬಗ್ಗೆ ವಿಚಕ್ಷಣ ದಳ ಚುರುಕಾಗಿ ಕಾರ್ಯನಿರ್ವಹಿಸುತ್ತಿದ್ದು, ಅಕ್ರಮಗಳಿಗೆ ಕಡಿವಾಣ ಹಾಕಿದೆ. ವಿರೋಧ ಪಕ್ಷದ ಮುಖಂಡರು ಮಾಧ್ಯಮಕ್ಕೆ ತಿಳಿಸಿರುವಂತೆ ಕರ್ನಾಟಕ ರಾಜ್ಯವು ನೆರೆ ದೇಶಗಳಾದ ಶ್ರೀಲಂಕಾ ಮತ್ತು ಬಾಂಗ್ಲಾದೇಶದೊಂದಿಗೆ ಯಾವುದೇ ಗಡಿಯನ್ನು ಹಂಚಿಕೊಂಡಿರುವುದಿಲ್ಲ. ಈ ಹೇಳಿಕೆಯು ಹಾಸ್ಯಾಸ್ಪದವಾಗಿದೆ. ವಿರೋಧ ಪಕ್ಷದ ನಾಯಕರು ಅರ್ಥ ಮಾಡಿಕೊಳ್ಳಬೇಕು ಎಂದು ಚಲುವರಾಯಸ್ವಾಮಿ ಹೇಳಿದರು.

ರಸಗೊಬ್ಬರಗಳ ಪೂರೈಕೆ ಕಾಪು ದಾಸ್ತಾನಿಗೆ ಇರಿಸಲಾಗಿದ್ದ ಗ್ಯಾರಂಟಿ ಹಣ ಕಡಿತಗೊಳಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಆದರೆ ಈ ಹಿಂದೆ ಇದ್ದದ್ದು ಬಿ.ಜೆ.ಪಿ ಸರ್ಕಾರ ಅವರೇ ನಿಗಧಿಪಡಿಸಿದ್ದ 400 ಕೋಟಿ ರೂ ಹಣವನ್ನು ನಾವು ಯಥಾಸ್ಥಿತಿ ಮುಂದುವರೆಸಿದ್ದೇವೆ. ಇನ್ನೂ 600 ಕೋಟಿ ರೂಪಾಯಿ ಹೆಚ್ಚುವರಿ ಹಣ ನೀಡಲು ರಾಜ್ಯ ಸರ್ಕರ ಸಿದ್ದವಿದೆ. ಪ್ರತಿಯಾಗಿ ಬಿಜೆಪಿ ನಾಯಕರು ಗೊಬ್ಬರ ಒದಗಿಸಲು ಸಾಧ್ಯವೇ ತಿಳಿಸಬೇಕು ಎಂದು ಚಲುವರಾಯಸ್ವಾಮಿ ಪ್ರಶ್ನಿಸಿದರು.

## ಮತಗಳ್ಳತನದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆಗೆ ಸಜ್ಜು

● ಆ.5ರಂದು ಫ್ರೀಡಂ ಪಾರ್ಕ್‌ನಲ್ಲಿ ರಾಹುಲ್ ಗಾಂಧಿ ನೇತೃತ್ವದಲ್ಲಿ ಹೋರಾಟ ಲೋಕ, ವಿಧಾನಸಭೆ ಚುನಾವಣೆಯಲ್ಲಿ ಲೋಪದೋಷ

• ಉದಯವಾಹಿನಿ, ಬೆಂಗಳೂರು

ಮತಗಳ್ಳತನದ ವಿರುದ್ಧ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಆಗಸ್ಟ್ 5 ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು. ನಂತರ ಚುನಾವಣಾ ಆಯೋಗದ ಕಚೇರಿಗೆ ತೆರಳಿ ಮನವಿಪತ್ರ ಸಲ್ಲಿಸಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು. ಮತದಾರರ ಹಕ್ಕು, ಸಂವಿಧಾನದ ರಕ್ಷಣೆ ಮಾಡಬೇಕಿದೆ.

ಕರ್ನಾಟಕದ ಭೂಮಿಯಿಂದಲೇ ಈ ಹೋರಾಟ ಪ್ರಾರಂಭ ಮಾಡಿದರೆ ಹೆಚ್ಚಿನ ಶಕ್ತಿ ದೊರೆಯುತ್ತದೆ ಎಂದು ರಾಹುಲ್ ಗಾಂಧಿಯವರು ಇಲ್ಲಿಂದ ಪ್ರಾರಂಭ ಮಾಡುತ್ತಿದ್ದಾರೆ. ವಿಧಾನಸಭೆ, ಲೋಕಸಭೆ ಚುನಾವಣೆ ವೇಳೆ ಆದಂತಹ ಹಲವಾರು ಲೋಪದೋಷಗಳನ್ನು ನಮ್ಮ ನಾಯಕರು ಎತ್ತಿಹಿಡಿಯಲಿದ್ದಾರೆ ಎಂದು ತಿಳಿಸಿದರು.

**ಚುನಾವಣಾ ಆಯೋಗದ ಕಚೇರಿಗೆ ಮನವಿ**

**ಆಕ್ಷೇಪಣೆ ಸ್ವೀಕರಿಸಿಲ್ಲ:** ನಮ್ಮ ಸರ್ಕಾರವೇ ಮಾಡಿರುವ ನಿಯಮಗಳು ಹಾಗೂ ನ್ಯಾಯಾಲಯ ನೀಡಿರುವ ನಿರ್ದೇಶನದ ಮೇರೆಗೆ ಪ್ರತಿಭಟನೆ ನಡೆಸಲಾಗುವುದು.ಮುಖಂಡರು, ಕಾರ್ಯಕರ್ತರು ಈ ಪ್ರತಿಭಟನೆಯಲ್ಲಿ ಭಾಗವಹಿಸಬೇಕು ಎಂದು ಇಲ್ಲಿ ತಿಳಿಸಲಾಗಿದೆ. ರಾಜ್ಯದ ಎಲ್ಲಾ ಬ್ಲಾಕ್‌ಗಳಿಂದ ಪ್ರತಿನಿಧಿಗಳು ಹಾಜರಾಗಬೇಕು ಎಂದು ಆಹ್ವಾನ ನೀಡಲಾಗಿದೆ ಎಂದರು.




ಕರಡು ಮತದಾರರ ಪಟ್ಟಿಯ ಬಗ್ಗೆ ಏಕೆ ಕಾಂಗ್ರೆಸ್ ಈ ಮೊದಲೇ ಆಕ್ಷೇಪಣೆ ಸಲ್ಲಿಸಲಿಲ್ಲ ಎಂದಾಗ, ನಾವು ಆಕ್ಷೇಪಣೆ ಸಲ್ಲಿಸಿದ್ದೆವು ಆದರೆ ಚುನಾವಣಾ ಆಯೋಗ ಅದನ್ನು ಸ್ವೀಕರಿಸಲಿಲ್ಲ. ಮಹದೇವಪುರ ಕ್ಷೇತ್ರದಲ್ಲಿ ಅಭ್ಯರ್ಥಿ ನಾಗೇಶ್ ಅವರು ಹಾಗೂ ಅವರ ಮಗ ದಾಖಲೆಗಳನ್ನು ತೋರಿಸಿದರು. ದಿನೇಶ್ ಗುಂಡೂರಾವ್ ಕ್ಷೇತ್ರ ಗಾಂಧಿನಗರದಲ್ಲೂ ಇದೇ ರೀತಿ ನಡೆದಿದೆ. ಇಲ್ಲಿ 7 ಸಾವಿರದಷ್ಟು ಮತದಾರರು ಒಂದು ವಾರ್ಡ್‌ನಲ್ಲಿ ಸೇರ್ಪಡೆಯಾಗಿದೆ ಎಂದರು.

ಚುನಾವಣೆಯಾದ 45 ದಿನಗಳವರೆಗೂ ಕಾಂಗ್ರೆಸ್ ನವರು ಏನು ಮಾಡುತ್ತಿದ್ದರು ಎಂಬ ಬಿಜೆಪಿ ಪ್ರಶ್ನೆ ಬಗ್ಗೆ ಕೇಳಿದಾಗ, ನಾವು ಚುನಾವಣೆ ನಂತರ ಮಲಗಿದ್ದೆವು. ಅಧಿಕಾರ ಪ್ರಮಾಣ ವಚನ ಸ್ವೀಕರಿಸಿ, ಐದು ಗ್ಯಾರಂಟಿ ಯೋಜನೆ ಜಾರಿ ಮಾಡಿ ಜನರಿಗೆ ಅನುಕೂಲ ಮಾಡಿಕೊಟ್ಟೆವು ಎಂದು ತಿರುಗೇಟು ನೀಡಿದರು.

**ಜನರಿಗೆ ವಿಷಯ ಮುಟ್ಟಿಸುವ ಪ್ರಯತ್ನ**

ಪಾದಯಾತ್ರೆ ಎಲ್ಲಿಂದ ಎಲ್ಲಿಯವರೆಗೆ ಇರಲಿದೆ ಎಂದು ಕೇಳಿದಾಗ, ನಾವು ಪಾದಯಾತ್ರೆ ಮಾಡುತ್ತಿಲ್ಲ. ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿ ನಮ್ಮ ವಿಚಾರ ಜನರಿಗೆ ತಿಳಿಸುತ್ತೇವೆ. ನಂತರ ಐದಾರು ನಾಯಕರು ಚುನಾವಣಾ ಆಯೋಗ ಕಚೇರಿಗೆ ಹೋಗಿ ಮನವಿ ಸಲ್ಲಿಸುತ್ತೇವೆ ಎಂದರು. ನಡಿಗೆ ಮೂಲಕ ಹೋಗುತ್ತೀರಾ ಎಂದು ಕೇಳಿದಾಗ, ಪೊಲೀಸರು ವಾತಾವರಣ ನೋಡಿ ಯಾವ ಸಲಹೆ ನೀಡುತ್ತಾರೋ ಆ ರೀತಿ ಮಾಡುತ್ತೇವೆ. ನಡಿಗೆ ಮೂಲಕ ಆದರೂ ಹೋಗಬಹುದು ಅಥವಾ ವಾಹನದಲ್ಲಿಯಾದರೂ ತೆರಳಬಹುದು ಎಂದರು. ಯಾವ ಕ್ಷೇತ್ರಗಳ ದಾಖಲೆ ಬಿಡುಗಡೆ ಮಾಡುತ್ತೀರಾ ಎಂದು ಕೇಳಿದಾಗ, ಈ ವಿಚಾರವನ್ನು ರಾಹುಲ್ ಗಾಂಧಿ ಅವರು ತೀರ್ಮಾನ ಮಾಡಿ ಬಹಿರಂಗಪಡಿಸಿದ್ದಾರೆ. ನಾನು ಈ ವಿಚಾರವಾಗಿ ಏನು ಹೇಳುವುದಿಲ್ಲ ಎಂದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹10,003/Gram24ct ₹9,170/Gram22ct ಬೆಳ್ಳಿ: ₹115.00/Gram

# ಕಾವೇರಿ ಜಲಾನಯನದಲ್ಲಿ ಉತ್ತಮ ಮಳೆ: ಮೈದುಂಬಿದ ತಮಿಳುನಾಡಿನ ಮೆಟ್ಟೂರು ಜಲಾಶಯ

• ಉದಯವಾಹಿನಿ, ಮಹದೇಶ್ವರ ಬೆಟ್ಟ


ಉದಯವಾಹಿನಿ ಚಿತ್ರ

ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾದ ಪರಿಣಾಮ ತಮಿಳುನಾಡಿನ ಮೆಟ್ಟೂರು ಜಲಾಶಯ ಗರಿಷ್ಠ ಮಟ್ಟ ತಲುಪಿದ್ದು, 16 ಕ್ರಸ್ಟ್‌ಗೇಟ್‌ಗಳ ಮೂಲಕ ನೀರನ್ನು ಹೊರಬಿಡಲಾಗಿದೆ. ಸೇಲಂ ಜಿಲ್ಲಾ ವ್ಯಾಪ್ತಿಯಲ್ಲಿರುವ ಮೆಟ್ಟೂರು ಜಲಾಶಯ ಈ ವರ್ಷ ಜುಲೈನಲ್ಲಿಯೇ ಭರ್ತಿಯಾಗಿದ್ದು ಅಣೆಕಟ್ಟೆಯ ಮನಮೋಹಕ ದೃಶ್ಯವನ್ನು ಕಣ್ಣುಂಬಿಕೊಳ್ಳಲು ಕರ್ನಾಟಕ ಹಾಗೂ ತಮಿಳುನಾಡಿನಿಂದ ಪ್ರವಾಸಿಗರು ಲಗ್ಗೆ ಇಡುತ್ತಿದ್ದಾರೆ. ಮೆಟ್ಟರೂರು ಜಲಾಶಯದ ಗರಿಷ್ಠ ಮಟ್ಟ 120 ಅಡಿಯಾಗಿದ್ದು, ನೀರಿನ ಸಂಗ್ರಹಣಾ ಸಾಮರ್ಥ್ಯ 95.6 ಟಿಎಂಸಿ ಅಡಿಯಾಗಿದೆ. 120 ಅಡಿ ಎತ್ತರ ಇರುವ ಜಲಾಶಯ 1,700 ಮೀಟರ್ ಉದ್ದ (5,600 ಚದರಡಿ) ವಿಸ್ತೀರ್ಣವನ್ನು ಹೊಂದಿದೆ.

ಜಲಾಶಯದ ನೀರಿನ ಮಟ್ಟ 120 ಅಡಿ ತಲುಪಿದ್ದು, 93.4 ಟಿಎಂಸಿ ಅಡಿ ಮುಟ್ಟಿದೆ. ಮಂಗಳವಾರ ನೀರಿನ ಒಳ ಹರಿವು 1,10,500 ಕ್ಯೂಸೆಕ್ ಇದ್ದು, ಜಲಾಶಯದ 16 ಗೇಟ್‌ಗಳ ಮೂಲಕ 1 ಲಕ್ಷ ಕ್ಯೂಸೆಕ್ ಪ್ರಮಾಣದ ನೀರನ್ನು ನದಿಗೆ ಹರಿಬಿಡಲಾಗುತ್ತಿದ್ದು, ಕೃಷಿಯ ಉದ್ದೇಶಕ್ಕೆ ನಾಲೆಗಳ ಮೂಲಕ 500 ಕ್ಯೂಸೆಕ್ ನೀರನ್ನು ಜಲಾಶಯದಿಂದ ಹರಿಬಿಡಲಾಗಿದೆ. ಅತಿ ಹೆಚ್ಚು ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿರುವ ಮೆಟ್ಟೂರು ಜಲಾಶಯ ತಮಿಳುನಾಡಿನ ಅತಿ ದೊಡ್ಡ ಜಲಾಶಯ ಎಂಬ ಹಿರಿಮೆಗೆ ಪಾತ್ರವಾಗಿದೆ. 1925ರಲ್ಲಿ ಪ್ರಾರಂಭವಾದ ಅಣೆಕಟ್ಟೆಯ ಕಾಮಗಾರಿ ಸತತವಾಗಿ 10 ವರ್ಷಗಳ ಕಾಲ ನಡೆಯಿತು. 17,000 ಕಾರ್ಮಿಕರನ್ನು ಜಲಾಶಯದ ನಿರ್ಮಾಣ ಕಾಮಗಾರಿಯಲ್ಲಿ ಬಳಕೆ ಮಾಡಿಕೊಳ್ಳಲಾಗಿತ್ತು ಎನ್ನುತ್ತಾರೆ ಅಧಿಕಾರಿಗಳು. ಮೆಟ್ಟೂರು ಜಲಾಶಯವು ತಮಿಳುನಾಡಿನ ಸೇಲಂ ಜಿಲ್ಲೆ ಸೇರಿದಂತೆ 12 ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಕೆ ಮಾಡುತ್ತಿದೆ. 16.4 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ನೀರೊದಗಿಸುತ್ತಿರುವ ತಮಿಳುನಾಡಿನ ರೈತರ ಜೀವನಾಡಿ ಎಂದೇ ಕರೆಯಲಾಗುತ್ತದೆ.

**6ನೇ ಬಾರಿ ಭರ್ತಿ**

**ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದ್ದು ಹೆಚ್ಚುವರಿ ನೀರು ಮೆಟ್ಟೂರು ಜಲಾಶಯಕ್ಕೆ ಹರಿಯುತ್ತಿದೆ. ಜುಲೈ ತಿಂಗಳಿನಲ್ಲೇ ಅಣೆಕಟ್ಟೆ ಸತತ 6ನೇ ಬಾರಿ ಭರ್ತಿಯಾಗಿದೆ. ಜಲಾಶಯದ ಹಿನ್ನೀರು ಪಾಲಾರ್ ಸಮೀಪವಿರುವ ಸೋರೆಕಾಯಿ ಮಡುವಿನಿಂದ ಗೋಪಿನಾಥಂ ಆಸುಪಾಸು, ಹೋಗೇನಕಲ್ ಜಲಪಾತದವರೆಗೂ ವ್ಯಾಪ್ತಿಸಿಕೊಂಡಿದ್ದು ನಯನ ಮನೋಹರ ದೃಶ್ಯಗಳನ್ನು ಕಾಣಬಹುದಾಗಿದೆ.**



## ಮಿನಿ ನ್ಯೂಸ್

# ಮಹಿಳೆಯರ, ಮಕ್ಕಳ ಅನೈತಿಕ ಸಾಗಣೆ ಕುರಿತು ಅರಿವು ಜಾಥಾ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೋಲಾರ

ಮಕ್ಕಳ ಮತ್ತು ಮಹಿಳೆಯರ ಅನೈತಿಕ ಸಾಗಣೆ ಮತ್ತು ಮಾರಾಟ ತಡೆಗಟ್ಟುವ ಉದ್ದೇಶದಿಂದ ಸಮಾಜದಲ್ಲಿ ಅರಿವು ಮೂಡಿಸುವುದು ಹೆಚ್ಚಿನ ಅಗತ್ಯವಿದೆ ಎಂದು ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಜಿ.ಎ.ಮಂಜುನಾಥ ತಿಳಿಸಿದರು. ನಗರದ ಕೆಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಣೆ ತಡೆ ಕುರಿತು ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪ್ರಸ್ತುತ ಕಾಲಘಟ್ಟದಲ್ಲಿ ಅನೇಕ ಅಪರಾಧಗಳನ್ನು ಕಾಣುತ್ತಿದ್ದೇವೆ. ಅಂತಹ ಅಪರಾಧಗಳಲ್ಲಿ ಹೇಯವಾದದ್ದು ಮಹಿಳೆಯರ, ಮಕ್ಕಳ ಸಾಗಣೆ ಆಗಿದೆ ಎಂದರು.

ಈಚೆಗೆ 3 ದಿನದ ಮಗುವನ್ನು ಮಾರಾಟ ಮಾಡುವ ಪ್ರಯತ್ನ ನಡೆದಿತ್ತು, ಅದೇ ರೀತಿ ಧರ್ಮಸ್ಥಳದಲ್ಲಿ ನಡೆದಿರುವ ಪ್ರಕರಣಗಳು ಗಮನಿಸುತ್ತಿದ್ದೇವೆ. ಇಂತಹ ಪ್ರಕರಣಗಳು ಗಮನಕ್ಕೆ ಬಂದಾಗ ಬಹಳ ಸಂಕಟವಾಗುತ್ತದೆ. ಈ ತರಹದ ಅನೈತಿಕ ಸಾಗಣೆಯನ್ನು ತಡೆಗಟ್ಟಲು ಸಮಾಜದಲ್ಲಿರುವ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಆರ್.ನಟೇಶ್, ವಕೀಲರ ಸಂಘದ ಮುನೇಗೌಡ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಾರಾಯಣಸ್ವಾಮಿ, ಮಕ್ಕಳ ರಕ್ಷಣಾ ಘಟಕ ನಾಗರತ್ನ, ಡಿವೈಎಸ್ಪಿ ಎಂ.ಎಚ್.ನಾಗ್ತ, ಜಿಲ್ಲಾ ಅಂಗವಿಕಲ ರಕ್ಷಣಾಧಿಕಾರಿ ಮಂಜುಳಾ, ವಿವಿಧ ಸ್ವಯಂ ಸೇವಾ ಸಂಸ್ಥೆಗಳು, ಸಂಘ ಸಂಸ್ಥೆಗಳ ಸದಸ್ಯರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಪಾಲ್ಗೊಂಡಿದ್ದ ಸಂಘ ಸಂಸ್ಥೆಗಳ ಸದಸ್ಯರಿಗೆ ಅಂಗನವಾಡಿಯಲ್ಲಿ ಮಕ್ಕಳಿಗೆ ಬಳಸುವ ಹಾಲನ್ನು ತಂದು ಇಲಾಖೆಯಿಂದ ವಿತರಿಸಲಾಗಿದೆ ಎಂದು ಕೆಲವರು ದೂರಿದರು.

## ಕ್ಷೇತ್ರದ ಜನರ ಸಮಸ್ಯೆ ಆಲಿಸಲು ಶಾಸಕ ವಿನೂತನ ಪ್ರಯತ್ನ: ರಾಜ್ಯದಲ್ಲೇ ಮೊದಲು

# ಜನಪ್ರತಿನಿಧಿಗಳ ಮನೆ ಬಾಗಿಲಿಗೆ ಹೋಗೋದು ಸಹಜ

• ಉದಯವಾಹಿನಿ, ಮಂಡ್ಯ


ಉದಯವಾಹಿನಿ ಚಿತ್ರ

**ಮನೆ ಮನೆಗೆ ಸರ್ಕಾರಿ ಸೇವೆ**

ಜಿಲ್ಲೆ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿರುವುದು ರೈತ ಸಂಘದ ದರ್ಶನ್ ಪುಟ್ಟಣ್ಣಯ್ಯ. ದರ್ಶನ್ ಪುಟ್ಟಣ್ಣಯ್ಯ ತಮ್ಮ ತಂದೆ ರೈತ ಹೋರಾಟಗಾರ ಕೆ.ಎಸ್.ಪುಟ್ಟಣ್ಣಯ್ಯ ಅವರ ಹಾದಿಯಲ್ಲಿ ರೈತ ಸಂಘಟನೆ ಮೂಲಕ ರಾಜಕೀಯ ಪ್ರವೇಶ ಪಡೆದ್ದಾರೆ. ದರ್ಶನ್ ಪುಟ್ಟಣ್ಣಯ್ಯ ವಿದೇಶದಲ್ಲಿ ಇದ್ದವರು, ಇವರಿಗೆ ರೈತರ ಕಷ್ಟ ಏನು ಗೊತ್ತು? ಹಳ್ಳಿಗಾಡಿನ ಜನರ ಬೆರೆಯುತ್ತಾರ ಅಂತೆಲ್ಲ ಟೀಕೆಗಳು ವ್ಯಕ್ತವಾಗಿದ್ದವು. ಆರಂಭದಲ್ಲಿ ಆಗಾಗ ವಿದೇಶಕ್ಕೆ ಹೋಗುವ ಮೂಲಕ ಕ್ಷೇತ್ರದ ಜನರ ಟೀಕೆಗಳಿಗೆ ಗುರಿಯಾಗಿದ್ದರು. ಆದ್ರೆ, ದರ್ಶನ್ ಪುಟ್ಟಣ್ಣಯ್ಯ, ದಿನ ಕಳೆದಂತೆ ತಮ್ಮ ಕಾರ್ಯ ವೈಖರಿ ಬದಲಿಸಿಕೊಳುತ್ತಿದ್ದಾರೆ. ನಿತ್ಯವೂ ರೈತರು, ಕ್ಷೇತ್ರದ ಜನರ ಜೊತೆ ಬೆರೆಯುವುದು, ಅವರ ಸಮಸ್ಯೆಗಳಿಗೆ ಧನಿಯಾಗಿ, ಪರಿಹಾರ ಕೊಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಪೂರಕವೆಂಬಂತೆ ಮೇಲುಕೋಟೆ ಕ್ಷೇತ್ರದ ಜನರ ಸಮಸ್ಯೆ ಆಲಿಸಿ ಅದಕ್ಕೆ ಪರಿಹಾರಕ್ಕಾಗಿ ವಿಶೇಷ ಆ್ಯಪ್ ಸಿದ್ಧಪಡಿಸಿದ್ದಾರೆ.

ದರ್ಶನ್ ಪುಟ್ಟಣ್ಣಯ್ಯ ಅವರು ಶಾಸಕರಾಗುವ ಮೊದಲು ಅಮೆರಿಕಾದಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿ ಕೆಲಸ ಮಾಡಿದ್ದಲ್ಲೇ ಸ್ವಂತ ಉದ್ಯಮ ಸ್ಥಾಪಿಸಿದ್ದರು. ಈಗ ಶಾಸಕರು ತಮ್ಮ ಮೂಲ ವೃತ್ತಿ ಮೂಲಕವೇ ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದಾರೆ. ವಿಶೇಷ ಮೊಬೈಲ್ ಆ್ಯಪ್ ಕ್ರಿಯೇಟ್ ಮಾಡಿರುವ ಶಾಸಕರು, ಆ ಆ್ಯಪ್ ಮೂಲಕ ಜನರ ಸಮಸ್ಯೆಗಳನ್ನ ಪಟ್ಟಿ ಮಾಡುತ್ತಿದ್ದಾರೆ. ಮನೆ ಮನೆಗೆ ತೆರಳಿ ಅವರ ಮತದಾರ ಪಟ್ಟಿ ಅಪ್ಲೋಡ್ ಮಾಡಿ. ಬಳಿಕ ಜನರ ಸಮಸ್ಯೆ, ಬೇಡಿಕೆ ಆಲಿಸಿ, ಪಟ್ಟಿ ಮಾಡಿ ಅದನ್ನ ಆ್ಯಪ್‌ಗೆ ಅಪ್ಲೋಡ್ ಮಾಡಲು ವಿಶೇಷ ತಂಡ ರಚನೆ ಮಾಡಲಾಗಿದೆ.

**ಆ್ಯಪ್ ಹೇಗೆ ಕಾರ್ಯನಿರ್ವಹಣೆ?:** ಜನರ ಸಮಸ್ಯೆಗಳನ್ನ ಆಪ್ ನಲ್ಲಿ ಪಟ್ಟಿ ಮಾಡಿ, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ರವಾನೆ ಮಾಡಲಾಗುತ್ತೆ. ಪಟ್ಟಿ ಮಾಡಿದ ಸಮಸ್ಯೆಗಳ ಪರಿಹಾರದ ಫಾಲೋ ಅಪ್ ಅನ್ನು ಶಾಸಕರ ಕಚೇರಿ ಸಿಬ್ಬಂದಿ ಮಾಡಲಿದ್ದಾರೆ. ಮನೆ ಮನೆಗಳಿಗೆ ತೆರಳಿ ಜನರ ಸಮಸ್ಯೆ ಪಟ್ಟಿ ಮಾಡಲು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಂಚಾಯಿತಿ ಕಾರ್ಯದರ್ಶಿ, ಆಶಾ, ಅಂಗನವಾಡಿ ಕಾರ್ಯಕರ್ತೆಯರನ್ನ ಒಳಗೊಂಡ ತಂಡ ರಚಿಸಲಾಗಿದೆ. ಈ ಆ್ಯಪ್ ನಿಂದ ಸರ್ಕಾರಿ ಕಚೇರಿಗಳಿಗೆ ಜನ ಅಲೆಯುವುದನ್ನ ತಪ್ಪಿಸುತ್ತಿದೆ ಅಂತಾರೆ ಜನರು. ಸಾಮಾನ್ಯವಾಗಿ ಸಮಸ್ಯೆಗಳ ಪಟ್ಟಿ ಹಿಡಿದು ಜನ್ರು ಜನಪ್ರತಿನಿಧಿಗಳ ಮನೆ ಬಾಗಿಲಿಗೆ ಹೋಗೋದು ಸಹಜ. ಆದ್ರೆ, ಮೇಲುಕೋಟೆ ಶಾಸಕರು ಮನೆ ಬಾಗಿಲಿಗೆ ತೆರಳಿ ಮೊಬೈಲ್ ಆಪ್ ಮೂಲಕ ಜನರ ಸಮಸ್ಯೆಗಳ ಪಟ್ಟಿ ಮಾಡುತ್ತಿರುವುದುವಿಶೇಷ. ದರ್ಶನ್ ಪುಟ್ಟಣ್ಣಯ್ಯ ಅವರ ಜನಪರ ಕಾಳಜಿಗೆ ಪ್ರಶಂಸೆ ವ್ಯಕ್ತವಾಗಿದ್ದು, ಇದೇ ಮಾದರಿಯಲ್ಲಿ ಎಲ್ಲಾ ಶಾಸಕರು ತಮ್ಮ ಕ್ಷೇತ್ರದ ಜನರ ಸಮಸ್ಯೆಗಳನ್ನ ಆಲಿಸುವ ಪ್ರಯತ್ನ ಮಾಡಲಿ, ಸರ್ಕಾರ ಈ ಪ್ರಯೋಗವನ್ನ ರಾಜ್ಯಾದ್ಯಂತ ವಿಸ್ತರಿಸಲಿ ಎನ್ನುವುದು ನಮ್ಮ ಆಶಯ.

**ಜನರ ಸಮಸ್ಯೆ ಆಲಿಸಲು ವಿಶೇಷ ಆ್ಯಪ್**

**ರಾಜ್ಯ ಸರ್ಕಾರ ಸರ್ಕಾರಿ ಸೇವೆ ಮನೆ ಬಾಗಿಲಿಗೆ ಎಂಬ ಯೋಜನೆ ಜಾರಿ ಮಾಡಿದೆ. ಆ ಕಾರ್ಯಕ್ರಮವನ್ನ ನಿರಂತರವಾಗಿ ಸದ್ಬಳಕೆ ಮಾಡಿಕೊಳ್ಳುತ್ತಿರುವ ಶಾಸಕರಲ್ಲಿ ದರ್ಶನ್ ಪುಟ್ಟಣ್ಣಯ್ಯ ಮುಂಚೂಣಿಯಲ್ಲಿದ್ದಾರೆ ಅಂದ್ರೆ ತಪ್ಪಲ್ಲ. ಯಾಕಂದ್ರೆ, ಈಗಾಗಲೇ ದರ್ಶನ್ ಪುಟ್ಟಣ್ಣಯ್ಯ ತಮ್ಮ ಕ್ಷೇತ್ರದ ಆರೇಳು ಪಂಚಾಯಿತಿಗಳಲ್ಲಿ ಈ ಯೋಜನೆಯನ್ನ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಾರೆ. ಪಂಚಾಯಿತಿ ಮಟ್ಟದಲ್ಲಿ ಕಾರ್ಯಕ್ರಮ ಆಯೋಜಿಸಿ, ಮನೆ ಮನೆಗೆ ಸರ್ಕಾರಿ ಸೇವೆ ಒದಗಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದರ ಮುಂದುವರೆದ ಭಾಗವಾಗಿ ರಾಜ್ಯದಲ್ಲೇ ಮೊದಲು ಎಂಬಂತೆ ಮೇಲುಕೋಟೆ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ವಿಶೇಷ ಮೊಬೈಲ್ ಆ್ಯಪ್ ಸಿದ್ಧಪಡಿಸಿದ್ದಾರೆ. ಆ್ಯಪ್ ಮೂಲಕ ಕ್ಷೇತ್ರದ ಮತದಾರರ ಸಮಸ್ಯೆಗಳನ್ನ ಪಟ್ಟಿ ಮಾಡಿ, ಪರಿಹರಿಸುವ ಕೆಲಸ ಮಾಡುತ್ತಿದ್ದಾರೆ.**

# ಧರ್ತಿ ಆಬಾ ಜನ್: ಸಹಾಯಧನಕ್ಕೆ ಅರ್ಜಿ ಆಹ್ವಾನ

• ಉದಯವಾಹಿನಿ, ರಾಮನಗರ

ಕೇಂದ್ರ ಸರ್ಕಾರದ ಬುಡಕಟ್ಟು ವ್ಯವಹಾರದ ಸಚಿವಾಲಯದ ಧರ್ತಿ ಆಬಾ ಜನ್ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನ ಯೋಜನೆಯಡಿ, ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ ಹಂಚೀಕುಪ್ಪೆ ಗ್ರಾಮ ಪಂಚಾಯತಿ ವ್ಯಾಪ್ತಿಯ ನಾಯಕನಪಾಳ್ಯ, ಗ್ರಾಮ ಹಾಗೂ ಕನಕಪುರ ತಾಲ್ಲೂಕಿನ ಉಯ್ಯಂಬಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೂಳ್ಯ ಗ್ರಾಮಗಳನ್ನು ಗುರುತಿಸಲಾಗಿದೆ. ಈ ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಬುಡಕಟ್ಟು ಜನಾಂಗದವರು ಡೆವಲಪ್‌ಮೆಂಟ್ ಆಫ್ ಹೋಮ್ ಸ್ಟೇಸ್ ಇನ್ ಟ್ರೈಬಲ್ ಏರಿಯಾಸ್ ಯೋಜನೆ ಉಪಯೋಗಿಸಿಕೊಳ್ಳಲು ಅರ್ಹ ಆಸಕ್ತ ವ್ಯಕ್ತಿ, ಕುಟುಂಬದವರಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ಗ್ರಾಮಗಳನ್ನು ಅಭಿವೃದ್ಧಿಪಡಿಸಿ, ಪ್ರವಾಸಿಗರಿಗೆ ಅನುಕೂಲವಾಗುವಂತೆ ಹೋಂಸ್ಟೇ ನಿರ್ಮಿಸಲು 5 ಲಕ್ಷ, ನವೀಕರಿಸಲು 3 ಲಕ್ಷ ಸಹಾಯಧನ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಬುಡಕಟ್ಟು ಸಮುದಾಯವಿರುವ ಗ್ರಾಮಗಳಲ್ಲಿ ಆತಿಥ್ಯ ಕ್ಷೇತ್ರದಲ್ಲಿ ಪ್ರವಾಸೋದ್ಯಮ ಉತ್ತೇಜಿಸುವುದು ಬುಡಕಟ್ಟು ಸಮುದಾಯದ ಸಂಸ್ಕೃತಿ, ಪರಂಪರೆ, ನೈಸರ್ಗಿಕ ಸಂಪತ್ತನ್ನು ಪ್ರವಾಸಿಗರಿಗೆ ಪರಿಚಯಿಸುವುದಾಗಿದೆ.

ನಾಯಕನಪಾಳ್ಯ, ಹೂಳ್ಯ ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಬುಡಕಟ್ಟು ಜನಾಂಗದವರು ನಿಗದಿತ ಅರ್ಜಿ ನಮೂನೆಯನ್ನು ಜಿಲ್ಲಾ ಪ್ರವಾಸೋದ್ಯಮ ಕಚೇರಿಯಲ್ಲಿ ಪಡೆದು ಅವಶ್ಯಕ ದಾಖಲೆಗಳೊಂದಿಗೆ ಆಗಸ್ಟ್ 11ರೊಳಗೆ ಸಲ್ಲಿಸಬೇಕು. ಅರ್ಜಿಯೊಂದಿಗೆ ಜಾತಿ ಪ್ರಮಾಣಪತ್ರ ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಮನೆಯ ದಾಖಲೆ, ಮನೆಯ ಫೋಟೊ, ಘೋಷಣೆ ಫಾರಂ, ಗ್ರಾಮ ಪಂಚಾಯತಿ ಎನ್‌ಒಸಿ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ: 9535167637 ಸಂಪರ್ಕಿಸಬೇಕು ಎಂದು ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಗರಿಕರ ಮೇಲೆ ಪೊಲೀಸ್ ದೌರ್ಜನ್ಯ: ಖಂಡನೆ

• ಉದಯವಾಹಿನಿ, ತುಮಕೂರು

ಶಿರಾ ತಾಲ್ಲೂಕಿನ ತುಪ್ಪದಕೋಣ ಸಾಕ್ಷಿಹಳ್ಳಿ ಗ್ರಾಮಸ್ಥರು, ನಾಗರಿಕರ ಮೇಲೆ ಪೊಲೀಸರು ದೌರ್ಜನ್ಯ ನಡೆಸಿ, ಸುಳ್ಳು ಪ್ರಕರಣ ದಾಖಲಿಸಿರುವುದನ್ನು ಪಿಯುಸಿಎಲ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ದೊರೈರಾಜ್, ಕಾರ್ಯದರ್ಶಿ ತೇಜಸ್ ಕುಮಾರ್ ಖಂಡಿಸಿದ್ದಾರೆ. ಸಾಕ್ಷಿಹಳ್ಳಿ ಗ್ರಾಮಸ್ಥರ ಮೇಲೆ ಪೊಲೀಸರು ದೈಹಿಕ ಹಾಗೂ ಮಾನಸಿಕ ದೌರ್ಜನ್ಯ ನಡೆಸಿ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಶಿರಾ ಪೊಲೀಸ್ ಠಾಣೆಗೆ ಹಾಜರಾದ ಸಮಯದಲ್ಲಿ ಗ್ರಾಮದ 12 ಮಂದಿಯ ಮೇಲೆ ಇನ್ಸ್‌ಪೆಕ್ಟರ್ ಮಂಜೇಗೌಡ ಹಾಗೂ ಸಿಬ್ಬಂದಿ ದೌರ್ಜನ್ಯ ನಡೆಸಿದ್ದಾರೆ. ಇದು ನಾಗರಿಕ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಅವರು ಹೇಳಿದ್ದಾರೆ.

ಮನೆ ಮನೆಗೆ ಪೊಲೀಸ್ ಹೆಸರಿನಲ್ಲಿ ಜನರ ಕುಂದುಕೊರತೆ ಅರಿಯಲು ಗೃಹ ಇಲಾಖೆ ಮುಂದಾಗಿದೆ. ಆದರೆ ಈ ಪ್ರಕರಣದಲ್ಲಿ ಜನರನ್ನು ಬೆದರಿಸಲಾಗುತ್ತಿದೆ. ನಾಗರಿಕರ ಮೇಲೆ ದೌರ್ಜನ್ಯ ನಡೆಸಿ, ಜಾತಿ ದಬ್ಬಾಳಿಕೆಯ, ನಿರಂಕುಶಪ್ರಭುತ್ವದ ಸಂಕೇತವಾಗಿದೆ. ಈ ಘಟನೆ ಪೊಲೀಸ್ ಇಲಾಖೆಗೆ ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಶಿರಾ ಡಿವೈಎಸ್‌ಪಿ ತಕ್ಷಣ ತನಿಖೆ ನಡೆಸಿ, ಹಲ್ಲೆ ನಡೆಸಿದ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

# ಚಿಂತಾಮಣಿ: ಕೂಲಿ ಹಣ ಬಿಡುಗಡೆ ವಿಳಂಬ ಟಿಪಿಗೆ ಮುತ್ತಿಗೆ ಹಾಕಿದ ರೈತಸಂಘ

• ಉದಯವಾಹಿನಿ, ಚಿಂತಾಮಣಿ


ಉದಯವಾಹಿನಿ ಚಿತ್ರ

ನರೇಗಾ ಅಡಿಯಲ್ಲಿ ಬರಬೇಕಾದ ಕೂಲಿ ಹಣ ಬಿಡುಗಡೆ ವಿಳಂಬವಾಗಿದ್ದು ಸಾವಿರಾರು ಕೂಲಿ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಾಕಿ ಇರುವ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ರಾಜ್ಯ ರೈತ ಸಂಘ, ಹಸಿರು ಸೇನೆ ಪದಾಧಿಕಾರಿಗಳು ಬುಧವಾರ ತಾಲ್ಲೂಕು ಪಂಚಾಯಿತಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ರಘುನಾಥ್ ರೆಡ್ಡಿ ಮಾತನಾಡಿ, ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡಿದ ರೈತರಿಗೆ ಹಣ ಬಾರದೆ ಪರದಾಡುತ್ತಿದ್ದಾರೆ. ದುಡಿಮೆಯ ಪ್ರತಿಫಲಕ್ಕಾಗಿ ಕಾಯುತ್ತಿರುವ ಕಾರ್ಮಿಕರು, ಜೀವನ ನಿರ್ವಹಣೆಗೆ ಸಂಕಷ್ಟ ಎದುರಿಸುತ್ತಿದ್ದಾರೆ. ಕೆಲಸ ಮಾಡಿದ ಹಣ ಬಾರದೇ ಇರುವುದು ರೈತರ ಆರ್ಥಿಕ ಪರಿಸ್ಥಿತಿ ಮೇಲೂ ಪರಿಣಾಮ ಬೀರುತ್ತಿದೆ ಎಂದರು.

ಕಾರ್ಮಿಕರ ಮೇಲ್ವಿಚಾರಣೆ ಮತ್ತು ಜಿಪಿಎಸ್ ಭಾವಚಿತ್ರ ಕಳುಹಿಸಲು ಪಂಚಾಯಿತಿಗೆ ಒಬ್ಬ ಮೇಲ್ವಿಚಾರಕ ಇದ್ದು, ಪ್ರತಿದಿನ ಕೆಲಸದ ಆರಂಭದಲ್ಲಿ ಭಾವಚಿತ್ರ ತೆಗೆದುಕಳುಹಿಸುತ್ತಿದ್ದರು. ಈಗ ದಿನಕ್ಕೆ ಮೂರು ಬಾರಿ ಕಳುಹಿಸಬೇಕು ಎಂದು ಆದೇಶವಾಗಿರುವುದು ಸಮಸ್ಯೆಗೆ ಕಾರಣ. ಒಬ್ಬ ಮೇಲ್ವಿಚಾರಕ ಎಲ್ಲಾ ಕಡೆ ಮೂರು ಬಾರಿ ಹೋಗಲು ಸಾಧ್ಯವಿಲ್ಲ. ಭಾವಚಿತ್ರ ಇಲ್ಲದೆ ಕೂಲಿ ಹಣ ಬಿಡುಗಡೆ ಆಗದಿರುವುದು ಸಮಸ್ಯೆಗೆ ಕಾರಣವಾಗಿದೆ ಎಂದರು.

ಹೆಚ್ಚಿನ ಮೇಲ್ವಿಚಾರಕರನ್ನು ನೇಮಕ ಮಾಡಬೇಕು. ಇಲ್ಲದಿದ್ದರೆ ಮೊದಲಿನಂತೆ ಪ್ರತಿನಿತ್ಯ ಬೆಳಿಗ್ಗೆ ತೆಗೆದು ಕಳುಹಿಸುವ ವ್ಯವಸ್ಥೆ ಮಾಡಬೇಕು. ಕೆಲಸ ಮಾಡಿದ ನಂತರ ಕಾರ್ಮಿಕರಿಗೆ ಮತ್ತು ರೈತರಿಗೆ ವಿಳಂಬವಿಲ್ಲದೆ ಹಣ ನೀಡುವ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

# ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗಕ್ಕಿಲ್ಲ ಅಧ್ಯಕ್ಷರ ಭಾಗ

• ಉದಯವಾಹಿನಿ, ರಾಮನಗರ

ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸ್ಥಾಪಿಸಿರುವ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಒಂದೂವರೆ ವರ್ಷದಿಂದ ಅಧ್ಯಕ್ಷರು, ಸದಸ್ಯರ ಭಾಗ್ಯವಿಲ್ಲವಾಗಿದೆ. ಫೆಬ್ರುವರಿಯಲ್ಲಿ ಆಯೋಗದ ಅಧ್ಯಕ್ಷರನ್ನಾಗಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಕಾಂಗ್ರೆಸ್ ಮುಖಂಡರಾದ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಸವಿತಾ ರಘು ಅವರನ್ನು ಸರ್ಕಾರ ಎರಡು ವರ್ಷದ ಅವಧಿಗೆ ನೇಮಿಸಿತ್ತು. ಆದರೆ, ಅವರು ಅಧಿಕಾರ ವಹಿಸಿಕೊಳ್ಳಲಿಲ್ಲ. ಹೀಗಾಗಿ, ಸಮಾಜ ಕಲ್ಯಾಣ ಇಲಾಖೆ ಸಚಿವರ ಹೆಗಲಿಗೆ ಈ ಹೊಣೆ ಬಿದ್ದಿದೆ. ಆಯೋಗಕ್ಕೆ ಅಧ್ಯಕ್ಷರಾಗಿರುವ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹದೇವಪ್ಪ ಇದುವರೆಗೆ ಆಯೋಗದಲ್ಲಿ ಒಂದೇ ಒಂದು ಸಭೆ ನಡೆಸಿಲ್ಲ. ಯಾವ ಜಿಲ್ಲೆಗೂ ಭೇಟಿ ಮಾಡಿ ಸಫಾಯಿ ಕರ್ಮಚಾರಿಗಳು, ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ಪರಿಸ್ಥಿತಿ ಪ್ರಗತಿ ಪರಿಶೀಲನೆ ನಡೆಸಿಲ್ಲ. ಕಟ್ಟಕಡೆಯ ಸಮುದಾಯದವರ ಅಳಲು ಕೇಳುವವರೇ ಇಲ್ಲವಾಗಿದೆ ಎಂದು ಎಂದು ಸಫಾಯಿ ಕರ್ಮಚಾರಿ ಕಾವಲು ಸಮಿತಿಯ ರಾಜ್ಯ ಸಂಚಾಲಕ ಡಾ. ಕೆ.ಬಿ. ಓಬಳೇಶ ಬೇಸರ ತೋಡಿಕೊಂಡರು.

ಆಯೋಗಕ್ಕೆ ಪೂರಕವಾಗಿ ಜಿಲ್ಲಾ, ಉಪ ವಿಭಾಗದ ಮಟ್ಟದಲ್ಲಿ ಸಫಾಯಿ ಕರ್ಮಚಾರಿಗಳ ನೇಮಕಾತಿ ನಿಷೇಧ, ಪುನರ್ವಸತಿ ಅಧಿನಿಯಮ ಅನುಷ್ಠಾನಕ್ಕೆ ಸಂಬಂಧಿಸಿದ ಜಿಲ್ಲಾ ಜಾಗೃತಿ, ಉಸ್ತುವಾರಿ ಸಮಿತಿಗಳಿವೆ. ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಅಧ್ಯಕ್ಷತೆಯಲ್ಲಿ ಮೂರು ತಿಂಗಳಿಗೊಮ್ಮೆ ಸಭೆ ನಡೆಯುತ್ತದೆ.

**ಬಿಬಿಎಂಪಿಯಲ್ಲೇ ಹೆಚ್ಚು:** ಆಯೋಗದ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ ಮ್ಯಾನ್‌ಹೋಲ್, ಶೌಚಗುಂಡಿ ಹಾಗೂ ಒಳಚರಂಡಿಗೆ ಇಳಿದು ಸ್ವಚ್ಛಗೊಳಿಸುವವರು 7,483 ಮಂದಿ ಇದ್ದಾರೆ. ಈ ಪೈಕಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಅತಿ ಹೆಚ್ಚು 1,625 ಮಂದಿ ಇದ್ದಾರೆ. ಉಳಿದಂತೆ ಮೈಸೂರು ಜಿಲ್ಲೆಯಲ್ಲಿ 1,381 ಹಾಗೂ ಕೋಲಾರದಲ್ಲಿ 1,224 ಜನರಿದ್ದಾರೆ. ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಇವರ ಸಂಖ್ಯೆ ಶೂನ್ಯ. ಬೀದರ್, ಕೊಪ್ಪಳ ಹಾಗೂ ಚಿಕ್ಕಮಗಳೂರಿನಲ್ಲಿ ತಲಾ ಇಬ್ಬರಷ್ಟೇ ಇದ್ದಾರೆ ಎನ್ನುತ್ತವೆ ಆಯೋಗದ ಮೂಲಗಳು.

**ಅರೆ ನ್ಯಾಯಿಕ ಅಧಿಕಾರ**

**ಒಳಚರಂಡಿ, ಶೌಚಗುಂಡಿ, ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ಆಧುನಿಕ ಯಂತ್ರೋಪಕರಣ ಬಂದಿದ್ದರೂ ಕೈಯಿಂದಲೇ ಸ್ವಚ್ಛಗೊಳಿಸುವ ಪದ್ಧತಿ ಆಗಾಗ ಅಲ್ಲಲ್ಲಿ ವರದಿಯಾಗುತ್ತಿದೆ. ತಳ ಸಮುದಾಯಗಳಾದ ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ಜಾತಿಯವರಿಂದಲೇ ನಡೆಯುವ ಇಂತಹ ಅಮಾನವೀಯ ಪದ್ಧತಿ ಮೇಲೆ ನಿಗಾ ಇಟ್ಟು, ಕಾಯ್ದೆಯಡಿ ಕೆಲಸ ಮಾಡುವ ಆಯೋಗಕ್ಕೆ ಅರೆ ನ್ಯಾಯಿಕ ಅಧಿಕಾರವಿದೆ.**

# ಅವಜ್ಞೆಗೆ ಒಳಗಾದ ಬಯಲು ರಂಗ ಮಂದಿರದ ಹೊರಾಂಗಣ

• ಉದಯವಾಹಿನಿ, ಮೈಸೂರು


ಉದಯವಾಹಿನಿ ಚಿತ್ರ

ನಗರದ ಹೃದಯ ಭಾಗದಲ್ಲಿರುವ ಪಾರಂಪರಿಕ ಸ್ಮೃತಿಯನ್ನು ಯಾವ ಮಟ್ಟಿಗೆ ಅಳಿಸಬಹುದು, ಅವಜ್ಞೆ ತೋರಬಹುದು ಎಂಬುದಕ್ಕೆ ಪಾಲಿಕೆಗೆ ಸೇರಿರುವ ಪುರಭವನವೇ ಸಾಕ್ಷಿ. ಹೂದೋಟದಿಂದ ಕಂಗೊಳಿಸುತ್ತಿದ್ದ ಆವರಣ, ಮೂತ್ರ ವಿಸರ್ಜನೆಯ ತಾಣವಾಗಿದೆ. ರಸ್ತೆ, ಅಕ್ಕಪಕ್ಕದ ಕಟ್ಟಡ ಕಾಮಗಾರಿಗಳಿಗೆ ಬೇಕಾದ ಜಲ್ಲಿ, ಮರಳು ಸುರಿಯುವ ಸ್ಥಳವಾಗಿ ಬದಲಾಗಿದೆ. ಕಟ್ಟಡದ ಶತಮಾನೋತ್ಸವ ಸಂದರ್ಭದಲ್ಲಿ ಅಭಿವೃದ್ಧಿ ಪಡಿಸಿದ ರಂಗಾಚಾರ್ಲು ಸ್ಮಾರಕ ಮಕ್ಕಳ ಆಟದ ಮೈದಾನವೂ ತೀವ್ರ ಅಸಡ್ಡೆಗೆ ಒಳಗಾಗಿದ್ದು, ಅಲ್ಲಿ ಮಕ್ಕಳ ಆಟಿಕೆ ಪರಿಕರಗಳೇ ಮಾಯವಾಗಿವೆ.

ಜೀವಂತ ಐತಿಹಾಸಿಕ ಸ್ಮಾರಕದ ಆವರಣದ ಕೆಲಭಾಗವಷ್ಟೇ ಉದ್ಯಾನ ಉಳಿದಿದೆ. ಉಳಿದದ್ದೆಲ್ಲ ಕಸ ತುಂಬಿದೆ. ಶಾಂತಿವನ ಕರೆಯಲಾಗುತ್ತಿದ್ದ ಭಾಗದಲ್ಲಿ ಪಾರಂಪರಿಕ ಶೌಚಾಲಯವನ್ನು ಪಾಲಿಕೆ ಕಟ್ಟಿದೆ. ಅದರ ಹಿಂಭಾಗದಲ್ಲಿಯೇ ಅನೈರ್ಮಲ್ಯ ತಾಂಡವವಾಡುತ್ತಿದೆ. ಕೆಲವರು ಕಾರು, ಸ್ಕೂಟರ್ ನಿಲ್ಲಿಸುವ ತಾಣವನ್ನಾಗಿ ಮಾಡಿಕೊಂಡಿದ್ದು, ಅವರನ್ನು ಕೇಳುವವರು ಯಾರೂ ಇಲ್ಲ. ಕಳೆ ತುಂಬಿದ ಬಯಲು ರಂಗಮಂದಿರ ಆವರಣಕ್ಕೆ ಹೊಂದಿಕೊಂಡಂತೆ ಹೊಸದಾಗಿ ನಿರ್ಮಾಣ ಮಾಡಿರುವ ಬಯಲು ರಂಗಮಂದಿರದಲ್ಲೂ ಕಳೆಸಸ್ಯಗಳು ಬೆಳೆದಿವೆ. ಕಳೆದ ಒಂದು ವರ್ಷದಿಂದ ಬಯಲು ರಂಗಮಂದಿರದಲ್ಲಿ ಯಾವುದೇ ಕಾರ್ಯಕ್ರಮವೂ ನಡೆದಿಲ್ಲ. 2023ರ ಕೊನೆಯಲ್ಲಿ ಒಂದು ಸನ್ಮಾನ ಕಾರ್ಯಕ್ರಮ ನಡೆದಿತ್ತಷ್ಟೇ' ಎನ್ನುತ್ತಾರೆ ಕಲಾಭಿಮಾನಿ ಚೋರನಹಳ್ಳಿ ಮೂರ್ತಿ.

**ಪಟ್ಟ ತಪ್ಪಿದ ಕಾರಣ ಇಲ್ಲೇ ಇದೆ:** ಸ್ವಚ್ಛ ನಗರಿಯ ಗರಿಯು ಎಲ್ಲಿ ತಪ್ಪಿ ಹೋಯಿತು ಎಂಬುದರ ವಿಮರ್ಶೆಯನ್ನು ಪಾಲಿಕೆ ಅಧಿಕಾರಿಗಳು 10 ವರ್ಷದಿಂದ ಮಾಡುತ್ತಲೇ ಇದ್ದಾರೆ. ಸತತವಾಗಿ ಇಂದೋರ್‌ಗೇಕೆ ಸ್ವಚ್ಛ ನಗರಿಯ ಪಟ್ಟ ಸಿಗುತ್ತದೆಂದು ಅರ್ಥ ಮಾಡಿಕೊಳ್ಳಲು ಪಾಲಿಕೆ ಕೆಲ ವರ್ಷದ ಹಿಂದೆ ನಿಯೋಗವೊಂದನ್ನೂ ಕಳುಹಿಸಿತ್ತು.

ಒಂದು ಕಾಲದಲ್ಲಿ ವಿದೇಶಿ ಪ್ರವಾಸಿಗರು ದಸರೆಗೆ ಬಂದಾಗ ಸಾವಿರಾರು ಸಂಖ್ಯೆಯಲ್ಲಿ ಬರುತ್ತಿದ್ದರು. ಅರಮನೆಯಷ್ಟೇ ಅಲ್ಲದೇ ಪಾರಂಪರಿಕ ಕಟ್ಟಡಗಳನ್ನು ಕಣ್ಣುಂಬಿಕೊಳ್ಳುತ್ತಿದ್ದರು. ಒಂದೊಂದೇ ಸ್ಮಾರಕವು ಅವಸಾನದತ್ತ ಸಾಗುತ್ತಿದೆ. ಉಳಿದ ಕೆಲವೇ ಕಟ್ಟಡಗಳು ಉರುಳಿದರೆ ಪಾರಂಪರಿಕ ನಗರಿ ಉಳಿಯುವುದೆಲ್ಲಿ' ಎಂದು ಪ್ರಶ್ನಿಸಿದರು.

**ಅರಮನೆಗೆ ಕೆಲವೇ ಮೀಟರ್‌ಗಳ ದೂರವಿರುವ ಈ ಕಟ್ಟಡದ ನಿರ್ವಹಣೆ ಕಣ್ಣೆದುರೇ ಕಾಣುವಾಗ, ಪಟ್ಟ ತಪ್ಪಿಹೋದ ಕಾರಣ ಅರ್ಥ ಮಾಡಿಕೊಳ್ಳಲು ದಶಕ ಬೇಕೆ' ಎಂದು ಕೇಳುತ್ತಾರೆ.**

**- ಪ್ರೊ.ಎನ್.ಎಸ್.ರಂಗರಾಜು. ಇತಿಹಾಸ ತಜ್ಞ**

# ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಧುಗಿರಿ

ತಾಲ್ಲೂಕಿನ ದೊಡ್ಡೇರಿ ಹೋಬಳಿಯ ಹಾಳಾಗಿರುವ ಎಲ್ಲಾ ರಸ್ತೆಗಳನ್ನು ಶೀಘ್ರ ಅಭಿವೃದ್ಧಿಪಡಿಸಲಾಗುವುದು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಭರವಸೆ ನೀಡಿದರು. ತಾಲ್ಲೂಕಿನ ದೊಡ್ಡ, ಕಸಬಾ ಹೋಬಳಿಯ 7 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಈ ಭಾಗದ ಕೆಲ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿರುವುದನ್ನು ಮನಗಂಡು ರಸ್ತೆ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ಸಾರ್ವಜನಿಕರಿಗೆ ತೊಂದರೆ ಆಗದಂತೆ ಗುಣಮಟ್ಟದ ಕಾಮಗಾರಿ ಮಾಡಬೇಕು ಎಂದರು.

ಶೀಘ್ರದಲ್ಲೇ ಕವಣದಾಲ ಗ್ರಾಮದಲ್ಲಿ ವಿದ್ಯುತ್ ಉಪಕೇಂದ್ರ ಕಾಮಗಾರಿ ಪ್ರಾರಂಭಿಸಲಾಗುವುದು. ತಾಲ್ಲೂಕಿನ ಕೆ.ಟಿ.ಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಪ್ರಾರಂಭ ಮಾಡುವಂತೆ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗೆ ಸೂಚಿಸಿದರು.

ಪಟ್ಟಣದಲ್ಲಿ 75.15 ಲಕ್ಷ ವೆಚ್ಚದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಉದ್ಘಾಟನೆ, ರಂಗಾಪುರ ಗೊಲ್ಲರಹಟ್ಟಿ, ಹುಣಸೆ ಮರದ ಹಟ್ಟಿ, ಕಾಟಗಾನಹಟ್ಟಿ ಗ್ರಾಮದಲ್ಲಿ ತಲಾ 30 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು.

# ಕೊಲೆ ಪ್ರಕರಣ; ನಾಲ್ವರಿಗೆ ಜೀವಾವಧಿ ಶಿಕ್ಷೆ

• ಉದಯವಾಹಿನಿ, ಕೋಲಾರ

ವ್ಯಕ್ತಿಯೊಬ್ಬರನ್ನು ಕೊಲೆ ಮಾಡಿದ ಆರೋಪ ಸಾಬೀತಾಗಿದ್ದು, ಜಿಲ್ಲಾ ನ್ಯಾಯಾಲಯವು ನಾಲ್ವರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. 2017ರಲ್ಲಿ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಪುಂಗನೂರು ಕ್ರಾಸ್ ಬಳಿ ನಿವೇಶನ ವಿಚಾರವಾಗಿ ನಡೆದಿದ್ದ ಕೊಲೆ ಪ್ರಕರಣ ಇದಾಗಿದೆ. ಆಂಧ್ರಪ್ರದೇಶದ ಪುಂಗನೂರು ಮೂಲದ ಅಗಸ್ತ್ಯ ರೆಡ್ಡಿ (84) ಎಂಬುವರನ್ನು ಕೊಲೆ ಮಾಡಲಾಗಿತ್ತು. ಶ್ರೀನಿವಾಸಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಾಲ್ವರು ಆರೋಪಿಗಳಾದ ರಜನಿಕುಮಾರ್, ಕೃಷ್ಣಾರೆಡ್ಡಿ, ಸುಬ್ರಮಣ್ಯಂ, ಜ್ಯೋತಿಷವರ್ ಜೀವಾವಧಿ ಶಿಕ್ಷೆ ಒಳಗಾಗಿದ್ದಾರೆ. ಜೊತೆಗೆ ತಲಾ 25 ಸಾವಿರ ದಂಡ ವಿಧಿಸಲಾಗಿದೆ. ಕೋಲಾರ ಜಿಲ್ಲಾ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಈ ಆದೇಶ ಹೊರಡಿಸಿದೆ.

ಅಗಸ್ತ್ಯ ರೆಡ್ಡಿ ಪತ್ನಿ ಲಕ್ಷ್ಮಮ್ಮ, ಮಗ ಮಾಧವ ರೆಡ್ಡಿ ಶ್ರೀನಿವಾಸಪುರ ಪೋಲಿಸರಿಗೆ ದೂರು ಸಲ್ಲಿಸಿದ್ದರು. ಶ್ರೀನಿವಾಸಪುರ ಪೊಲೀಸರು ಆರೋಪಿಗಳನ್ನ ಬಂಧಿಸಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಸಂತ್ರಸ್ತರ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ವಿ.ಎಸ್. ರಮೇಶ್ ವಾದ ಮಂಡಿಸಿದ್ದರು. ಸತತ 8 ವರ್ಷ ವಿಚಾರಣೆ ನಡೆಸಿ 38 ಸಾಕ್ಷಿಗಳನ್ನ ಪರಿಗಣಿಸಿ ಈ ಆದೇಶ ಹೊರಡಿಸಲಾಗಿದೆ. ಆರೋಪಿಗಳ ವಿರುದ್ಧ ವಿವಿಧೆಡೆ ಇನ್ನೂ ಕೆಲ ಪ್ರಕರಣಗಳು ದಾಖಲಾಗಿವೆ ಎಂಬುದು ಗೊತ್ತಾಗಿದೆ. ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ.

# ಮತ್ತೊಂದು ತಡೆಗೋಡೆಯಲ್ಲಿ ಬಿರುಕು; ಸ್ಥಳೀಯರಲ್ಲಿ ಆತಂಕ

## ಐದು ವರ್ಷಗಳ ಕಾಲ ಪೂರ್ಣಗೊಂಡಿದ್ದ ಬಹುಕೋಟಿ ವೆಚ್ಚದ ಮತ್ತೊಂದು ತಡೆಗೋಡೆ ಈಗ ಕುಸಿಯುವ ಭೀತಿ

• ಉದಯವಾಗಹಿನಿ, ಮಡಿಕೇರಿ


ಉದಯವಾಹಿನಿ ಚಿತ್ರ

2018ರಲ್ಲಿ ಭೂಕುಸಿತ ಸಂಭವಿಸಿದ್ದ ಮಂಗಳೂರು–ಮಡಿಕೇರಿ ರಾಷ್ಟ್ರೀಯ ಹೆದ್ದಾರಿ 275 ರಲ್ಲಿ ಮೊದಲ ಬಾರಿಗೆ ಮತ್ತೆ ಕುಸಿಯುವ ಭೀತಿ ಎದುರಾಗಿದೆ. ಸುಮಾರು ಐದು ವರ್ಷಗಳ ಕಾಲ ಪೂರ್ಣಗೊಂಡಿದ್ದ ಬಹುಕೋಟಿ ವೆಚ್ಚದ ಮತ್ತೊಂದು ತಡೆಗೋಡೆ ಈಗ ಕುಸಿಯುವ ಭೀತಿ ಎದುರಿಸುತ್ತಿದೆ. ಈ ತಡೆಗೋಡೆಯಲ್ಲಿ ದೊಡ್ಡ ಬಿರುಕುಗಳು ಕಾಣಿಸಿಕೊಂಡಿದ್ದು, ಈ ತಡೆಗೋಡೆಯ ಕೆಳಗೆ ವಾಸಿಸುವ ನಿವಾಸಿಗಳನ್ನು ಮಡಿಕೇರಿಯಲ್ಲಿರುವ ಪರಿಹಾರ ಕೇಂದ್ರಕ್ಕೆ ಸ್ಥಳಾಂತರಿಸಲು ಕೇಳಲಾಗಿದೆ. ಕೊಡಗು ಜಿಲ್ಲೆಯಲ್ಲಿ 2018ರಲ್ಲಿ ಸಂಭವಿಸಿದ ಜಲಸ್ಫೋಟ ಮತ್ತು ಭೂಕುಸಿತದಲ್ಲಿ ಹಲವು ಪ್ರದೇಶಗಳು ಅಪಾಯಕ್ಕೆ ಸಿಲುಕಿದ್ದವು. ಮಡಿಕೇರಿ ನಗರದ ಸಮೀಪ ಮಂಗಳೂರಿಗೆ ತೆರಳುವ ಹೆದ್ದಾರಿ ಕೂಡ ಕುಸಿದು ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಪ್ರತಿವರ್ಷ ಭೂಕುಸಿತ ಉಂಟಾಗುವ ಅಪಾಯವಿದ್ದ ಕಾರಣ ಸರ್ಕಾರ ಬೃಹತ್ ತಡೆಗೋಡೆಯನ್ನು ನಿರ್ಮಿಸಿತ್ತು. ಆದರೆ ಕಳೆದ ಒಂದು ತಿಂಗಳಿನಿಂದ ಮಡಿಕೇರಿ ತಾಲ್ಲೂಕಿನಲ್ಲಿ ಗಾಳಿ ಸಹಿತ ಧಾರಾಕಾರ ಮಳೆಯಾಗುತ್ತಿರುವುದರಿಂದ ಮಂಗಳೂರು ರಸ್ತೆಯ ಮತ್ತೊಂದು ತಡೆಗೋಡೆಯಲ್ಲಿ ಬಿರುಕು ಕಾಣಿಸಿಕೊಂಡಿದೆ. ತಾತ್ಕಾಲಿಕ ಪರಿಹಾರ ಕಾರ್ಯಗಳಿಗಾಗಿ ಕೋಟ್ಯಂತರ ಹಣವನ್ನು ಮಂಜೂರು ಮಾಡಲಾಗಿದ್ದರೂ, ರಾಷ್ಟ್ರೀಯ ಹೆದ್ದಾರಿ ಕುಸಿಯುವ ಭೀತಿಯನ್ನು ಎದುರಿಸುತ್ತಿದೆ. ಪ್ರತಿ ಮಳೆಗಾಲದಲ್ಲಿ ಪ್ರಯಾಣಿಕರಿಗೆ ಅಪಾಯವನ್ನುಂಟುಮಾಡುತ್ತದೆ.

ಈ ಹೆದ್ದಾರಿಯು ಜಿಲ್ಲಾಧಿಕಾರಿ ಕಚೇರಿಯ ಹಿಂಭಾಗದ 7.5 ಕೋಟಿ ರೂ. ವೆಚ್ಚದ ತಡೆಗೋಡೆ ಸೇರಿದಂತೆ ಹಲವಾರು ತಡೆಗೋಡೆಗಳಿಂದ ಕೂಡಿದೆ. ಅದು ಕುಸಿಯುವ ಭೀತಿಯನ್ನು ಎದುರಿಸುತ್ತಿದೆ ಮತ್ತು ಪ್ರಸ್ತುತ ಅದನ್ನು ಬಲಪಡಿಸಲಾಗುತ್ತಿದೆ. ಇದಲ್ಲದೆ, ಈ ರಸ್ತೆಯಲ್ಲಿರುವ ಮತ್ತೊಂದು ತಡೆಗೋಡೆ ಮಡಿಕೇರಿ ನಗರ ಕೇಂದ್ರದಿಂದ ಸುಮಾರು 4 ಕಿ.ಮೀ ದೂರದಲ್ಲಿದೆ.

2018ರಲ್ಲಿ ರಸ್ತೆಯಲ್ಲಿ ದೊಡ್ಡ ಭೂಕುಸಿತದ ನಂತರ ಮಂಜೂರಾತಿ ನೀಡಲಾಯಿತು. ನಂತರ ಈ ದುರ್ಬಲ ಸ್ಥಳದಲ್ಲಿ ಸಾವಿರಾರು ಮರಳು ಚೀಲಗಳನ್ನು ಸಾಲುಗಟ್ಟಿ ತಡೆಗೋಡೆ ನಿರ್ಮಾಣಕ್ಕಾಗಿ ಕೋಟ್ಯಂತರ ಹಣವನ್ನು ಬಿಡುಗಡೆ ಮಾಡಲಾಯಿತು.

ಈ ಯೋಜನೆ ಮಂಜೂರಾದ ಐದು ವರ್ಷಗಳ ನಂತರ, ತಡೆಗೋಡೆ 2023ರಲ್ಲಿ ಶೇ.100 ರಷ್ಟು ಪೂರ್ಣಗೊಂಡಿತ್ತು. ಆದಾಗ್ಯೂ, ಪೂರ್ಣಗೊಂಡ ಕೇವಲ ಎರಡು ವರ್ಷಗಳ ನಂತರ, ತಡೆಗೋಡೆಯ ಮೇಲೆ ಬೃಹತ್ ಬಿರುಕುಗಳು ಕಾಣಿಸಿಕೊಂಡಿದ್ದು, ಅದು ಕುಸಿಯುವ ಅಪಾಯದಲ್ಲಿದೆ. ಬಿರುಕುಗಳು ಅಭಿವೃದ್ಧಿಗೊಂಡ ನಂತರ, ಮಡಿಕೇರಿ ತಾಲ್ಲೂಕು ತಹಶೀಲ್ದಾರ್ ಸ್ಥಳಕ್ಕೆ ಭೇಟಿ ನೀಡಿ ತಡೆಗೋಡೆಯ ಕೆಳಗೆ ವಾಸಿಸುವ ಕುಟುಂಬಗಳನ್ನು ಪರಿಹಾರ ಕೇಂದ್ರಕ್ಕೆ ಸ್ಥಳಾಂತರಿಸುವಂತೆ ವಿನಂತಿಸಿದರು.

**ಅಧಿಕಾರಿಗಳು ದೌಡು:** ಇಂದು ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳು ಸುರಕ್ಷತೆಯ ದೃಷ್ಟಿಯಿಂದ ತಡೆಗೋಡೆ ಕೆಳಭಾಗದ ನಿವಾಸಿಗಳನ್ನು ರೆಡ್ ಕ್ರಾಸ್ ಸಂಸ್ಥೆಯ ಭವನಕ್ಕೆ ಸ್ಥಳಾಂತರಿಸಿದ್ದಾರೆ. ರೆಡ್ ಕ್ರಾಸ್ ಭವನದಲ್ಲಿ ಆಶ್ರಯ ಪಡೆದಿರುವ ನಿವಾಸಿಗಳನ್ನು ಕಂದಾಯ ಇಲಾಖೆ ಹಾಗೂ ನಗರಸಭೆಯ ಅಧಿಕಾರಿಗಳು ಭೇಟಿ ಮಾಡಿ ಧೈರ್ಯ ತುಂಬಿದರು. ಊಟ, ಉಪಹಾರ ಸೇರಿದಂತೆ ಮೂಲಭೂತ ಸೌಲಭ್ಯವನ್ನು ಕಲ್ಪಿಸಲಾಗಿದೆ.

**ಸ್ಥಳೀಯರ ಆರೋಪ**

**ಈ ಮಧ್ಯೆ, ಕಳಪೆ ಗುಣಮಟ್ಟದ ಕೆಲಸಕ್ಕಾಗಿ ಸ್ಥಳೀಯರು ಅಧಿಕಾರಿಗಳ ವಿರುದ್ಧ ಧ್ವನಿ ಎತ್ತಿದರು ಮತ್ತು ಸಂಬಂಧಪಟ್ಟ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಜಿಲ್ಲಾಧಿಕಾರಿ ವೆಂಕಟ್ ರಾಜಾ ಸ್ಥಳಕ್ಕೆ ಭೇಟಿ ನೀಡಿ ತಡೆಗೋಡೆಯನ್ನು ಪರಿಶೀಲಿಸಿದರು.**

**ಭಾರಿ ವಾಹನಗಳಿಗೆ ನಿಷೇಧ**

**ತಡೆಗೋಡೆಯಲ್ಲಿ ಬಿರುಕು ಕಾಣಿಸಿಕೊಂಡ ಹಿನ್ನೆಲೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪೊಲೀಸ್ ಅಧಿಕಾರಿಗಳು ಕೂಡ ಸ್ಥಳಕ್ಕೆ ಭೇಟಿ ನೀಡಿ ಬ್ಯಾರಿಕೇಡ್ ಗಳನ್ನು ಅಳವಡಿಸುವ ಮೂಲಕ ವಾಹನಗಳ ಸುರಕ್ಷಿತ ಮತ್ತು ಸುಗಮ ಸಂಚಾರಕ್ಕೆ ಕ್ರಮ ಕೈಗೊಂಡಿದ್ದಾರೆ. ಇನ್ನು ಮುಂಜಾಗ್ರತಾ ಕ್ರಮವಾಗಿ ಈ ರಸ್ತೆಯಲ್ಲಿ ಭಾರಿ ವಾಹನಗಳಿಗೆ ನಿಷೇಧ ಹೇರಲಾಗಿದೆ.**

# ಮೀಸಲು ಅರಣ್ಯ ಘೋಷಣೆಗೆ ವಿರೋಧ: ಗರಿಗುಡ್ಡ ಕಾವಲು ರೈತರಿಂದ ಪ್ರತಿಭಟನೆ

• ಉದಯವಾಹಿನಿ, ಪಿರಿಯಾಪಟ್ಟಣ

ತಾಲ್ಲೂಕಿನ ಗರಿಗುಡ್ಡ ಕಾವಲು ಗ್ರಾಮದ ಸರ್ವೆ ನಂಬರ್ 94ರ ಜಮೀನನ್ನು ಅರಣ್ಯ ಇಲಾಖೆಯು ಮೀಸಲು ಅರಣ್ಯ ಎಂದು ಘೋಷಿಸಿರುವುದನ್ನು ವಿರೋಧಿಸಿ ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಕಾರ್ಯಕರ್ತರು, ರಾಜನ ಬಿಲಗುಲಿ ಗ್ರಾಮಸ್ಥರು ತಾಲ್ಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು. ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಜಿಲ್ಲಾಧ್ಯಕ್ಷ ಕಾಂತರಾಜ್ ಮಾತನಾಡಿ, ಈ ಜಮೀನಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸೇರಿದ ರೈತರು ಸುಮಾರು 70 ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ.

ಈ ಜಮೀನುಗಳಿಗೆ ಸರ್ಕಾರವು ಈಗಾಗಲೇ ಸಾಗುವಳಿ ನೀಡಿದೆ. ಅಂದಾಜು 300 ಕುಟುಂಬಗಳು ಜೀವನ ನಿರ್ವಹಿಸುತ್ತಿವೆ ಎಂದರು. ಇದರ ಆಧಾರದ ಮೇಲೆ ಎಲ್ಲಾ ರೈತರು ಬ್ಯಾಂಕುಗಳಲ್ಲಿ ಸಾಲ ಪಡೆದು ಜೀವನ ನಡೆಸುತ್ತಿದ್ದಾರೆ. ಆದರೆ ಇತ್ತೀಚೆಗೆ ಅರಣ್ಯ ಇಲಾಖೆಯವರು ಗರಿಗುಡ್ಡ ಕಾವಲು ಗ್ರಾಮವನ್ನು ಮೀಸಲು ಅರಣ್ಯ ಪ್ರದೇಶವೆಂದು ಘೋಷಣೆ ಮಾಡಿ ಎಲ್ಲಾ ರೈತರಿಗೆ ನೋಟಿಸ್ ನೀಡಿ ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿದ್ದು ಸರ್ಕಾರವು ಈ ಆದೇಶವನ್ನು ಹಿಂಪಡೆದು ರೈತರಿಗೆ ಅನುಕೂಲ ಮಾಡಿಕೊಡಬೇಕು, ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಅಂತರಾಳದಿಂದ..

EDITORIAL

# ಯೂರಿಯಾ: ರಾಜಕೀಯ ಬಿಡಿ ರೈತರ ಸಮಸ್ಯೆಗೆ ಪರಿಹಾರ ಕೊಡಿ




ರಾಜ್ಯದ ವಿವಿಧ ಭಾಗಗಳಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಕೃಷಿ ಚಟುವಟಿಕೆಗಳು ಗರಿಗೆದರಿವೆ. ಆದರೆ, ಪ್ರತಿ ಮುಂಗಾರಿನಲ್ಲಿ ತಲೆದೋರುವ ರಸಗೊಬ್ಬರದ ಕೊರತೆ ಈ ಬಾರಿಯೂ ಮರುಕಳಿಸಿದೆ; ರೈತರನ್ನು ಕಂಗೆಡಿಸಿದೆ. ಕೆಲವೆಡೆ, ಬಿತ್ತನೆಬೀಜದ ಕೊರತೆಯೂ ಕಾಣಿಸಿಕೊಂಡಿದೆ. ಬಾಗಲಕೋಟೆ, ಕೊಪ್ಪಳ, ದಾವಣಗೆರೆ, ಧಾರವಾಡ ಸೇರಿದಂತೆ ವಿವಿಧ ಜಿಲ್ಲೆಗಳ ರೈತರು ರಸಗೊಬ್ಬರದ ಕೊರತೆಯಿಂದಾಗಿ ತೊಂದರೆ ಅನುಭವಿಸುತ್ತಿದ್ದಾರೆ. ಅಗತ್ಯ ಪ್ರಮಾಣದಲ್ಲಿ ರಸಗೊಬ್ಬರ ದೊರೆಯದ ಕಾರಣದಿಂದಾಗಿ ಕೆಲವೆಡೆ ರೈತರು ಪ್ರತಿಭಟನೆ ನಡೆಸಿದ್ದಾರೆ. ಕೊಪ್ಪಳ ಜಿಲ್ಲೆಯ ರೈತರೊಬ್ಬರು ರಸಗೊಬ್ಬರ ಸಿಗದ ಕಾರಣಕ್ಕೆ ಮಣ್ಣು ತಿಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರೈತರ ಪರವಾಗಿ ಬಿಜೆಪಿ ನಾಯಕರೂ ದನಿಯೆತ್ತಿದ್ದು, ರಸಗೊಬ್ಬರದ ಸಮರ್ಪಕ ಹಂಚಿಕೆಯಲ್ಲಿ ವಿಫಲವಾಗಿರುವ ರಾಜ್ಯ ಸರ್ಕಾರದ ವಿರುದ್ಧ ಹರಿಹಾಯುತ್ತಿದ್ದಾರೆ. ರಾಜ್ಯದ ಕೃಷಿ ಇಲಾಖೆ ಸೂಕ್ತ ಪೂರ್ವಸಿದ್ಧತೆ ಮಾಡಿಕೊಳ್ಳದ ಕಾರಣದಿಂದಾಗಿ ಸಮಸ್ಯೆ ಸೃಷ್ಟಿಯಾಗಿದೆ ಹಾಗೂ ದಾಸ್ತಾನು ಇರುವ ಗೊಬ್ಬರವನ್ನು ಅವಶ್ಯಕತೆ ಆಧಾರದ ಮೇಲೆ ಹಂಚಿಕೆ ಮಾಡುತ್ತಿಲ್ಲ ಎನ್ನುವುದು ಬಿಜೆಪಿ ನಾಯಕರ ಆರೋಪ. 63 ರಸಗೊಬ್ಬರ ವಿತರಣೆಯಲ್ಲಿ ಭ್ರಷ್ಟಾಚಾರ ನಡೆದಿದೆ. ಸಣ್ಣ, ಅತಿಸಣ್ಣ ರೈತರು ಸರತಿ ಸಾಲಲ್ಲಿ ನಿಂತಿರುವಾಗಲೇ, ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಯೂರಿಯಾ ಮಾರಾಟ ನಡೆಯುತ್ತಿದೆ ಎಂದೂ ಬಿಜೆಪಿ ಆರೋಪಿಸಿದೆ.

**ಏಪ್ರಿಲ್‌ನಿಂದ ಜುಲೈವರೆಗಿನ ಅವಧಿಯಲ್ಲಿ ರಾಜ್ಯಕ್ಕೆ 6.80 ಲಕ್ಷ ಟನ್ ಯೂರಿಯಾ ಅಗತ್ಯವಿದೆ: ಅದರಲ್ಲಿ 5.16 ಲಕ್ಷ ಟನ್ ಮಾತ್ರ ಕೇಂದ್ರ ಸರ್ಕಾರದಿಂದ ಪೂರೈಕೆಯಾಗಿದ್ದು, 1.65 ಲಕ್ಷ ಟನ್ ಯೂರಿಯಾ ಪೂರೈಕೆ ಬಾಕಿಯಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಪ್ರತಿಭಟನೆಯ ರಾಜಕೀಯ ಕೈಬಿಟ್ಟು, ಕೇಂದ್ರದಿಂದ ರಾಜ್ಯಕ್ಕೆ ಹೆಚ್ಚಿನ ರಸಗೊಬ್ಬರ ಕೊಡಿಸಬೇಕು ಎಂದೂ ಕಾಂಗ್ರೆಸ್ ಮುಖಂಡರು ಹೇಳಿದ್ದಾರೆ.**

ಇದಕ್ಕೆ ಪ್ರತಿಯಾಗಿ, ರಸಗೊಬ್ಬರದ ಸಮಸ್ಯೆಗೆ ಕೇಂದ್ರ ಸರ್ಕಾರವೇ ಕಾರಣವೆಂದು ರಾಜ್ಯ ಸರ್ಕಾರ ಹೇಳಿದೆ. ರಸಗೊಬ್ಬರದ ಕೊರತೆ ಈ ಮುಂಗಾರಿಗೆ ಸೀಮಿತವಾದ ಸಮಸ್ಯೆಯಲ್ಲ. ಬಿತ್ತನೆಬೀಜ ಮತ್ತು ಗೊಬ್ಬರ ಸಮಯಕ್ಕೆ ಸರಿಯಾಗಿ, ಅಗತ್ಯ ಪ್ರಮಾಣದಲ್ಲಿ ದೊರೆಯದೆ ರೈತರು ಸಮಸ್ಯೆಗೆ ಸಿಲುಕುವುದು ಪ್ರತಿ ಮುಂಗಾರಿನ ವಾರ್ಷಿಕ ವಿದ್ಯಮಾನ ಎನ್ನುವಂತಾಗಿದೆ. ಬೀಜ ಮತ್ತು ಗೊಬ್ಬರ ದೊರೆಯದೆ ಆಕ್ರೋಶಗೊಂಡಿದ್ದ ರೈತರ ಮೇಲೆ 2008ರಲ್ಲಿ ಗೋಲಿಬಾರ್ ನಡೆದು, ಇಬ್ಬರು ರೈತರು ಮೃತಪಟ್ಟ ಘಟನೆ ಹಾವೇರಿಯಲ್ಲಿ ನಡೆದಿತ್ತು. ಆ ರೈತರ ಸಾವಿನಿಂದ ಆಡಳಿತ ಯಂತ್ರ ಪಾಠ ಕಲಿತಂತಿಲ್ಲ. ತಪ್ಪುಗಳನ್ನು ಸರಿಪಡಿಸಿಕೊಂಡು, ಸಮಯಕ್ಕೆ ಸರಿಯಾಗಿ ರೈತರಿಗೆ ಗೊಬ್ಬರ ಒದಗಿಸಲು ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸಿಲ್ಲ. ರೈತರಿಗೆ ರಸಗೊಬ್ಬರ ಒದಗಿಸುವಲ್ಲಿ ಯಾವ ಪಕ್ಷವೂ ಪ್ರಾಮಾಣಿಕತೆಯಿಂದ ವರ್ತಿಸಿಲ್ಲ. ಈಗಲೂ ಆಡಳಿತ ಮತ್ತು ಪ್ರತಿಪಕ್ಷಗಳು ಆರೋಪ ಪ್ರತ್ಯಾರೋಪಗಳ ಶಕ್ತಿ ಪ್ರದರ್ಶನದಲ್ಲಿ ತೊಡಗಿವೆ. ಸಂಕಷ್ಟದ ಸಮಯದಲ್ಲಿ ಕ್ಷುಲ್ಲಕ ರಾಜಕಾರಣ ಮಾಡುವುದನ್ನು ಬಿಟ್ಟು, ರೈತರಿಗೆ ರಸಗೊಬ್ಬರ ದೊರಕಿಸಿಕೊಡುವುದು ಆದ್ಯತೆಯ ಕೆಲಸ ಎನ್ನುವುದನ್ನು ಮರೆತಿವೆ. ಯೂರಿಯಾ ಬಿಕ್ಕಟ್ಟಿಗೆ, ಭ್ರಷ್ಟಾಚಾರ ಹಾಗೂ ರಸಗೊಬ್ಬರ ತಯಾರಿಕಾ ಕಂಪನಿಗಳ ದುರಾಸೆಯೂ ಕಾರಣ ಎಂದು ಹೇಳಲಾಗುತ್ತಿದೆ. ಯೂರಿಯಾ ಜೊತೆಗೆ ಇತರ ಉಪ ಉತ್ಪನ್ನಗಳನ್ನು ಖರೀದಿಸುವಂತೆ ಮಾರಾಟಗಾರರು ರೈತರನ್ನು ಒತ್ತಾಯಿಸುತ್ತಿದ್ದು, ಯೂರಿಯಾ ಒಂದೇ ಬೇಕಾದರೆ ದುಪ್ಪಟ್ಟು ದರ ಕೇಳುತ್ತಿದ್ದಾರೆ ಎನ್ನುವ ವರದಿಗಳಿವೆ. ಯೂರಿಯಾ ಜೊತೆಗೆ ನ್ಯಾನೊ ಯೂರಿಯಾ ಹಾಗೂ ನ್ಯಾನೊ ಡಿಎಪಿ ಖರೀದಿಯನ್ನು ಕೆಲವು ಕಂಪನಿಗಳು ಕಡ್ಡಾಯಪಡಿಸುತ್ತಿವೆ. ಕೃತಕ ಅಭಾವವನ್ನು ಸೃಷ್ಟಿಸಿ, ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಯೂರಿಯಾ ಮಾರಲಾಗುತ್ತಿದೆ ಎನ್ನುವ ದೂರುಗಳೂ ಇವೆ. ರಸಗೊಬ್ಬರದ ಅಕ್ರಮ ದಾಸ್ತಾನು ಹಾಗೂ ಕಾಳಸಂತೆ ವ್ಯಾಪಾರದ ಬಗ್ಗೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕಾಗಿದೆ. ರಸಗೊಬ್ಬರ ಕೊರತೆಯ ಸಮಸ್ಯೆಯನ್ನು ಪರಿಹರಿಸುವುದರ ಜೊತೆಗೆ, ಹಸಿರೆಲೆ ಗೊಬ್ಬರ ಮತ್ತು ಜೈವಿಕ ಗೊಬ್ಬರಗಳ ಬಳಕೆ ಹೆಚ್ಚಿಸುವ ಸಾಧ್ಯತೆಗಳ ಕುರಿತು ಸರ್ಕಾರ, ಕೃಷಿ ಇಲಾಖೆ ಗಂಭೀರ ಚಿಂತನೆ ನಡೆಸಬೇಕಾಗಿದೆ. ಸದ್ಯದ ಸಂದರ್ಭದಲ್ಲಿ ರಸಗೊಬ್ಬರಗಳ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದು ಸಾಧ್ಯವಿಲ್ಲವಾದರೂ, ಪರ್ಯಾಯಗಳನ್ನು ಕಂಡುಕೊಳ್ಳದೆ ಹೋದರೆ ಮಣ್ಣಿನ ಫಲವತ್ತತೆ ಸಂಪೂರ್ಣ ನಶಿಸುವ ದಿನಗಳು ದೂರವಿಲ್ಲ. ಆ ದುರಂತಕ್ಕೆ ಅವಕಾಶ ಕಲ್ಪಿಸದೆ, ಪ್ರಾಕೃತಿಕವಾಗಿ ಮಣ್ಣನ್ನು ಫಲವತ್ತಾಗಿಸುವ ಸಾಧ್ಯತೆಗಳ ಬಗ್ಗೆ ರೈತ ಸಮುದಾಯಕ್ಕೆ ಜಾಗೃತಿ ಮೂಡಿಸಬೇಕಾಗಿದೆ ಹಾಗೂ ರಸಗೊಬ್ಬರಗಳ ಕನಿಷ್ಠ ಬಳಕೆಯ ಪ್ರಯತ್ನಗಳನ್ನು ಸರ್ಕಾರ ಉತ್ತೇಜಿಸಬೇಕಾಗಿದೆ.

# ರಾಮಾಯಣ



ಶ್ರೀರಾಮನಿಗೆ ಜಾಬಾಲಿಯು ಹೇಳಿದ ಚಾರ್ವಾಕನೀತಿ

• ಹಿಂದಿನ ಸಂಚಿಕೆಯಿಂದ

## 106ನೆಯ ಅಧ್ಯಾಯ

ಧರ್ಮವೇ ಸತ್ಯ. ಧರ್ಮಾರ್ಥವಾಗಿ ಸತ್ಪುರುಷರಾದ ಋಷಿಗಳಿಂದ ಧರಿಸಲ್ಪಡುವ ನಾರು ಬಟ್ಟೆಯನ್ನೂ ದಂಡ ಕಮಂಡಲುಗಳನ್ನೂ ಜಡೆಗಳನ್ನೂ ಧರಿಸುವುದೇ ಉತ್ತಮವೆಂದೆಣಿಸಿದ್ದೇನೆ. ಕ್ಷುದ್ರಬುದ್ಧಿಯುಳ್ಳವರನ್ನು ಗುರುವಾಗುಳ್ಳ ಪಾಪಿಗಳಿಂದ ಆಚರಿಸಲ್ಪಡುವ ಧರ್ಮಾಧರ್ಮಗಳಿಂದ ಮಿಶ್ರಿತವಾದ ಕ್ಷತ್ರಧರ್ಮವನ್ನು ನಾನು ತ್ಯಜಿಸುವೆನು, ಮನಸ್ಸಿನಲ್ಲಿ ಮಾಡಬಾರದೆಂದು ತೋರುವ ಕೃತ್ಯವನ್ನು ವಾಕ್ಕಿನಿಂದಲಾದರೂ ನುಡಿಯೆನು-ಕೈಯಿಂದಲಾದರೂ ಮಾಡನು. ಲಕ್ಷ್ಮಿಯೂ ಭೂಮಿಯೂ ಸತ್ಯಸಂಧನಾದ ಪುರುಷನನ್ನೇ ಬಯಸುವುವು. ಲಕ್ಷ್ಮಿಭೂಮಿ ಕೀರ್ತಿಗಳು ಸತ್ಯಸಂಧ ನಾದ ಪುರುಷನನ್ನು ಸ್ವರ್ಗದಲ್ಲಿರುವಂತೆ ನೋಡುತ್ತಿರುವುವು. ಆದಕಾರಣ ಮನುಷ್ಯನು ಸತ್ಯವನ್ನೇ ಪರಿಪಾಲಿಸಬೇಕು. ಎಲೈ ಜಾಬಾಲಿಮುನೀಶ್ವರನೆ, ನೀನು ಯುಕ್ತಿವಾಕ್ಯಗಳಿಂದ ನೀಚಕೃತ್ಯವನ್ನು ಉತ್ತಮವೆಂದು ನುಡಿದೆ.

ನನ್ನೊಡನೆ ನೀಚಕೃತ್ಯವನ್ನು ಒಳ್ಳೆಯ ಕೃತ್ಯವೆಂದು ನುಡಿದೆಯಾದರೂ ಅದು ತುಚ್ಛಕೃತ್ಯವೇ ಸರಿ. ನಾನು ನನ್ನ ತಂದೆಯಾದ ದಶರಥರಾಯನ ಆಜ್ಞೆಯನ್ನು ಪರಿಪಾಲಿಸಿ ವನವಾಸಮಾಡಲು ನಿಶ್ಚಯಿಸಿರುವುದರಿಂದ ದಶರಥರಾಜನ ಮಾತನ್ನು ಮೀರಿ ಭರತನ ಮಾತನ್ನಂಗೀ ಕರಿಸೆನು.

ಮೊದಲು ನನ್ನ ತಂದೆಯ ಸಂಮುಖದಲ್ಲಿ ಆತನ ಆಜ್ಞೆಯನ್ನು ವರಿಪಾಲಿಸವುದಾಗಿ ದೃಢವಾಗಿ ಪ್ರತಿಜ್ಞೆಯನ್ನು ಮಾಡಿದನು. ಆಗ ಕೈ ಕೇಯಾದೇವಿಯು ಸಂತುಷ್ಟ ಚಿತ್ತಳಾದಳು. ಇನ್ನು ನಾನು ವನವಾಸವನ್ನು ಮಾಡಿಕೊಂಡು ಶುಚಿಯಾಗಿ ಆಹಾರನಿಯಮವನ್ನೂ ಇಂದ್ರಿಯನಿಗ್ರಹವನ್ನೂ ಮಾಡಿ ಕೊಂಡು ಕಾಲವನ್ನು ಕಳೆಯುವೆನು. ಮನುಷ್ಯನಾಗಿ ಹುಟ್ಟಿದವನು ಈ ಕರ್ಮಭೂಮಿಯಲ್ಲಿ ತನಗೆ ಪರಲೋಕಸಾಧನವಾದ ಕರ್ಮವನ್ನೇ ಮಾಡಿಕೊಂಡು ಕವಟವಿಲ್ಲದೆ ರಾಜ್ಯಾಧಿವತ್ಯವನ್ನು ಮಾಡಿ ಕೊಂಡಿರಬೇಕು. ಲೋಕದಲ್ಲಿ ಅಗ್ನಿವಾಯು ಚಂದ್ರ ಸೂರ್ಯರು ಕರ್ಮದ ಫಲವನ್ನೇ ಅನುಭವಿಸು ತಿರುವರು.

ದೇವೇಂದ್ರನು ವಿಘ್ನವಿಲ್ಲದೆ ನೂರು ಯಜ್ಞಗಳನ್ನು ಮಾಡಿ ಸ್ವರ್ಗಲೋಕಾಧಿಪತ್ಯವನ್ನು ಪಡೆದನು. ಅನೇಕ ಮಂದಿ ಋಷಿಗಳು ಉಗ್ರವಾದ ತವಸ್ಸುಗಳನ್ನು ಮಾಡಿ ಸ್ವರ್ಗಲೋಕವನ್ನೈದಿದರು. ಎಲೈ ಜಾಬಾಲಿಯೇ ಕೇಳು. ಲೋಕದಲ್ಲಿ ಸತ್ಯ, ಪರಾಕ್ರಮ, ವ್ರತ, ಧರ್ಮ, ದಯೆ ಪ್ರಿಯವಚನ, ದೇವಬ್ರಾಹ್ಮಣಸಂತರ್ಪಣ ಮೊದಲಾದವು ಸ್ವರ್ಗಸಾಧನವೆಂದು ಸತ್ಪುರುಷರಾದ ಪುಣ್ಯಾತ್ಮರು ಹೇಳುವರು. ಆದ್ದರಿಂದ ಬ್ರಾಹ್ಮಣರು ಧರ್ಮವೇ ಸ್ವರ್ಗಸಾಧನವೆಂದೆಣಿಸಿ ಅನೇಕ ಶ್ರೇಯಸ್ಸನ್ನು ಪಡೆದು ಮರವೆಯಿಲ್ಲದೆ ಸಮಸ್ತ ಧರ್ಮಗಳನ್ನೂ ಮಾಡುತ್ತ ಸನ್ಮಾರ್ಗವನ್ನು ಬಯಸುತ್ತಿದ್ದಾರೆ. ಎಲ್ಲೆ ಜಾಬಾಲಿಮುನೀಶ್ವರನೇ, ಹೀಗಿರುವಲ್ಲಿ ನೀನು ಹೇಗೆ ನಾಸ್ತಿಕಬುದ್ಧಿಯಿಂದ ಧರ್ಮವನ್ನು ತಿರಸ್ಕರಿಸಿ ನನ್ನ ತಂದೆಯನ್ನು ನಿಂದಿಸಿ ನುಡಿಯುತ್ತಿರುವೆ ಈ ರೀತಿ ನಾಸ್ತಿಕಬುದ್ಧಿಯನ್ನು ಇತರರಿಗೆ ಉಪದೇಶಿಸುತ್ತ ತಿರುಗುವ,

ಮುಂದುವರಿಯುವುದು...

# ಶಿಕ್ಷಣ ಕೊಡಿಸುವ ಜೊತೆಗೆ ಸಂಸ್ಕಾರ ಕಲಿಸಿ

☛ ಮಾನಸಪ್ರವೀಣ್ ಭಟ್



ಆತ್ಮೀಯ ಪೋಷಕರೇ ಇಂದಿನ ನಮ್ಮ ಸ್ಪರ್ಧಾತ್ಮಕ ಜಗತ್ತಿನಲ್ಲಿ ಶಿಕ್ಷಣ ಅತೀ ಮುಖ್ಯ. ಹಾಗಾಗಿ ನಾವೂ ನಮ್ಮ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ಕೊಡಿಸಲು ಹಲವಾರು ಭಾರಿ ಯೋಚಿಸಿ. ನಮ್ಮ ಸುತ್ತ ಮುತ್ತಲು ಇರುವ ಅತ್ಯುತ್ತಮ ಶಿಕ್ಷಣ ಸಂಸ್ಥೆಯನ್ನು ಆರಿಸಿಕೊಳ್ಳುತ್ತೇವೆ. ಅದು ಸಹಜ ಅದೇ ರೀತಿ ನಮ್ಮ ಮಗುವಿಗೆ ಸರಿಯಾಗಿ ಮಾತಾಡಲು ಬಾರದದಿದ್ದರೂ ಮಗು ತೊದಲು ನುಡಿಗಳನ್ನಾಡುತ್ತಿದ್ದರು.

ಹಾಗೆಯೇ ಮಗು ಈಗಿನ್ನೂ ಮಾತು ಕಲಿಯುತ್ತಿದ್ದರು ಆ ಮಗುವಿಗೆ ಆಂಗ್ಲ ಭಾಷೆ ಕಲಿಸುವ ಭರದಲ್ಲಿ ಆ ಮಗು ಸರಿಯಾಗಿ ಮಾತು ಕಲಿಯುತ್ತಿರುವದನ್ನೇ ಮರೆಸುತ್ತಿದ್ದಾರೆ ಅಂತಹ ಹಲವು ಘಟನೆಗಳು ನಮ್ಮ ಸುತ್ತ ಮುತ್ತ ನಡೆಯುತ್ತಿವೆ. ಈಗಿನ್ನೂ ಮಾತು ಕಲಿಯಬೇಕಾದ ಎರಡರಿಂದ ಮೂರು ವರುಷದ ಮಗುವನ್ನು ಶಾಲೆಗೆ ಸೇರಿಸಿ ತಮ್ಮ ಉದ್ಯೋಗದಲ್ಲಿ ಮುಂದುವರೆಯುತ್ತಿರುವ ತಂದೆ ತಾಯಿಗಳು ಮಗುವಿನ ಭವಿಷ್ಯದ ಮೇಲೆ ಬೀರುತ್ತಿರುವ ಪರಿಣಾಮ ಗಮನಿಸುವುದಿಲ್ಲ.

ಒಟ್ಟಾರೆ ಬೃಹತ್ ಶಿಕ್ಷಣ ಸಂಸ್ಥೆಗೆ ಒಂದಿಷ್ಟು ಶುಲ್ಕ ಕಟ್ಟುತ್ತಾ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದಾರೆ. ಆದರೆ ಮಕ್ಕಳು ಯಂತ್ರಗಳ ರೀತಿ ಶಿಕ್ಷಣ ಪಡೆಯುತ್ತಿದ್ದಾರೆ ವಿನಃ



☛ ಉದಯವಾಹಿನಿ ಚಿತ್ರ

ಯಾವುದೇ ಸಂಸ್ಕಾರಗಳನ್ನು ಕಲಿಯುತ್ತಿಲ್ಲ. ಇತ್ತೀಚಿನ ದಿನದಲ್ಲಿ ಮಕ್ಕಳು ಶಿಕ್ಷರಿಗೂ ಗೌರವ ಕೊಡುವುದನ್ನು ಕಡಿಮೆ ಮಾಡಿದ್ದಾರೆ. ಇದಕ್ಕೆಲ್ಲ ನೇರ ಕಾರಣ ಪೋಷಕರೇ ಆಗಿರುತ್ತಾರೆ.

ಮಕ್ಕಳಿಗೆ ಶಿಕ್ಷಕರು ದಂಡಿಸಿದಾಗ ಆ ಮಗು ಮನೆಯಲ್ಲಿ ಹೇಳಿಕೊಂಡಾಗ. ಪೋಷಕರು ಶಿಕ್ಷಕರ ಬಗೆಗೆ ಕೇವಲವಾಗಿ ಮಾತನಾಡುವುದು ಹಾಗೂ ಅವರ ವೃತ್ತಿಯ ಬಗೆಗೆ ಕೀಳಾಗಿ ಕಾಣುವುದರಿಂದ. ಅದು ನೇರವಾಗಿ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರಿ ಮಕ್ಕಳಿಗೆ ಶಿಕ್ಷಕರ ಬಗೆಗೆ ಇರುವ ಗೌರವ ಕಡಿಮೆ ಆಗುತ್ತಿದೆ. ಹಾಗೆಯೇ ಇತ್ತೀಚಿನ ದಿನದಲ್ಲಿ ಸರಕಾರ ತಂದಿರುವ ಮಕ್ಕಳನ್ನು ದಂಡಿಸುವಂತಿಲ್ಲ ಎಂಬ ಕಾನೂನು. ನಾವು ನಮ್ಮ ಸುತ್ತ ಮುತ್ತಾ ಗಮನಿಸಬಹುದು ಮಕ್ಕಳು ಸಂಸ್ಕಾರ ಹೇಗೆ ಮರೆತಿದ್ದಾರೆ ಎಂಬುದು. ಮೊದಲೆಲ್ಲ ಯಾರಾದ್ರೂ ಮನೆಗೆ ಬಂದರೆ ಅತಿಥಿ ದೇವೋ ಭವ ಎಂದು ಅವರನ್ನು ಉಪಚರಿಸಲು ಅವರ ಯೋಗ ಕ್ಷೇಮ ವಿಚಾರಿಸಲು ಇಡೀ ಕುಟುಂಬ ಅವರ ಸುತ್ತ ಆವರಿಸುತ್ತಿತ್ತು. ಮನೆ ಮಕ್ಕಳು ಅವರ ಕೈ ನೋಡುತ್ತಿದ್ದರು. ಅಂದರೆ ಮಕ್ಕಳಲ್ಲಿ ಕುತೂಹಲ ಏನಾದರೂ ತಿನ್ನಲು ತಂದಿರಬಹುದು ಎಂದು ಅದನ್ನ ಅವರಾಗೆ ಕೊಡುವವರೆಗೂ ಕಾದು ಕೊಡಲು ಬಂದಾಗ ನಾಚಿಕೆಯಿಂದ ಬೇಡ ಎನ್ನುತ್ತಿದ್ದರು.

ಆದರೆ ವಿಪರ್ಯಾಸ ನೋಡಿ ಇಂದು ಮಕ್ಕಳು ಕೈ ಯಲ್ಲಿ ಮೊಬೈಲ್ ಹಿಡಿದು ಕೂತರೆ ಮನೆಗೆ ಸ್ವತಹ ಕಳ್ಳನೇ ಬಂದು ಹೋದರು ಗೊತ್ತಾಗದು.

ಇತ್ತೀಚಿನ ದಿನದಲ್ಲಿ ಹುಲಿಯೊಂದು ಮನೆ ಒಳಗೆ ಹೊಕ್ಕರು ಮೊಬೈಲ್ ನಲ್ಲಿ ಮುಳುಗಿದ್ದ ಒಂದು ಹುಡಿಗನ ವಿಡಿಯೋ ವೈರಲ್ ಆಗಿದ್ದು ನಾವು ಗಮನಿಸಿದ್ದೇವೆ. ಹಿಂದೆಲ್ಲ ಮನೆ ಮಂದಿ ಸಂಜೆಯಹೊತ್ತಲ್ಲಿ ಒಟ್ಟಿಗೆ ಕುಳಿತು ಶ್ಲೋಕ, ಭಜನೆಗಳನ್ನು ಹೇಳುತ್ತಿದ್ದೆವು ಆದರೆ ಇಂದು ಎಲ್ಲರೂ ಕೈಯಲೊಂದು ಮೊಬೈಲ್ ಹಿಡಿದುಕೊಂಡಿದ್ದೇವೆ. ಹಾಗಾಗಿ ನಮ್ಮ ಮಕ್ಕಳು ಸಂಸ್ಕಾರವನ್ನೇ ಮರೆಯುತ್ತಿದ್ದಾರೆ.

ನಾವು ಮಕ್ಕಳಿಗೆ ಕೇವಲ ಶಿಕ್ಷಣ ಕೊಟ್ಟರೆ ಸಾಲದು ಮಕ್ಕಳಿಗೆ ಸಂಸ್ಕಾರ ಕೂಡ ಅತ್ಯಂತ ಮುಖ್ಯ ಆಗಿರುತ್ತದೆ. ವಿದ್ಯೆಗೆ ವಿನಯವೇ ಭೂಷಣ ಎಂಬ ನುಡಿಯಂತೆ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸುವ ಶಿಕ್ಷಣ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಿ ಇಲ್ಲದಿದ್ದರೆ ಮಕ್ಕಳು ಕೇವಲ ಪುಸ್ತಕದ ಬದನೇಕಾಯಿ ಆಗುತ್ತಾರೆ. ನಾವು ಇನ್ನಾದರೂ ಅರಿತು ಮಕ್ಕಳ ಕೈಗೆ ಮೊಬೈಲ್ ಕೊಡುವ ಬದಲು ಒಂದಿಷ್ಟು ಸಂಸ್ಕಾರ ಕಲಿಸುವ ಇದು ನಾವು ನಮ್ಮ ಮುಂದಿನ ಪೀಳಿಗೆಗೆ ನೀಡುವ ಉಡುಗೊರೆ ಆಗುತ್ತದೆ.

# ಆನ್‌ಲೈನ್ ಜೂಜಾಟ ನಿಯಂತ್ರಣಕ್ಕೆ ರಾಷ್ಟ್ರೀಯ ಕಾನೂನು ರೂಪಿಸಲು ಮನವಿ

• ಉದಯವಾಹಿನಿ, ಬೆಂಗಳೂರು

ಸುರಾಜ್ಯ ಅಭಿಯಾನ ಸಂಘಟನೆಯ ಪ್ರತಿನಿಧಿ ತಂಡವು ಕರ್ನಾಟಕ ರಾಜ್ಯದ ಗೃಹ ಸಚಿವರಾದ ಶ್ರೀ ಜಿ. ಪರಮೇಶ್ವರ್ ಅವರನ್ನು ಭೇಟಿಯಾಗಿ, ಆನ್‌ಲೈನ್ ಗೇಮಿಂಗ್ ನಿಯಂತ್ರಣ ಕುರಿತಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವಂತೆ ಮನವಿಪತ್ರ ಸಲ್ಲಿಸಿತು. ಭಾರತ ಸಂವಿಧಾನದ ಕಲಂ 252 ರ ಅಡಿಯಲ್ಲಿ ರಾಷ್ಟ್ರಮಟ್ಟದ ಸಂಯೋಜಿತ ಕಾನೂನು ರೂಪಿಸಲು ಕರ್ನಾಟಕ ವಿಧಾನಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ಕರ್ನಾಟಕ ಪೊಲೀಸ್ ತಿದ್ದುಪಡಿ ವಿಧೇಯಕ 2025ರ ಮೂಲಕ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮವನ್ನು ಸುರಾಜ್ಯ ಅಭಿಯಾನ ಪ್ರಶಂಸಿಸಿದೆ.

ಕೌಶಲ್ಯದ ಆಟಗಳು ಮತ್ತು ಅಡ್ವಾನ್ಸ್ ಬೆಟ್ಟಿಂಗ್ ಅಥವಾ ಜೂಜಾಟದ ಆಟಗಳು ನಡುವೆ ಸ್ಪಷ್ಟತೆ ನೀಡಿರುವುದು ಹಾಗೂ ಕರ್ನಾಟಕ ಆನ್‌ಲೈನ್ ಗೇಮಿಂಗ್ ಬೆಟ್ಟಿಂಗ್ ನಿಯಂತ್ರಣ ಪ್ರಾಧಿಕಾರ (KOGBRA) ರಚನೆಯ ಪ್ರಸ್ತಾವನೆ ಸಾರ್ವಜನಿಕ ಆರೋಗ್ಯ ಹಾಗೂ ಯುವ ಸಮುದಾಯದ ರಕ್ಷಣೆಗೆ ಉದ್ದೇಶಿತವಾದ ಮಹತ್ವದ ಹೆಜ್ಜೆಯೆಂದು ಮನವಿಯಲ್ಲಿ ದಾಖಲಿಸಲಾಗಿದೆ. ಆದರೆ, ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳ ಅಂತರರಾಜ್ಯ ಮತ್ತು ಅಂತರರಾಷ್ಟ್ರೀಯ ವ್ಯವಹಾರದ ಹಿನ್ನೆಲೆಯಲ್ಲಿ, ರಾಜ್ಯ ಮಟ್ಟದ ಕಾನೂನು ಮಾತ್ರ ಪರಿಣಾಮಕಾರಿಯಲ್ಲ. ಇದಕ್ಕಾಗಿ ರಾಷ್ಟ್ರೀಯ ಮಟ್ಟದ ಏಕೀಕೃತ ಕಾನೂನು ಅಗತ್ಯವಾಗಿದೆ ಎಂದು ಮನವಿ ತಿಳಿಸಿದೆ.



☛ ಉದಯವಾಹಿನಿ ಚಿತ್ರ

**ಮನವಿಯಲ್ಲಿ ನೀಡಲಾದ ಪ್ರಮುಖ ಅಂಶಗಳು:**

- **ಕಳೆದ 3 ವರ್ಷಗಳಲ್ಲಿ ಆನ್‌ಲೈನ್ ಜೂಜಾಟದ ಕಾರಣ 18 ಯುವಕರು ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ.**
- **ಮಾನಸಿಕ ತಜ್ಞರ ಪ್ರಕಾರ, ಐಪಿಎಲ್ ಮುಂತಾದ ಕ್ರೀಡಾ ಋತುವಿನಲ್ಲಿ ಆಸ್ಪತ್ರೆಗಳಲ್ಲಿ 15% ರೋಗಿಗಳು ಜೂಜಾಟದ ಆಸಕ್ತಿಯಿಂದ ಬಾಧಿತರಾಗಿದ್ದಾರೆ.**
- **ಡ್ರೀಮ್ 11, MPL, ರಮ್ಮಿಕಲ್ಚರ್, 1xBet, ಪ್ಯಾರಿಮ್ಯಾಚ್ ಮುಂತಾದ ಅನೇಕ ಪ್ಲಾಟ್ ಫಾರ್ಮ್‌ಗಳು ಪ್ರಕರಣಗಳಲ್ಲಿ ನಮೂದಾಗಿವೆ.**
- **ನ್ಯಾಯಾಲಯದಲ್ಲಿ ಫ್ಯಾಂಟಸಿ ಆಟಗಳು ಕೌಶಲ್ಯ ಆಧಾರಿತವೆಂದು ನಿರ್ಧಾರವಾದರೂ, ಸುಪ್ರೀಂ ಕೋರ್ಟ್‌ನ (ಕೆ.ಆರ್. ಲಕ್ಷ್ಮಣನ್ ವರ್ಸಸ್ ತಮಿಳುನಾಡು) ತೀರ್ಪಿನ ಪ್ರಕಾರ, ಚಾನ್ಸ್ ಅಂಶ ಹೆಚ್ಚಾದರೆ ಅದನ್ನು ಜೂಜಾಟವೆಂದು ಪರಿಗಣಿಸಬೇಕು.**

### ಸುರಾಜ್ಯ ಅಭಿಯಾನದ ಬೇಡಿಕೆಗಳು

- **ತಕ್ಷಣ ಕರ್ನಾಟಕ ಪೊಲೀಸ್ ತಿದ್ದುಪಡಿ ಮಸೂದೆ 2025 ಅನ್ನು ಅಂಗೀಕರಿಸಬೇಕು.**
- **Addictive gaming help-line ಮತ್ತು ಶಾಲಾ ಪಠ್ಯದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಸೇರಿಸಬೇಕು.**
- **ಅಕ್ರಮ ಜೂಜಾಟದ ಪ್ಲಾಟ್‌ಫಾರ್ಮ್‌ಗಳಿಗೆ ಜಾಹೀರಾತು ನೀಡುವ ಸೆಲೆಬ್ರಿಟಿಗಳು/ ಇನ್ಫ್ಲುಯೆನ್ಸರ್‌ಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು.**
- **ಸಂವಿಧಾನದ ಆರ್ಟಿಕಲ್ 252 ಅಡಿಯಲ್ಲಿ ಕೇಂದ್ರಕ್ಕೆ ಶಿಫಾರಸು ಮಾಡಬೇಕು.**

ಈ ಮನವಿಯನ್ನು ನೀಡಿದ ಸಂದರ್ಭದಲ್ಲಿ ಹಿಂದೂ ಜನಜಾಗೃತಿ ಸಮಿತಿಯ ಸುರಾಜ್ಯ ಅಭಿಯಾನ ಕರ್ನಾಟಕ ರಾಜ್ಯ ಸಂಯೋಜಕರಾದ ಶ್ರೀ ಮೋಹನ್ ಗೌಡ, ಶ್ರೀ ವೆಂಕಟೇಶಮೂರ್ತಿ ಎಚ್. ಎಸ್. ಶ್ರೀ ಶೈಲ ಮತ್ತು ಇತರರು ಉಪಸ್ಥಿತರಿದ್ದರು.

# ಮುಖದ ಕಾಂತಿ ಹೆಚ್ಚಿಸುವ ಕಲ್ಲಂಗಡಿ ಸಿಪ್ಪೆಯ ಫೇಸ್‌ಪ್ಯಾಕ್ ಮನೆಯಲ್ಲೇ ತಯಾರಿಸಿ ನೋಡಿ

ಕಲ್ಲಂಗಡಿ ಹಣ್ಣಿನ ಸಿಪ್ಪೆಯನ್ನು ಬಿಸಾಡುವ ಬದಲು ಅದರ ಫೇಸ್‌ಪ್ಯಾಕ್ ತಯಾರಿಸಿ ಮುಖಕ್ಕೆ ಹಚ್ಚೋದ್ರಿಂದ ಮುಖ ಕಾಂತಿಯುತವಾಗುತ್ತದೆ ಎನ್ನುವುದು ನಿಮಗೆ ಗೊತ್ತಾ ನೀವೂ ಒಮ್ಮೆ ಟ್ರೈ ಮಾಡಿ ನೋಡಿ. ಕಲ್ಲಂಗಡಿ ಹಣ್ಣನ್ನು ಅನೇಕರು ಇಷ್ಟಪಡುತ್ತಾರೆ.

**ಕಲ್ಲಂಗಡಿ ಸಿಪ್ಪೆ ಮತ್ತು ಅಲೋವೆರಾ**

**ಫೇಸ್ ಪ್ಯಾಕ್ ಅನ್ನು ಸಹ ತಯಾರಿಸಬಹುದು. ಕಲ್ಲಂಗಡಿ ಸಿಪ್ಪೆಯ ಬಿಳಿ ಭಾಗವನ್ನು ತೆಗೆದುಕೊಂಡು ಅವುಗಳನ್ನು ನುಣ್ಣಗೆ ರುಬ್ಬಿ. ಈಗ ಅದಕ್ಕೆ 2 ಚಮಚ ಅಲೋವೆರಾ ಜೆಲ್ ಸೇರಿಸಿ. ಈ ಪ್ಯಾಕ್ ಅನ್ನು ಮುಖಕ್ಕೆ ಹಚ್ಚಿ 40 ನಿಮಿಷಗಳ ನಂತರ ನೀರಿನಿಂದ ತೊಳೆಯಿರಿ. ಅಲೋವೆರಾ ಚರ್ಮಕ್ಕೆ ತೇವಾಂಶವನ್ನು ನೀಡುತ್ತದೆ. ಅಲೋವೆರಾದಲ್ಲಿ ಆಂಟಿಆಕ್ಸಿಡೆಂಟ್‌ಗಳಿವೆ, ಇದು ಚರ್ಮವನ್ನು ಆರೋಗ್ಯಕರವಾಗಿಡಲು ಸಹಾಯ ಮಾಡುತ್ತದೆ.**

ಇದು ರುಚಿಕರವಾದ, ತೇವಾಂಶ ನೀಡುವ ಹಣ್ಣು ಮಾತ್ರವಲ್ಲ, ಆರೋಗ್ಯಕ್ಕೆ ಸಾಕಷ್ಟು ಪ್ರಯೋಜನಗಳನ್ನೂ ನೀಡುತ್ತದೆ. ಸಾಮಾನ್ಯವಾಗಿ ಕಲ್ಲಂಗಡಿ ಹಣ್ಣು ಸೇವಿಸುವಾಗ ಅದರ ಸಿಪ್ಪೆಯನ್ನು ಬಿಸಾಡುತ್ತಾರೆ. ಆದರೆ ನಿಮಗೆ ಗೊತ್ತಾ ಕಲ್ಲಂಗಡಿ ಸಿಪ್ಪೆಯು ನಿಮ್ಮ ಚರ್ಮದ ಆರೈಕೆಯ ದಿನಚರಿಯಲ್ಲಿ ಒಂದು ಪ್ರಮುಖ ಬದಲಾವಣೆಯನ್ನು ತರಬಹುದು. ಇದರ ಸಿಪ್ಪೆಯಲ್ಲಿರುವ ಪೋಷಕಾಂಶಗಳು ಚರ್ಮವನ್ನು ಹೈಡ್ರೇಟ್ ಆಗಿರಿಸುವುದರಿಂದ ಹಿಡಿದು ನಾನಾ ರೀತಿಯಲ್ಲಿ ಸಹಕಾರಿಯಾಗಿದೆ.

**ಕಲ್ಲಂಗಡಿ ಸಿಪ್ಪೆ:** ಕಲ್ಲಂಗಡಿ ಸಿಪ್ಪೆಗಳನ್ನು ವಿವಿಧ ಚರ್ಮದ ಸಮಸ್ಯೆಗಳನ್ನು ನಿಭಾಯಿಸುವ ಮತ್ತು ನಿಮ್ಮ ಚರ್ಮವು ಹೈಡ್ರೇಟೆಡ್ ಮತ್ತು ಕಾಂತಿಯುತವಾಗಿರುವಂತೆ ಮಾಡುವ ಪೋಷಣೆಯ ಫೇಸ್ ಪ್ಯಾಕ್ ಅನ್ನು ರಚಿಸಲು ಬಳಸಬಹುದು.

ಬೇಸಿಗೆಯ ತಿಂಗಳುಗಳಿಗೆ ಸೂಕ್ತವಾದ ಕಲ್ಲಂಗಡಿ ಸಿಪ್ಪೆಯ ಫೇಸ್ ಪ್ಯಾಕ್ ನಿಮಗೆ ತ್ವರಿತ ಹೊಳಪನ್ನು ನೀಡುತ್ತದೆ. ಕಲ್ಲಂಗಡಿ ಸಿಪ್ಪೆಯನ್ನು ಮುಖದ ಮೇಲೆ ಹಚ್ಚುವ ಕೆಲವು ಸರಳ ವಿಧಾನಗಳನ್ನು ನಾವಿಲ್ಲಿ ತಿಳಿಯೋಣ.

**ಕಲ್ಲಂಗಡಿ ಸಿಪ್ಪೆ ಮತ್ತು ಹಸಿ ಹಾಲು:** ನೀವು ಕಲ್ಲಂಗಡಿ ಸಿಪ್ಪೆಯ ಪೇಸ್ಟ್‌ಗೆ ಹಸಿ ಹಾಲನ್ನು ಬೆರೆಸಿ ನಿಮ್ಮ ಮುಖಕ್ಕೆ ಹಚ್ಚಬಹುದು. ಇದಕ್ಕಾಗಿ 2 ಚಮಚ ಕಲ್ಲಂಗಡಿ ಸಿಪ್ಪೆಯ ಪೇಸ್ಟ್ ತೆಗೆದುಕೊಳ್ಳಿ. ಅದಕ್ಕೆ ಅರ್ಧ ಚಮಚ ಹಸಿ ಹಾಲು ಸೇರಿಸಿ. ಮುಖಕ್ಕೆ ಹಚ್ಚಿ ಅರ್ಧ ಗಂಟೆ ಬಿಡಿ. ಹಸಿ ಹಾಲು ಮುಖವನ್ನು ಆಳವಾಗಿ ಸ್ವಚ್ಛಗೊಳಿಸುತ್ತದೆ. ಇದು ಚರ್ಮದ ಮೇಲೆ ಸಂಗ್ರಹವಾಗಿರುವ ಎಲ್ಲಾ ಕೊಳಕು ಮತ್ತು ಧೂಳನ್ನು ಸುಲಭವಾಗಿ ತೆಗೆದುಹಾಕುತ್ತದೆ. ಈ ಫೇಸ್ ಪ್ಯಾಕ್ ಅನ್ನು ಹಚ್ಚುವುದರಿಂದ ಮುಖ ಕಾಂತಿಯುತವಾಗುತ್ತದೆ.

**ಕಲ್ಲಂಗಡಿ ಸಿಪ್ಪೆ ಮತ್ತು ಕಡಲೆ ಹಿಟ್ಟು:** ನೀವು ಕಲ್ಲಂಗಡಿ ಸಿಪ್ಪೆಗಳು ಮತ್ತು ಕಡಲೆ ಹಿಟ್ಟಿನ ಫೇಸ್ ಪ್ಯಾಕ್ ತಯಾರಿಸಿ ಮುಖಕ್ಕೆ ಹಚ್ಚಬಹುದು. ಕಲ್ಲಂಗಡಿ ಸಿಪ್ಪೆಗಳ ಬಿಳಿ ಭಾಗವನ್ನು ತೆಗೆದುಹಾಕಿ. ಈಗ ಅವುಗಳನ್ನು ನುಣ್ಣಗೆ ಪೇಸ್ಟ್ ತಯಾರಿಸಿ ಅದಕ್ಕೆ ಸ್ವಲ್ಪ ಕಡಲೆ ಹಿಟ್ಟು ಸೇರಿಸಿ. ಈಗ ಈ ಪೇಸ್ಟ್ ಅನ್ನು ಮುಖಕ್ಕೆ ಹಚ್ಚಿ. ಅರ್ಧ ಗಂಟೆಯ ನಂತರ ಮುಖವನ್ನು ನೀರಿನಿಂದ ತೊಳೆಯಿರಿ. ಇದು ಚರ್ಮವನ್ನು ಹೈಡ್ರೇಟ್ ಆಗಿರಿಸುತ್ತದೆ. ಕಡಲೆ ಹಿಟ್ಟು ಶಾಖದಿಂದ ಉಂಟಾಗುವ ಜಿಗುಟುತನವನ್ನು ತೆಗೆದುಹಾಕುವುದಲ್ಲದೆ ಚರ್ಮವನ್ನು ತಂಪಾಗಿರಿಸುತ್ತದೆ.

**ಕಲ್ಲಂಗಡಿ ಸಿಪ್ಪೆ ಮತ್ತು ಗುಲಾಬಿ ನೀರು:** ಕಲ್ಲಂಗಡಿ ಸಿಪ್ಪೆ, ಗುಲಾಬಿ ನೀರಿನ ಫೇಸ್ ಪ್ಯಾಕ್ ಚರ್ಮಕ್ಕೆ ಪ್ರಯೋಜನಕಾರಿಯಾಗಿದೆ. ಈ ಫೇಸ್ ಪ್ಯಾಕ್ ಮಾಡಲು ಕಲ್ಲಂಗಡಿ ಸಿಪ್ಪೆಯನ್ನು ದಪ್ಪ ಪೇಸ್ಟ್ ಮಾಡಿ. ಇದಕ್ಕೆ ರೋಸ್ ವಾಟರ್ ಸೇರಿಸಿ ನಂತರ ಮುಖಕ್ಕೆ ಹಚ್ಚಿ. ಅರ್ಧ ಗಂಟೆಯ ನಂತರ, ಮುಖವನ್ನು ಸಾಮಾನ್ಯ ನೀರಿನಿಂದ ತೊಳೆಯಿರಿ. ರೋಸ್ ವಾಟರ್ ಚರ್ಮವನ್ನು ಹೈಡ್ರೇಟ್ ಮಾಡುತ್ತದೆ ಮತ್ತು ತೇವಗೊಳಿಸುತ್ತದೆ.



# ಸಮಾಜ ಸೇವೆಯ ತ್ವರಿತ ಗುರಿ ಸಾಧನೆಗೆ ತಂತ್ರಜ್ಞಾನ ಬಳಕೆ

• ಉದಯವಾಹಿನಿ, ಬೆಂಗಳೂರು

ಸಮಾಜ ಸೇವೆಗಳ ತ್ವರಿತ ಅನುಷ್ಠಾನ, ಸರ್ಕಾರದ ನೀತಿ ನಿರೂಪಣೆಯಲ್ಲಿ ತಂತ್ರಜ್ಞಾನ ಪರಿಣಾಮಕಾರಿ ಸಾಧನವಾಗಿದೆ ಎಂದು ಅಂತರರಾಷ್ಟ್ರೀಯ ಸಾಮಾಜಿಕ ಕಾರ್ಯಕರ್ತರ ಒಕ್ಕೂಟದ ಪದಾಧಿಕಾರಿಗಳಾದ ಎಂ.ವಿ. ಶ್ರೀಗಣೇಶ್ ಪ್ರತಿಪಾದಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಭಾರತೀಯ ವೃತ್ತಿಪರ ಸಮಾಜ ಕಾರ್ಯ ಸಂಸ್ಥೆಯ ಜಂಟಿ ಸಹಯೋಗದಲ್ಲಿ ಆಯೋಜಿಸಿರುವ 2 ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅಗಾಧ ಜನಸಂಖ್ಯೆ ಹಾಗೂ ಸಾಮಾಜಿಕ ಅಸಮಾನತೆ ಮತ್ತು ವೈವಿಧ್ಯತೆಯ ದೇಶವಾದ ಭಾರತದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಗಳು ನಿರ್ದಿಷ್ಟ ಜನರಿಗೆ ಶೀಘ್ರವಾಗಿ ತಲುಪಲು ತಂತ್ರಜ್ಞಾನದ ಬಳಕೆ ಅತ್ಯಗತ್ಯವೆಂದು ಅವರು ವಿವರಿಸಿದರು.

ದತ್ತಾಂಶ ಸಂಗ್ರಹ ಮತ್ತು ತಾಂತ್ರಿಕ ಪರಿಣತಿಯ ಮೂಲಕ ಸಮಾಜ ಕಾರ್ಯ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲದ ಪರಿಣಾಮಕಾರಿ ವಿನಿಯೋಗ ಸಾಧ್ಯವೆಂದು ಅವರು ವಿಶ್ಲೇಷಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ವೈ. ಎಸ್. ಸಿದ್ದೇಗೌಡ ಮಾತನಾಡಿ ಕೃತಕ ಬುದ್ಧಿಮತ್ತೆಯ ಇಂದಿನ ದಿನಗಳಲ್ಲಿ ಬೋಧನೆ ಮತ್ತು ಕಲಿಕೆಯ ವಿಧಾನಗಳನ್ನು ಸೂಕ್ತ ರೀತಿಯಲ್ಲಿ ಮಾರ್ಪಡಿಸುವ ಅಗತ್ಯವನ್ನು ಒತ್ತಿ ಹೇಳಿದರು.




☛ ಉದಯವಾಹಿನಿ ಚಿತ್ರ

ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ವೃತ್ತಿಪರ ಕಾರ್ಯ ಸೇವಕರ ಪಾತ್ರ ಅತಿಮುಖ್ಯವಾಗಿದ್ದು ಇದೇ ಸಂದರ್ಭದಲ್ಲಿ ನೀತಿ ಸಂಹಿತೆಯನ್ನು ತಪ್ಪದೆ ಪಾಲಿಸಬೇಕೆಂದು ಅವರು ಅಭಿಪ್ರಾಯಪಟ್ಟರು. ಪ್ರೊ. ಐ.ಎ.ಷರೀಫ್, ಪ್ರೊ.ಎಲ್.ಎಸ್. ಗಾಂಧಿ ದಾಸ್ ಸಮಾಜ ಕಾರ್ಯ ಕ್ಷೇತ್ರದಲ್ಲಿನ ಹೊಸ ಸವಾಲುಗಳ ಕುರಿತು ವಿಶ್ಲೇಷಿಸಿದರು. ಬಿಸಿಯು ಕುಲಸಚಿವರಾದ ಪ್ರೊ.ಬಿ. ರಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ.ರಿತಿಕಾ ಸಿನ್ಹಾ ಗಣ್ಯರನ್ನು ಸ್ವಾಗತಿಸಿದರು. ವಿವಿಧ ಕ್ಷೇತ್ರಗಳ ಅನೇಕ ವಿಷಯ ಪರಿಣತರು ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸಗಳನ್ನು ನೀಡಿದರು.

# ಷಡ್ಯಂತ್ರಕಾರಿ ಶಕ್ತಿಗಳಿಗೆ ಶಿಕ್ಷೆಯಾದಾಗಲೇ ನ್ಯಾಯಸಿಗಲಿದೆ

2008ರ ಮಾಲೆಗಾಂವ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್, ಕರ್ನಲ್ ಪ್ರಸಾದ್ ಪುರೋಹಿತ್, ಮೇಜರ್ ರಮೇಶ್ ಉಪಾಧ್ಯಾಯ, ಸಮೀರ್ ಕುಲಕರ್ಣಿ ಮತ್ತು ಇತರ ಎಲ್ಲಾ ಹಿಂದುತ್ವನಿಷ್ಠರನ್ನು ನಿರ್ದೋಷಿಗಳೆಂದು NIA ವಿಶೇಷ ನ್ಯಾಯಾಲಯ ತೀರ್ಪು ನೀಡುವ ಮೂಲಕ ಮತ್ತೊಮ್ಮೆ ನ್ಯಾಯದ ದೇವಾಲಯದಲ್ಲಿ ಸತ್ಯ ಗೆಲ್ಲುತ್ತದೆ ಎಂದು ಸಾಬೀತಾಗಿದೆ. ಇದು ಸದಾಚಾರದ ವಿಜಯ ಮತ್ತು ಇಡೀ ಹಿಂದೂ ಸಮಾಜಕ್ಕೆ ಐತಿಹಾಸಿಕ ಕ್ಷಣವಾಗಿದೆ. ಸನಾತನ ಸಂಸ್ಥೆ ಈ ಎಲ್ಲಾ ಮುಗ್ಧ ದೇಶಭಕ್ತರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಈ ನಿರ್ಣಯವು ವರ್ಷಗಳಿಂದ ನಡೆಯುತ್ತಿರುವ ಅನ್ಯಾಯವನ್ನು ಕೊನೆಗೊಳಿಸಿದೆ ಮಾತ್ರವಲ್ಲದೆ, ಹಿಂದೂ ಭಯೋತ್ಪಾದನೆಯ ಸುಳ್ಳು ಪರಿಕಲ್ಪನೆಯನ್ನು ಸಹ ಸಂಪೂರ್ಣವಾಗಿ ಕೆಡವಲಾಗಿದೆ. ಹಿಂದುತ್ವ ಬೆಂಬಲಿಗರಿಗೆ ಇಂದು ನ್ಯಾಯ ಸಿಕ್ಕಿದ್ದರೂ, ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಿದ, ದೇಶಭಕ್ತರ ಮೇಲೆ ಅಮಾನವೀಯ ದೌರ್ಜನ್ಯ ಎಸಗಿದ ಮತ್ತು ವಿಶೇಷವಾಗಿ ಸಾಧ್ವಿ ಪ್ರಜ್ಞಾ ಜಿ ಮತ್ತು ಇತರ ಅಮಾಯಕ ಜನರನ್ನು ವರ್ಷಗಳ ಕಾಲ ಜೈಲಿನಲ್ಲಿಟ್ಟ ಪಿತೂರಿ ಶಕ್ತಿಗಳಿಗೆ ಶಿಕ್ಷೆಯಾಗುವವರೆಗೆ ಈ ನ್ಯಾಯ ಅಪೂರ್ಣವಾಗಿರುತ್ತದೆ. ಈ ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ಎಂದು ಸನಾತನ ಸಂಸ್ಥೆಯ ರಾಷ್ಟ್ರೀಯ ವಕ್ತಾರ ಶ್ರೀ. ಅಭಯ್ ವರ್ತಕ್ ಅವರು ಆಗ್ರಹಿಸಿದ್ದಾರೆ. ಈ ಅಮಾಯಕ ಹಿಂದೂಗಳು 'ಕೇಸರಿ ಭಯೋತ್ಪಾದನೆ' ಮತ್ತು 'ಹಿಂದೂ ಭಯೋತ್ಪಾದನೆಯಂತಹ ಸುಳ್ಳು ಆರೋಪಗಳ ಕಳಂಕದೊಂದಿಗೆ ಹಲವು ವರ್ಷಗಳ ಕಾಲ ಅನ್ಯಾಯದ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಯಿತು ಎಂದು ಶ್ರೀ. ವರ್ತಕ್ ಹೇಳಿದರು. ಆಗಿನ ತನಿಖಾ ಸಂಸ್ಥೆಗಳು ಪಕ್ಷಪಾತ, ಪೂರ್ವಾಗ್ರಹ ಮತ್ತು ರಾಜಕೀಯ ಒತ್ತಡದಲ್ಲಿ ಕೆಲಸ ಮಾಡಿದ್ದವು. ವಿಶೇಷವಾಗಿ ಅಂದಿನ ಹಿರಿಯ ಪೊಲೀಸ್ ಅಧಿಕಾರಿ ಪರಂಬೀರ್ ಸಿಂಗ್ ಅವರಂತಹ ಜನರು ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಿ ಅಮಾಯಕರನ್ನು ಅಪರಾಧಿಗಳೆಂದು ಬಲವಂತವಾಗಿ ಘೋಷಿಸಲು ಪ್ರಯತ್ನಿಸಿದರು. ಅಲ್ಲದೆ, ಅಂದಿನ ಕಾಂಗ್ರೆಸ್ ನಾಯಕರಾದ ದಿಗ್ವಿಜಯ್ ಸಿಂಗ್, ಪಿ. ಚಿದಂಬರಂ ಮತ್ತು ಸುಶೀಲ್ ಕುಮಾರ್ ಶಿಂಧೆ 'ಕೇಸರಿ ಭಯೋತ್ಪಾದನೆ' ಎಂಬ ಪದವನ್ನು ಪ್ರಚಾರ ಮಾಡುವ ಮೂಲಕ ಇಡೀ ಹಿಂದೂ ಸಮಾಜವನ್ನು ದೂಷಿಸಲು ಪ್ರಯತ್ನ ಮಾಡಿದರು. 2009 ರಲ್ಲಿ, ಕಾಂಗ್ರೆಸ್ ಸರ್ಕಾರವು ಮಡಗಾಂವ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಸನಾತನ ಸಂಸ್ಥೆಯ ಅನುಯಾಯಿಗಳನ್ನು ಸಿಲುಕಿಸಲು ಸಂಚು ರೂಪಿಸಿತು, ಆದರೆ 2013 ರಲ್ಲಿ ಅವರನ್ನು ಗೌರವಾನ್ವಿತ ನ್ಯಾಯಾಲಯವು ಸಂಪೂರ್ಣವಾಗಿ ನಿರ್ದೋಷಿಗಳೆಂದು ಘೋಷಿಸಿತು. ಅದೇ ರೀತಿ, 2008 ರ ಮಾಲೆಗಾಂವ್ ಪ್ರಕರಣದಲ್ಲಿ ಆರೋಪಿಸಲ್ಪಟ್ಟ ದೇಶಭಕ್ತರನ್ನು 17 ವರ್ಷಗಳ ನಂತರ ನ್ಯಾಯಾಲಯ ಬಿಡುಗಡೆ ಮಾಡಿದೆ. ಹಿಂದೂ ಸಮಾಜವನ್ನು ಭಯೋತ್ಪಾದಕರು ಎಂದು ಹಣೆಪಟ್ಟಿ ಕಟ್ಟುವ ಪಾಪವನ್ನು ಕಾಂಗ್ರೆಸ್ ಮಾಡಿದೆ, ಆದರೆ ನ್ಯಾಯ ದೇವತೆ ಹಿಂದೂಗಳಿಗೆ ನ್ಯಾಯವನ್ನು ನೀಡಿದರು ಎಂದು ಶ್ರೀ. ವರ್ತಕ್ ಅವರು ಹೇಳಿದ್ದಾರೆ.




## ಚಿಮ್ಮನಚೋಡ: ಗ್ರಾಮದಲ್ಲಿ ಎಸ್.ಬಿ.ಐ ಶಾಖೆ ಹಾಗೂ ಬಸ್ ನಿಲ್ದಾಣದಲ್ಲಿ ಶೌಚಾಲಯ ನಿರ್ಮಿಸುವಂತೆ: ಮಾನವೀಯತೆ ಸೇವಾ ಗುಂಪು ಒತ್ತಾಯ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಚಿಮ್ಮನಚೋಡ ಗ್ರಾಮದ ಹೊಸ ಬಸ್ ನಿಲ್ದಾಣದಲ್ಲಿ ಮಹಿಳಾ ಮತ್ತು ಪುರುಷ ಶೌಚಾಲಯ ನಿರ್ಮಾಣ ಹಾಗೂ ಎಸ್.ಬಿ.ಐ ಶಾಖೆಯೊಂದು ಪ್ರಾರಂಬಿಸಿ ಚಿಮ್ಮನಚೋಡ ಹಾಗೂ ಸುತ್ತಮುತ್ತಲಿನ ಗ್ರಾಮದ ಸಾವಿರಾರು ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕು ಎಂದು ಮಾನವೀಯತೆ ಸೇವಾ ಗೂಂಪು ಅಧ್ಯಕ್ಷ ಎಂ.ಡಿ.ಶಫೀ ಬಾಗಬಾನ್ ಒತ್ತಾಯಿಸಿದರು.

ತಾಲ್ಲೂಕಿನ ಚಿಮ್ಮಾನಚೋಡ ಗ್ರಾಮದಲ್ಲಿ ಮಾನವೀಯತೆ ಸೇವಾ ಗುಂಪು ವತಿಯಿಂದ ಬಸ್ ನಿಲ್ದಾಣದಲ್ಲಿ ಶೌಚಾಲಯ ನಿರ್ಮಾಣ ಹಾಗೂ ಗ್ರಾಮದಲ್ಲಿ ಎಸ್.ಬಿ.ಐ ಶಾಖೆ ಪ್ರಾರಂಭಿಸುವಂತೆ ಆಗ್ರಹಿಸಿ ಗ್ರಾ.ಪಂ.ಅಧ್ಯಕ್ಷರಿಗೆ ಪಿಡಿಓಗೆ ಗುರುವಾರ ಗ್ರಾಮಸ್ಥರ ಪರವಾಗಿ ಮನವಿಪತ್ರ ಸಲ್ಲಿಸಿದರು. ಸಗ್ರಾಮದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸಿದ್ದು ಸುತ್ತಮುತ್ತಲಿನ ಗ್ರಾಮಗಳಿಗೆ ಹೋಗುವ ಜನರಿಗೆ ಶೌಚಾಲಯವಿಲ್ಲದೆ ಬಹಳ ತೊಂದರೆ ಆಗುತ್ತಿದೆ, ಅಲ್ಲಿನ ಶೌಚಾಲಯವು ಮೂತ್ರ ವಿಸರ್ಜನೆಗೆ ಮಾತ್ರ ಸೀಮಿತವಾಗಿದೆ ಅದರೆ ಮಹಿಳೆಯರಿಗೆ ಮತ್ತು ಸಣ್ಣ ಮಕ್ಕಳಿಗೆ ಪ್ರತೇಕ ಶೌಚಾಲಯ ಇರುವುದಿಲ್ಲ, ಸಾರ್ವಜನಿಕರು ಸುಮಾರು ನಾಲ್ಕು ವರ್ಷದಿಂದ ನಿರಂತರ ತೊಂದರೆಗಳು ಅನುಭವಿಸುತ್ತಿದ್ದಾರೆ.

ಹಾಗೂ ಚಿಮ್ಮಾನಚೋಡ ಗ್ರಾಮವು ಜಿಪಂ ಕೇಂದ್ರ ಸ್ಥಾನವಿದ್ದು ಸಾಕಷ್ಟು ಜನಸಂಖ್ಯೆವುಳ್ಳ ಗ್ರಾಮವಿದ್ದು ಸುತ್ತಮುತ್ತ ಸಾಕಷ್ಟು ಗ್ರಾಮ ತಾಂಡಾಗಳಿವೆ ಎಲ್ಲಾ ಜನರು ಚಿಮ್ಮಾನಚೋಡ ಗ್ರಾಮಕ್ಕೆ ಆಗಮಿಸಿ



ಉದಯವಾಹಿನಿ ಚಿತ್ರ

ಸಂತೆ ಹಾಗೂ ಇನ್ನಿತರ ದಿನಸಿ ಸಾಮಾನು, ಸಲಕರಣೆಗಳು, ದಿನನಿತ್ಯ ಬೇಕಾಗುವ ಪ್ರತಿಯೊಂದು ವಸ್ತುಗಳು ಇಲ್ಲಿಂದಲ್ಲೇ ಖರೀದಿಸುತ್ತಾರೆ ಅದಕ್ಕಾಗಿ ಸಾರ್ವಜನಿಕರಿಗೆ ಅನುಕೂಲವಾಗಲು ಎಸ್.ಬಿ.ಐ ಶಾಖೆಯೊಂದು ಪ್ರಾರಂಬಿಸಬೇಕು.

ಗ್ರಾ.ಪಂ.2025-26ನೇ ಸಾಲಿನ 15ನೇ ಹಣಕಾಸು ಯೋಜನೆಯಡಿಯಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಡಬೇಕು ಈ ಎರಡು ಬೇಡಿಕೆಗಳನ್ನು ಆದಷ್ಟೂ ಬೇಗನೇ ಸಂಬಂಧಪಟ್ಟ ಅಧಿಕಾರಿಗಳು ಈಡೇರಿಸಬೇಕು ಇಲ್ಲಾದಿದ್ದರೆ ಬರುವ ದಿನಗಳಲ್ಲಿ ಗ್ರಾಮಸ್ಥರು ಒಗ್ಗೂಡಿ ಬೃಹತ್ ಪ್ರತಿಭಟನೆ ಮಾಡಲಾಗುವುದು ಎಂದರು. ಈ ಸಂದರ್ಭದಲ್ಲಿ ಜಾವೀದ ಗಣಾಪೂರ, ಮಹೇಬೂಬ ಗುರಂಪಳ್ಳಿ, ವಾಸಿಂ, ಮಸ್ತಾನ, ಮಶಾಕ್, ಕುತ್ಬೋದ್ದೀನ್, ಮಹ್ಮದ್ ಹನೀಫ್, ಇಲಿಯಾಸ್, ಫಾರೂಕ್, ದಸ್ತಗಿರ್, ಮಸ್ತಾನ, ಹಸೇನ್, ಫಾಜಲ್, ಖಾಜಾಮೈನೋ ಖರೇಷಿ, ಅಲ್ತಾಫ್ ನೈಕೋಡಿ, ಮಹೇಬೂಬ ತಾಂಡೂರ, ಅಸ್ಲಾಂ, ಮಹ್ಮದ್ ರಫೀಕ್ ಅನೇಕರಿದ್ದರು.

## ಕಾಡುಹಂದಿಗಳ ಹಾವಳಿ 3 ಲಕ್ಷಕ್ಕಿಂತ ಹೆಚ್ಚು ಕಬ್ಬು ಬೆಳೆನಷ್ಟ

• ಉದಯವಾಹಿನಿ, ಚಿಂಚೋಳಿ



ಉದಯವಾಹಿನಿ ಚಿತ್ರ

ತಾಲ್ಲೂಕಿನ ಸೋಮನಿಂಗದಳ್ಳಿ ಗ್ರಾಮದ ನರಸಪ್ಪ ಭಂಟ್ಟಾ ಎಂಬುವ ರೈತ ಸರ್ವೇ ನಂಬರ್ 61ರಲ್ಲಿ ಬೆಳೆದ ಕಬ್ಬು ಬೆಳೆಯನ್ನು ಕಾಡುಹಂದಿಗಳು ಸಂಪೂರ್ಣವಾಗಿ ನಾಶ ಮಾಡಿವೆ ಅಂದಾಜು 3 ಲಕ್ಷಕ್ಕಿಂತ ಹೆಚ್ಚು ಕಬ್ಬು ಬೆಳೆ ನಷ್ಟವಾಗಿದೆ ಸಂಬಂಧಪಟ್ಟ ಅರಣ್ಯ ಅಧಿಕಾರಿಗಳು ಮತ್ತು ಕೃಷಿ ಅಧಿಕಾರಿಗಳು, ಕಂದಾಯ ಇಲಾಖೆ ಅಧಿಕಾರಿಗಳು ಜಮೀನಿಗೆ ಆಗಮಿಸಿ ನಷ್ಟವಾದ ಕಬ್ಬಿನ ಬೆಳೆ ಪರಿಶೀಲಿಸಿ ಸೂಕ್ತ ಪರಿಹಾರ ನೀಡಬೇಕು ಎಂದು ಕಬ್ಬು ಬೆಳೆ ನಷ್ಟವಾದ ರೈತ ನರಸಪ್ಪ ಭಂಟ್ಟಾ ಮನವಿ ಮಾಡಿದ್ದಾರೆ.

## ಅಧಿಕ ಯೂರಿಯಾ ಮಾರಾಟ: 2 ಅಂಗಡಿ ಪರವಾನಗಿ ರದ್ದು

• ಉದಯವಾಹಿನಿ, ಕಾರಟಗಿ

ಈಗಾಗಲೇ ನೀಡಿರುವ ಸೂಚನೆಗಳನ್ನು ಪಾಲಿಸದೇ, ಅಗತ್ಯಕ್ಕಿಂತ ಅಧಿಕ ಪ್ರಮಾಣದಲ್ಲಿ ಯೂರಿಯಾ ರಸಗೊಬ್ಬರ ನೀಡಿ, ಕೃತಕ ಅಭಾವಕ್ಕೆ ಕಾರಣರಾದ ಪಟ್ಟಣದ 2 ಗೊಬ್ಬರದ ಅಂಗಡಿಗಳ ಪರವಾನಗಿಯನ್ನು ರದ್ದುಪಡಿಸಲಾಗಿದೆ.

ಪಟ್ಟಣದ ಎಪಿ ರೌಡಕುಂದ ಆಯಂಡ ಕಂಪನಿ ಹಾಗೂ ತಾಲ್ಲೂಕಿನ ಸಿದ್ದಾಪುರದ ಜುವಾರಿ ಫಾರ್ಮ್ ಹಬ್ ಲಿಮಿಟೆಡ್ ಅವರ ಪರವಾನಗಿಯನ್ನು ಸಹಾಯಕ ಕೃಷಿ ನಿರ್ದೇಶಕ ಸಂತೋಷ ಪಟ್ಟದಕಲ್ ಪರವಾನಗಿಯನ್ನು ರದ್ದು ಮಾಡಿದ್ದಾರೆ. ತಹಶೀಲ್ದಾರ್ ಎಂ. ಕುಮಾರಸ್ವಾಮಿ, ಸಹಾಯಕ ಕೃಷಿ ನಿರ್ದೇಶಕ ಸಂತೋಷ ಪಟ್ಟದಕಲ್, ಕೃಷಿ ಅಧಿಕಾರಿಗಳಾದ ನಾಗರಾಜ್, ಸುಧಾಕರ ಹಾಗೂ ಸಿಬ್ಬಂದಿ ವಿವಿಧ ಗೊಬ್ಬರದ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

## ಹೊಳೆಸಮುದ್ರ ಗ್ರಾಮಕ್ಕೆ ಜಿ,ಪ, ಸಿಇಒ ಭೇಟಿ, ಜೆಜೆಎಮ್ ಕಾಮಗಾರಿ ಪರಿಶೀಲನೆ

• ಉದಯವಾಹಿನಿ, ಕಮಲನಗರ

ತಾಲ್ಲೂಕಿನ ಹೊಳೆಸಮುದ್ರ ಗ್ರಾಮ ಪಂಚಾಯತ್ ಗ್ರಾಮಕ್ಕೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ ಅವರು ಭೇಟಿ ನೀಡಿ ಜಲ ಜೀವನ ಮಿಷನ್ ಕಾಮಗಾರಿ ಪರಿಶೀಲಿಸಿದರು.

ಜಿಲ್ಲಾ ಮತ್ತು ತಾಲ್ಲೂಕಾ ಅಧಿಕಾರಿಗಳು ಹೊಳೆಸಮುದ್ರ ಗ್ರಾಮಕ್ಕೆ ಭೇಟಿ ನೀಡಿದ್ದರು. ಇದೇ ಸಂದರ್ಭದಲ್ಲಿ ಡಾ. ಗಿರೀಶ್ ಬದೋಲೆ ಮಾತನಾಡಿ, ಮನೆ ಮನೆಗೆ ಶುದ್ಧ ಕುಡಿಯುವ ನೀರು ಒದಗಿಸಬೇಕು ನಲ್ಲಿ ನೀರು ಸೋರಿಕೆ ಯಾಗದ ರೀತಿಯಲ್ಲಿ ಹಾಗೂ ಗ್ರಾಮಸ್ಥರಿಗೆ ನೀರಿನ ಸಮಸ್ಯೆ ಯಾಗದಂತೆ ನೋಡಿ ಕೋಳ್ಳಿ ಎಂದು ಹೇಳಿದರು. ಅಲ್ಲಲ್ಲಿ ರಸ್ತೆ ಹದಗಟ್ಟಿದ್ದು ಚರಂಡಿ ವ್ಯವಸ್ಥೆಯ ಅವ್ಯವಸ್ಥೆ ಕಂಡು ಅಸಮಾಧಾನ ವ್ಯಕ್ತಪಡಿಸುವ ಮೂಲಕ ಅಧಿಕಾರಿಗಳಿಗೆ ಪ್ರಶ್ನಿಸಿದ್ದರು. ಅಲ್ಲದೆ ಮುಂದಿನ ದಿನಗಳಲ್ಲಿ ಎಲ್ಲಾ ಕೆಲಸಗಳು ಆಗಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಗ್ರಾಮಸ್ಥರ ಸಮ್ಮುಖದಲ್ಲಿ ಗ್ರಾಮಸ್ಥರು ಬೇಡಿಕೆ ಇಡುವುದರಿಂದ ಇಲ್ಲಿ ಜಲೋತ್ಸವ ಮನೆ ಮನೆಗೆ ಗಂಗೆ ಎಂಬ ಕಾಮಗಾರಿಯು ನಲ್ಲಿಗಳಿಗೆ ನೀರು ಪೂರೈಕೆ ಆಗದ ಕಾರಣಕ್ಕೆ ಜಲ ಜೀವನ ಮಿಷನ್ ಕಾಮಗಾರಿ ಪರಿಶೀಲನೆ ನಡೆಯಿತು.

## ಮೈಕ್ರೋ ಫೈನಾನ್ಸ್ ಸಿಬ್ಬಂದಿಗೆ ತಹಶೀಲ್ದಾರ್ ಎಚ್ಚರಿಕೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕುಂದಗೋಳ

ತಾಲ್ಲೂಕಿನಲ್ಲಿ ಮೈಕ್ರೋ ಫೈನಾನ್ಸ್‌ರು ಅನೇಕ ಗ್ರಾಹಕರಿಗೆ ಮಾನಸಿಕ ಕಿರುಕುಳ ನೀಡುತ್ತಿರುವ ಹಿನ್ನೆಲೆ ಅಧಿಕಾರಿಗಳ ಸಭೆ ಕರೆದು ಸರ್ಕಾರದ ನಿಯಮಾವಳಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ತಹಶೀಲ್ದಾರ್ ರಾಜು ಮಾವರಕರ ಸೂಚಿಸಿದರು. ತಹಶೀಲ್ದಾರ್ ಕಚೇರಿಯಲ್ಲಿ ಸಭೆ ನಡೆಸಿ ತಾಲ್ಲೂಕಿನ ಸಂಶಿ ಗ್ರಾಮದ ಮಹಿಳೆಯರು ಮನವಿ ನೀಡಿದ್ದು, ಗ್ರಾಹಕರಿಗೆ ಶಕ್ತಿ ಅನುಸಾರವಾಗಿ ಸಾಲ ವಿತರಿಸಬೇಕು, ಅನೇಕ ಮೈಕ್ರೋ ಫೈನಾನ್ಸ್ ಒಬ್ಬರಿಗೆ ಒಟ್ಟು 17 ಲಕ್ಷ ಸಾಲ ವಿತರಿಸಿದ್ದೀರಿ ಅವರು ಹೇಗೆ ಮರಳಿ ಪಾವತಿಸುತ್ತಾರೆ. ಸಾಲ ವಿತರಿಸುವಾಗ ಆರ್ಥಿಕ ಸ್ಥಿತಿ ಅನುಸಾರ ಸಾಲ ನೀಡಬೇಕು. ನೀವು ಯಾವ ಮಾನದಂಡ ಆಧಾರಿಸಿ ಸಾಲ ನೀಡಿದ್ದೀರಿ ಎಂದು ಪ್ರಶ್ನಿಸಿದರು. ಈ ರೀತಿ ಸಾಲ ನೀಡಿದರೆ ಅವರು ಪಾವತಿ ಮಾಡುವುದಾದರೂ ಹೇಗೆ. ಯಾವುದೇ ತೊಂದರೆ ನೀಡದೇ ಕಾಲಾವಕಾಶ ನೀಡಬೇಕು ಎಂದು ಸೂಚನೆ ನೀಡಿದರು.

### ಲೋಕಲ್ ಪೈಟ್‌ಗೆ ರಾಜಕೀಯ ಪಕ್ಷಗಳ ತೆರೆಮೇರೆಯ ಕಸರತ್ತು| ಅಭಿವೃದ್ಧಿಯೋ, ಅಭಿಮಾನವೋ ಪಟ್ಟಣದ ಮತದಾರರ ತೀರ್ಪು

# ಪರಿಷತ್ ಸದಸ್ಯರಿಗೆ ಪ್ರತಿಷ್ಠೆಯ ಕಣ ಕಾಳಗಿ ಪ.ಪಂ ಚುನಾವಣೆ

**ಉದಯವಾಹಿನಿ ವಿಶೇಷ**

• ಉದಯವಾಹಿನಿ, ಚಿಂಚೋಳಿ-ಕಾಳಗಿ





ಉದಯವಾಹಿನಿ ಚಿತ್ರ

ಚಿಂಚೋಳಿ ವಿಧಾನಸಭಾ ಮತಕ್ಷೇತ್ರದ ಕಾಳಗಿ ತಾಲ್ಲೂಕಿನ ಕಾಳಗಿ ಗ್ರಾಮ ಪಂಚಾಯಿತಿಯು ಪಟ್ಟಣ ಪಂಚಾಯತವಾಗಿ ಮಾರ್ಪಟ್ಟಾದ ನಂತರ ಚೊಚ್ಚಲ ಪಟ್ಟಣ ಪಂಚಾಯತ ಚುನಾವಣೆ ಇದೆ ಮೊದಲ ಬಾರಿಗೆ ಕಾಂಗ್ರೇಸ್ ಹಾಗೂ ಬಿಜೆಪಿ ಪಕ್ಷದ ಮದ್ಯೆ ಜಿದ್ದಾ-ಜಿದ್ದಿನ ಚುನಾವಣೆ ಅಖಾಡ ಪಂದ್ಯ ರೂಪುಗೊಂಡಿದ್ದು ಗೆಲ್ಲುವ ಅಭ್ಯರ್ಥಿಗಳು ನಿಷ್ಠಾವಂತ ಕಾರ್ಯಕರ್ತರಿಗೆ ಕಣಕ್ಕಿಳಿಸಲು ನಾಯಕರ ತೆರೆಮೇರೆಯಲ್ಲಿ ಕಸರತ್ತು ತುಂಬಾ ಜೋರಾಗಿ ನಡೆಯುತ್ತಿದೆ ಆದರೆ ಮತದಾರರು ಯಾರ ಕೈ ಹಿಡಿಯುತ್ತಾರೆಯೋ ಕಾದು ನೋಡಬೇಕಾಗಿದೆ.

> ಅಭಿಮಾನದಿಂದ ಗುತ್ತೇದಾರಗೆ ಕೈ ಹಿಡಿಯುತ್ತಾರಾ ಕಾಳಗಿ ಮತದಾರ

ಒಂದು ಕಡೆ ಅಭಿವೃದ್ಧಿ ಇನ್ನೊಂದೆಡೆ ಅಭಿಮಾನ ಅಖಂಡ ಎಂದರು ಅತಿಶಯೋಕ್ತಿಯಲ್ಲ, ನಿರಂತರವಾಗಿ ಎರಡನೇ ಬಾರಿಗೆ ಜನರಿಂದ ಆಯ್ಕೆಯಾದ ಚಿಂಚೋಳಿ ಮತಕ್ಷೇತ್ರದ ಬಿಜೆಪಿ ಶಾಸಕ ಡಾ.ಅವಿನಾಶ ಜಾಧವ ಹಾಗೂ ಕಾಂಗ್ರೇಸ್ ಪಕ್ಷದ ನಿಷ್ಠಾವಂತಿಕೆಗೆ ಹೆಸರಾದ ಕಾಳಗಿ ಪಟ್ಟಣದ ಮಣ್ಣಿನ ಮಗ ಡಾ.ಮಲ್ಲಿಕಾರ್ಜುನ ಖರ್ಗೆಜೀರವರ ಆಪ್ತರಾಗಿರುವ ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ (ಸಾವುಕಾರ) ನಡುವೆ ನೇರ ಹಣಾ-ಹಣಿ ಚುನಾವಣೆಯಾಗಿದೆ.

ಮುಖ್ಯವಾಗಿ ಸಾವುಕಾರ ನೇತೃತ್ವದ ಚೊಚ್ಚಲ ಪಟ್ಟಣ ಪಂಚಾಯತ ಚುನಾವಣೆ ಕಾಂಗ್ರೇಸ್ ಗದ್ದುಗೆ ಹಿಡಿಯುವಂತೆ ಮುಖ್ಯ ಉದ್ದೇಶವಾಗಿಸಿಕೊಂಡು ಕಾಂಗ್ರೇಸ್ ಪಕ್ಷದವರು ಮೀಸಲಾತಿ ಮಾಡಿಕೊಂಡು ಬಂದಿದ್ದು ಕಾಂಗ್ರೇಸ್ ಕಾರ್ಯಕರ್ತರಿಗೆ ಟೀಕೆಟಗಳು ಹಂಚುವ ರೂಪುರೇಶ ಮಾಡಿಕೊಂಡಿದ್ದಾರೆ ಎಂಬುವುದು ಬಿಜೆಪಿಯವರ ಆರೋಪವಾಗಿದೆ, ಕಾಂಗ್ರೇಸ್‌ನವರು ಹೇಗಾದರೂ ಮಾಡಿ ವಿಜಯ ಸಾಧಿಸುವಂತೆ ಪ್ರತಿಷ್ಠೆಗೆ ತೆಗೆದುಕೊಂಡಿದ್ದಾರೆ. ಕಾಂಗ್ರೇಸ್ ಮತ್ತು ಬಿಜೆಪಿ ಎರಡು ಪಕ್ಷಗಳು ಇಗಾಗಲೇ ಎರಡು ಸುತ್ತಿನ ಸಭೆ ನಡೆಸಿದ್ದು ಉತ್ತಮ ನಿಷ್ಠಾವಂತ ಅಭ್ಯರ್ಥಿಗಳು ಹುಡುಕುವ ಪ್ರಯತ್ನ ಬಿಜೆಪಿ ಪಕ್ಷದವರಾಗಿದ್ದು, ಕಾಂಗ್ರೇಸ್ ಪಕ್ಷದ ನಿಲುವು ಪಕ್ಷದ ನಿಷ್ಠಾವಂತ ಕಾರ್ಯಕರ್ತರೆ ಗೆಲುವಿನ ಕುದುರೆಗಳೆಂದು ಅವರ ಬೆಂಬಲದಂತೆ ಆರ್.ಜೆ ಬಾಸರವರ ಅಭಿಪ್ರಾಯದಂತೆ ಪಟ್ಟಣ ಪಂಚಾಯತ ಚುನಾವಣೆ ನಾವು ಗೆದ್ದೆ ಗೆಲ್ಲುತ್ತೆವೆ ಎಂದು ಈ ಬಾರಿ ವಿಶ್ವಸದಿಂದ ಸಾರ್ವಜನಿಕರಿಗೆ ನುಡಿದಿದ್ದಾರೆ ಆರ್‌ಜೆ ರವರೆಗೆ ಚುನಾವಣೆ ಹೊಸತೆನಲ್ಲ ಜಿದ್ದಾ ಜಿದ್ದಿಯಿಂದ ಕಳೆದ ಬಾರಿ ಅರಣಕಲ್ ಜಿಲ್ಲಾ ಪಂಚಾಯತ ಚುನಾವಣೆಯಲ್ಲಿ ವಿಜಯದ ಮಾಲೆ ಕೊರಳಿಗೆ ಹಾಕಿಕೊಂಡಿರುವರು. ಒಟ್ಟಾರೆಯಾಗಿ ಶಾಸಕರ ಅಭಿವೃದ್ಧಿ ಕೆಲಸವೋ,,! ವಿಧಾನ ಪರಿಷತ್ ಸದಸ್ಯರ ಅಭಿಮಾನದ ಚುನಾವಣೆಯೋ ಎಂಬುದು ಮತದಾರ ದೇವರ ಕೈಯಲ್ಲಿರುವುದಂತು ಸತ್ಯ.

**ಅಂತಿಮವಾಗದ ಅಭ್ಯರ್ಥಿಗಳು;-** ಆಕಾಂಕ್ಷಿಗಳಿಂದ ಅರ್ಜಿ ಪಡೆದಿವೆಯಾದರೂ ಇನ್ನು ಯಾವ ಪಕ್ಷವೂ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಿಲ್ಲ, ಸದ್ಯ ಬಿಜೆಪಿ ಹಾಗೂ ಕಾಂಗ್ರೇಸ್ ಆಕಾಂಕ್ಷಿಗಳಲ್ಲಿ ಕುತೂಹಲ ಹೆಚ್ಚಾಗಿದೆ, ಜೆಡಿಎಸ್ ಅಂತೂ ಆಟಕುಂಟ್ಟು ಲೆಕ್ಕಕ್ಕಿಲ್ಲ ಎಂಬುವಂತೆ ಇಲ್ಲಿಯವರೆಗೆ ಜೆಡಿಎಸ್ ನವರು ಯಾವುದೇ ಮುಖಂಡರು ಕಾರ್ಯಕರ್ತರು ಬೇಟಿಯೂ ನೀಡಿಲ್ಲ ಸಭೆಯೂ ಮಾಡಿಲ್ಲ, ಜೆಡಿಎಸ್ ಸೈಲೆಂಟ್ ಆಗಿದೆ ಎಂಬುವುದು ಜನರಿಗೆ ಕಾಣುತ್ತಿದೆ. ಪ್ರಸ್ತುತ ಚುನಾವಣೆಯಲ್ಲಿ ಬಿಜೆಪಿ ಹೈಕಮಾಂಡ್ ಆಗಿರುವ ಶಾಸಕ ಡಾ.ಅವಿನಾಶ ಜಾಧವ ಮೂಲತಃ ಕಾಳಗಿ ತಾಲ್ಲೂಕಿನ ಸ್ವತಂತ್ರ ಹೋರಾಗಾರ ದಿ.ಗೋಪಾಲರಾವ ಜಾಧವ ರವರ ಮೊಮ್ಮಗ ಸಂಸದ ಡಾ.ಉಮೇಶ ಜಾಧವ್ ಅವರ ಮಾರ್ಗದರ್ಶನದಂತೆ ಪುತ್ರ ಡಾ.ಅವಿನಾಶ್ ಜಾಧವರವರು ಪ.ಪಂ ಚುನಾವಣೆ ರಣತಂತ್ರ ಹೆಣೆಯುವುದಕ್ಕೆ ಸಿದ್ದರಾಗಿದ್ದಾರೆ, ಅವರ ಮೂಲಮಂತ್ರ ಅಭಿವೃದ್ಧಿಯಾಗಿದೆ.

**ಚುನಾವಣೆ ಮಾಹಿತಿ;-** ಕಾಳಗಿ ಪಟ್ಟಣದಲ್ಲಿ ಒಟ್ಟು 8446 ಮತದಾರರಿದ್ದು, ಆಯಾ ವಾರ್ಡಿನಂತೆ ಮತದಾರರ ಸಂಖ್ಯೆ ಹೊಂದಿದೆ. ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ (ಸಾವುಕಾರ) ರವರು ಕಾಳಗಿ ಗ್ರಾಮದ ಮಣ್ಣಿನ ಮಗ ಡಾ.ಮಲ್ಲಿಕಾರ್ಜುನ ಖರ್ಗೆಜಿ ರವರ ರಾಜಕೀಯ ಗರಡಿಯಲ್ಲಿ ಪಳಗಿದ ರಾಜಕೀಯ ಚಾಣಕ್ಯ. ಪಕ್ಷದ ನಿಷ್ಠಾವಂತ ಕಾರ್ಯಕರ್ತನೆಂದು ಗುರುತಿಸಿ 2017ರಲ್ಲಿ ಜಿಲ್ಲಾ ಕಾಂಗ್ರೇಸ್ ಸಮಿತಿಯ ಅಧ್ಯಕ್ಷರಾಗಿ ಇಲ್ಲಿಯವರೆಗೆ ಮುಂದುವರೆದಿದ್ದಾರೆ.

ಪರಿಷತ್ ಸದಸ್ಯರು ಕೆಲವೇ ತಿಂಗಳಲ್ಲಿ ಅವರ ಅನುದಾನಕ್ಕೂ ಮಿರಿ ಕಾಳಗಿ ತಾಲ್ಲೂಕಿಗೆ ಅಭಿವೃದ್ಧಿಯ ಪರ್ವ ಜೋರಾಗಿಸಿದ್ದಾರೆ. ಭರತನೂರ ಸಿಸಿ ರಸ್ತೆ, ಸಮುದಾಯ ಭವನ, ಮಲಘಾಣ ಸಂಗಮ ಬ್ರೀಜ್ ಕಂ ಬ್ಯಾರೇಜ್, ಪಟ್ಟಣದ ನೀಲಕಂಠ ಕಾಳೇಶ್ವರ ದೇವಸ್ಥಾನದ ಸರ್ವಾಂಗೀಣ ಅಭಿವೃದ್ಧಿಗೆ ಪಣತೊಟ್ಟಿದ್ದಾರೆ. ಪಂಚ ಗ್ಯಾರಂಟಿಯಿಂದ ರಾಜ್ಯದ ಜನರಲ್ಲಿ ಮೆಚ್ಚುಗೆ ಪಡೆದಿದೆ ಪಂಚ ಗ್ಯಾರಂಟಿಯ ಯೋಜನೆಯ ಜತೆಗೆ ಪರಿಷತ್ ಅವಧಿಯಲ್ಲಿ ಇನ್ನೂ ಹತ್ತು ಹಲವಾರು ಯೋಜನೆಯನ್ನು ರೂಪಿಸಿದ್ದಾರೆ, ತಮ್ಮ ವರ್ಚಸ್ಸಿನ ಮೇಲೆ ಜನನಾಯಕರಾದ ಗುತ್ತೇದಾರ (ಸಾವುಕಾರವರು) ತವರಿನ ಮತದಾರರ ಸಹಕಾರ ಬಯಸಿ ನೇತೃತ್ವದಲ್ಲಿ ಪಟ್ಟಣ ಪಂಚಾಯತ ಚುನಾವಣಾ ಕಾಂಗ್ರೇಸ್ ಗದ್ದುಗೆ ಸಹಕಾರ ಮಾಡಿದರೆ ಹೈಕಮಾಂಡನಲ್ಲಿ ಎಮ್‌ಎಲ್‌ಸಿ ಗುತ್ತೇದಾರ ರವರೆಗೆ ಪಟ್ಟಣ ಜನತೆ ಆನೆಬಲ ನೀಡಿದಂತಾಗುತ್ತದೆ.

**ನೀತಿ ಸಂಹಿತೆ ಜಾರಿ**

ಜುಲೈ 29 ರಂದು ಪಟ್ಟಣದಲ್ಲಿ ನೀತಿ ಸಂಹಿತೆ ಜಾರಿಯಾಗಿದ್ದು ಚುನಾವಣಾ ಮುಗಿದು ಎಣಿಕೆ ನಡೆಯುವವರೆಗೆ ಇರುತ್ತದೆ. 11 ವಾರ್ಡ್‌ಗಳಿಗೆ ಆ.17 ರಂದು ಚುನಾವಣೆ ನಡೆಯಲಿದೆ. ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆ.6ರಂದು ಬುಧವಾರ ಆರಂಭಗೊಳಲಿದೆ, ಬೆಳಗ್ಗೆ 11ರಿಂದ 3ಗಂಟೆಯ ವರೆಗೆ ತಾಪಂ ಕಾರ್ಯಯದಲ್ಲಿ ನಾಮಪತ್ರ ಪರಿಶೀಲನೆ ಸಲ್ಲಿಸುವ ಪ್ರಕ್ರಿಯೆ ಮಾಡಲಾಗುತ್ತದೆ, ಆ.8 ರಂದು ಮಧ್ಯಾಹ್ನ 3 ಗಂಟೆ ವರೆಗೆ ನಾಮಪತ್ರ ಹಿಂತೆಗೆದುಕೊಳ್ಳಲು ಅವಕಾಶವಿದೆ, ಆಯಾ ವಾರ್ಡ್ ಮೀಸಲಾತಿ ಸಹ ಆದೇಶ ಹೊರಡಿಸಲಾಗಿದೆ ಎಂದು ಚುನಾವಣಾ ಅಧಿಕಾರಿ ಬಸಲಿಂಗಪ್ಪ ಡಿಗ್ಗಿ, ತಹಶೀಲ್ದಾರ ಪೃಥ್ವಿರಾಜ್ ಪಾಟೀಲರವರು ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.



> ಪರಿಷತ್ ಶಾಸಕರ ಅನುದಾನವನ್ನು ಮಿರಿ ಈಗಾಗಲೆ ಕಾಳಗಿ ಪಟ್ಟಣದಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ಅಡಿಗಲ್ಲು ಮಾಡಿ ಪ್ರಾರಂಭಿಸಿದ್ದೆನೆ, ಮೇಲಾಗಿ ರಾಜ್ಯ ಸರ್ಕಾರದಲ್ಲಿ ಕಾಂಗ್ರೇಸ್ ಪಕ್ಷ ಅಧಿಕಾರದಲ್ಲಿದೆ ಸರಕಾರದಿಂದ ಹೆಚ್ಚಿನ ಅನುದಾನ ತಂದು ಕಾಳಗಿ ತಾಲ್ಲೂಕಿನ ಅಭಿವೃದ್ಧಿಗೆ ಬೇಕಾದ ಸಕಲ ಸವಲತ್ತು ಒದಗಿಸಲು ಶ್ರಮವಹಿಸಿ ಎಲ್ಲಾ ಇಲಾಖೆಯ ಕೆಲಸ ಇಲಾಖೆಯ ಕಟ್ಟಡ ಕಾಳಗಿಯಲ್ಲಿ ಮಾಡಿಸಲು ಪಣತೊಟ್ಟದ್ದೇನೆ. ಪಟ್ಟಣ ಪಂಚಾಯತ ಚುನಾವಣೆಯಲ್ಲಿ ಕಾಳಗಿ ಜನತೆ ನನ್ನನ್ನು ಕೈ ಹಿಡಿಯುತ್ತಾರೆ ಎಂಬುವುದು ನನಗೆ ನಂಬಿಕೆಯಿದೆ. ಕಾಂಗ್ರೇಸ್ ಪಕ್ಷದ ತಿರ್ಮಾನದಂತೆ ನಿಷ್ಠಾವಂತ ಕಾರ್ಯಕರ್ತರ ಆಕ್ಷೇಪಣೆ ಮೇರೆಗೆ ಹಾಗೂ ಗೆಲುವಿನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಮುಂದಾಗುತ್ತೇವೆ.
>
> - ಜಗದೇವ ಗುತ್ತೇದಾರ, ಕಾಳಗಿ ಶಾಸಕರು, ವಿಧಾನ ಪರಿಷತ್ ಬೆಂಗಳೂರು.



> ಚುನಾವಣೆ ಬರುತ್ತೆ ಹೊಗುತ್ತೆ ಕಾಳಗಿ ಪಟ್ಟಣದಲ್ಲಿ ಬಿಜೆಪಿ ಸರಕಾರ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಮಾಡುವ ಹಣದ ಹೊಳೆಯನ್ನೆ ಹರಿಸಿದ್ದೇನೆ ಈ ಅಭಿವೃದ್ಧಿಯನ್ನಿಟ್ಟೊಕ್ಕೊಂಡು ಜನತೆಯತ್ತಾ ಮತ ಕೇಳುತ್ತೇವೆ ನಾನು ಸಹ ತಾಲ್ಲೂಕಿನ ಸ್ವಾತಂತ್ರ ಹೋರಾಟ ಕುಟುಂಬದಲ್ಲಿ ಜನಿಸಿದ್ದೇನೆ ನನಗೆ ಕಾಳಗಿ ತಾಲ್ಲೂಕು ಮಾದರಿ ತಾಲ್ಲೂಕು ಮಾಡುವುದೆ ನಮ್ಮ ಉದ್ದೇಶ. ಚೊಚ್ಚಲ ಪಟ್ಟಣ ಪಂಚಾಯತ ಚುನಾವಣೆ ಎದುರಾಗಿದ್ದು ತುಂಬಾ ಸಂತೋಷದ ವಿಷಯ ಬಿಜೆಪಿ ಪಕ್ಷದ ನಿರ್ಧಾರದಂತೆ ಗೆಲ್ಲುವ ಅರ್ಹ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗುವುದು.
>
> - ಡಾ.ಅವಿನಾಶ ಜಾಧವ ಶಾಸಕರು, ಚಿಂಚೋಳಿ ಮತಕ್ಷೇತ್ರ.

## ಅಗ್ನಿಶಾಮಕ ಠಾಣೆ ಸಿಬ್ಬಂದಿಗೆ ಆರೋಗ್ಯ ತಪಾಸಣೆ: ಹೃದಯದ ಕಾಳಜಿ ವಹಿಸಿ

• ಉದಯವಾಹಿನಿ, ಮುದ್ದೇಬಿಹಾಳ

ನಾವು ಸೇವಿಸುವ ಆಹಾರ, ದೈಹಿಕವಾಗಿ ಕೈಗೊಳ್ಳುವ ಚಟುವಟಿಕೆಗಳು ಹಾಗೂ ಒತ್ತಡ ಮುಕ್ತ ಬದುಕು ಸಾಗಿಸುವುದರಿಂದ ಹೃದಯಾಘಾತಗಳಂತಹ ಘಟನೆಗಳಿಂದ ದೂರವಿರಬಹುದಾಗಿದೆ ಎಂದು ಕರೇಕಲ್ ಪಾಟೀಲ್ ಮಲ್ಟಿಸ್ಪೆಶಾಲಿಟಿ ಹಾಸ್ಪಿಟಲ್ ಮುಖ್ಯಸ್ಥ ಡಾ.ಬಸನಗೌಡ ಕರೇಕಲ್‌ಪಾಟೀಲ್ ಹೇಳಿದರು.

ಪಟ್ಟಣದ ಅಗ್ನಿಶಾಮಕ ಠಾಣೆಯ ಆವರಣದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆ, ಫಕೀರೇಶ್ವರ ಡಯಗ್ನೂಸ್ಟಿಕ್ ಸೆಂಟರ್ ಸಹಯೋಗದಿಂದ ಪತ್ರಿಕಾ ದಿನಾಚರಣೆ ಅಂಗವಾಗಿ ಅಗ್ನಿಶಾಮಕ ಠಾಣೆಯಲ್ಲಿ ಏರ್ಪಡಿಸಿದ್ದ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ಆರೋಗ್ಯ ಉಚಿತ ತಪಾಸಣಾ ಶಿಬಿರ ಹಾಗೂ ಹೃದಯ ರೋಗದ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಹೃದಯ ರೋಗ ಕಾರಣ ಪರಿಹಾರ ಕುರಿತು ಮಾತನಾಡಿದರು. ನಾವೆಲ್ಲ ಸಂಪತ್ತಿನ ಹಿಂದೆ ಬಿದ್ದಿದ್ದೇವೆ. ಆದರೆ ಆರೋಗ್ಯವನ್ನು ಸಂಪತ್ತು ಎಂದು ಮರೆತಿದ್ದೇವೆ ಎಂದು ಹೇಳಿದರು.

ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಗುರು ತಾರನಾಳ ಮಾತನಾಡಿ, ಪತ್ರಕರ್ತರಾದವರು ಸತ್ಯವನ್ನು ಹೇಳಲು ಹಿಂಜರಿಯಬಾರದು. ಪತ್ರಕರ್ತರು ರಾಜಕಾರಣಿಗಳ



ಉದಯವಾಹಿನಿ ಚಿತ್ರ

ಸಂಬಂಧ ಸೌಹಾರ್ದಯುತವಾಗಿದ್ದರೆ ಸಮಾಜದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಜನರಿಗೆ ತಲುಪಿಸುವುದಕ್ಕೆ ಸಾಧ್ಯವಿದೆ ಎಂದರು.

ಐಎನ್‌ಬಿಡಬ್ಲೂಯಎಫ್ ಸಂಘಟನೆ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಸಂಗೀತಾ ನಾಡಗೌಡ, ಫಕೀರೇಶ್ವರ ಡಯಗ್ನೋಸ್ಟಿಕ್ ಸೆಂಟರ್ ಮುಖ್ಯಸ್ಥ ಡಾ.ಸಿ.ಕೆ. ಶಿವಯೋಗಿಮಠ, ಬಿಜೆಪಿ ನಾಯಕಿ ಕಾಶೀಬಾಯಿ ರಾಂಪೂರ, ಅಧ್ಯಕ್ಷತೆ ವಹಿಸಿದ್ದ ಕಾನಿಪ ಧ್ವನಿ ಜಿಲ್ಲಾಧ್ಯಕ್ಷ ಯೂಸೂಫ ನೇವಾರ, ತಾಲ್ಲೂಕು ಅಧ್ಯಕ್ಷ ಶಂಕರ ಈ.ಹೆಬ್ಬಾಳ ಮಾತನಾಡಿದರು. ಖಾಸ್ಗತೇಶ್ವರ ಮಠದ ಶರಣೆ ನೀಲಮ್ಮ ವಿರಕ್ತಮಠ ಸಾನಿಧ್ಯ ವಹಿಸಿದ್ದರು.

**ಇಸಿಜಿ, ಆರ್.ಬಿ.ಎಸ್ ಆರೋಗ್ಯ ಉಚಿತ ತಪಾಸಣೆ:** ಪತ್ರಿಕಾ ದಿನಾಚರಣೆಯ ಅಂಗವಾಗಿ ಪಟ್ಟಣದ ಫಕೀರೇಶ್ವರ ಡಯಗ್ನೋಸ್ಟಿಕ್ ಸೆಂಟರ್‌ನಲ್ಲಿ ಬೆಳಗ್ಗೆ ಅಗ್ನಿಶಾಮಕ ಠಾಣೆಯ ಸಿಬ್ಬಂದಿಗೆ ಇಸಿಜಿ, ಆರ್.ಬಿ.ಎಸ್ ಆರೋಗ್ಯ ಉಚಿತ ತಪಾಸಣಾ ಶಿಬಿರಕ್ಕೆ ಪುರಸಭೆ ಉಪಾಧ್ಯಕ್ಷೆ ಪ್ರೀತಿ ದೇಗಿನಾಳ ಚಾಲನೆ ನೀಡಿದರು.

ಡಾ.ಸಿ.ಕೆ.ಶಿವಯೋಗಿಮಠ, ಅಗ್ನಿಶಾಮಕ ಠಾಣೆಯ ಪ್ರಭಾರ ಅಧಿಕಾರಿ ನಾಗೇಶ ರಾಠೋಡ, ಅಯ್ಯಪ್ಪ ಸೇವಾ ಸಮಿತಿ ಸದಸ್ಯ ಟಿ.ವಿಜಯಭಾಸ್ಕರ್, ಸಂಘಟನೆಯ ಅಧ್ಯಕ್ಷ ಶಂಕರ ಹೆಬ್ಬಾಳ, ಪ್ರಧಾನ ಕಾರ್ಯದರ್ಶಿ ಗುಲಾಮಮೊಹ್ಮದ ದಫೇದಾರ, ರವಿ ತೇಲಂಗಿ, ಹನಮಂತ ನಲವಡೆ ಇದ್ದರು.

> ಅಗ್ನಿಶಾಮಕ ಠಾಣೆಯ ಸಿಬ್ಬಂದಿಯನ್ನು ಜನರು ಆಪತ್ತಿನ ಸಮಯದಲ್ಲಿ ನೆನಪಿಸಿಕೊಳ್ಳುವುದು ಸಹಜ. ಆದರೆ ಪತ್ರಕರ್ತರ ಧ್ವನಿ ಸಂಘಟನೆಯವರು ಸಮಾಜದ ಮುಖ್ಯವಾಹಿನಿಯಲ್ಲಿ ಅಗ್ನಿ ಶಾಮಕ ಠಾಣೆಯ ನೌಕರರಿಗೂ ಆದ್ಯತೆ ಕೊಟ್ಟಿರುವುದು ಖುಷಿ ತರಿಸಿದೆ
>
> -ಶಶಿಧರ ನೀಲಗಾರ
>
> ಅಗ್ನಿಶಾಮಕ ಠಾಣೆಯ ಜಿಲ್ಲಾ ಅಧಿಕಾರಿ

## ಮಾಜಿ ನೌಕರನ ಬಳಿ 24 ಮನೆ ನಿಬ್ಬೆರಗಾದ ಲೋಕಾಯುಕ್ತ ಅಧಿಕಾರಿಗಳು

• ಉದಯವಾಹಿನಿ ಕೊಪ್ಪಳ

ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಚೇರಿ ಸಹಾಯಕರಾಗಿ ಕೆಲಸ ಮಾಡಿ ಆರು ತಿಂಗಳ ಹಿಂದೆ ವಜಾಗೊಂಡಿದ್ದ ಕಳಕಪ್ಪ ನಿಡಗುಂದಿ ಎಂಬುವರ ಮನೆ, ಕಚೇರಿ ಮೇಲೆ ಗುರುವಾರ ಇಲ್ಲಿನ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದು 24 ಮನೆ ಮತ್ತು ನಾಲ್ಕು ನಿವೇಶನಗಳ ದಾಖಲೆಗಳು ಸೇರಿದಂತೆ ಅಪಾರ ಪ್ರಮಾಣದ ಆಸ್ತಿ ಪತ್ತೆಯಾಗಿದೆ.



ಕೊಪ್ಪಳ ಲೋಕಾಯುಕ್ತ ಡಿವೈಎಸ್‌ಪಿ ವಸಂತಕುಮಾರ್ ನೇತೃತ್ವದಲ್ಲಿ ಪೊಲೀಸ್ ಇನ್ಸ್ಪೆಕ್ಟರ್ ಸುನೀಲ್ ಮ್ಯಾಗಿನಮನಿ, ಚಂದ್ರಪ್ಪ, ವಿಜಯಕುಮಾರ, ನಾಗರತ್ನ, ಶೈಲಾ ಪಾಟೇಕರ್ ಮತ್ತು ಸಿಬ್ಬಂದಿ ಬೆಳಗಿನ ಜಾವದಿಂದಲೇ ದಾಖಲೆಗಳ ಪರಿಶೀಲಿಸಿದಾಗ ಮನೆ, ನಿವೇಶನಗಳ ಜೊತೆ 40 ಎಕರೆ ಕೃಷಿ ಜಮೀನು, 350 ಗ್ರಾಂ ಚಿನ್ನಾಭರಣ, ಒಂದೂವರೆ ಕೆ.ಜಿ. ಬೆಳ್ಳಿಯ ಆಭರಣಗಳು, ಎರಡು ಬೈಕ್ ಮತ್ತು ಎರಡು ಕಾರುಗಳ ದಾಖಲೆಗಳು ಲಭಿಸಿವೆ.

**ಚಿಂಚೋಳಿಕರ್ ಆಪ್ತ:** ಇಲ್ಲಿ ಕೆಆರ್‌ಐಡಿಎಲ್ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿದ್ದ ಝುರಣಪ್ಪ ಎಂ. ಚಿಂಚೋಳಿಕರ್ ಅವರ ಆಪ್ತ ಕಳಕಪ್ಪ 2023-24 ಹಾಗೂ 2024-25ರಲ್ಲಿ ಜಿಲ್ಲೆಯಲ್ಲಿ ಮೂಲ ಸೌಕರ್ಯ ಕಲ್ಪಿಸುವ 108 ಕಾಮಗಾರಿಗಳಲ್ಲಿ ಕ್ರಿಯಾ ಯೋಜನೆ ರೂಪಿಸದೇ ಅನುಷ್ಠಾನ ಮಾಡಿದ್ದರು.


ಇನ್ನೂ ಕೆಲ ಕೆಲಸಗಳನ್ನು ಮಾಡದೆ ನಕಲಿ ಬಿಲ್ ಸೃಷ್ಟಿಸಿ ಜಿಲ್ಲಾ ಪಂಚಾಯಿತಿ ಸಿಇಒ ಅವರ ಸಹಿಯನ್ನೇ ನಕಲಿ ಮಾಡಿ 72 ಕೋಟಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದರು. ಇಲಾಖೆಯ ಅನುಮತಿ ಪಡೆಯದೆ ಕೋಟ್ಯಂತರ ರೂಪಾಯಿ ಮೊತ್ತವನ್ನು ಹಣ ಪಡೆದುಕೊಂಡಿದ್ದ ಬಗ್ಗೆ ಕೊಪ್ಪಳ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕಳೆದ ವರ್ಷ ಚಿಂಚೋಳಕರ್ ಅವರನ್ನು ಸೇವೆಯಿಂದ ವಜಾ ಮಾಡಲಾಗಿತ್ತು. ಈ ಪ್ರಕರಣದ ಎರಡನೆ ಆರೋಪಿ ಕಳಕಪ್ಪ ಮನೆ ಶೋಧಿಸಿದಾಗ ಅವರ ಪತ್ನಿ ಹೆಸರಿನಲ್ಲಿ ಆರು ಮನೆ, ಎರಡು ನಿವೇಶನ ಲಭಿಸಿವೆ.

## ಹಳೇಬೀಡು, ಮಾದೀಹಳ್ಳಿ ಕೆರೆಗೆ ನೀರು: ಚಾಲನೆ

• ಉದಯವಾಹಿನಿ ಬೇಲೂರು

ತಾಲ್ಲೂಕಿನ ಹಾಲ್ಗೊರೆ ಜಾಕ್‌ವೆಲ್‌ನಿಂದ ಹಳೇಬೀಡು ಮತ್ತು ಮಾದೀಹಳ್ಳಿ ಭಾಗದ ಕೆರೆಗಳಿಗೆ ನೀರು ಹರಿಸಲು ಪುಷ್ಪಗಿರಿ ಸೋಮಶೇಖರ ಸ್ವಾಮೀಜಿ ಮತ್ತು ಶಾಸಕ ಎಚ್.ಕೆ.ಸುರೇಶ್ ಚಾಲನೆ ನೀಡಿದರು. ಶಾಸಕ ಎಚ್.ಕೆ.ಸುರೇಶ್ ಮಾತನಾಡಿ, ಚಾನೆಲ್‌ಗಳನ್ನು ಸ್ವಚ್ಛ ಮಾಡುವುದರ ಜೊತೆಗೆ ರೈತರು ಬೆಳೆಯುವ ಬೆಳೆಗಳಿಗೆ ಸಕಾಲದಲ್ಲಿ ನೀರನ್ನು ಹರಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ 15 ಕೋಟಿ ವೆಚ್ಚದಲ್ಲಿ ಯಗಚಿ ಏತ ನೀರಾವರಿ ನಿರ್ಮಾಣವಾಗಿದೆ. ಅಂದಿನಿಂದ ಇಂದಿನ ತನಕ





ಉದಯವಾಹಿನಿ ಚಿತ್ರ

ಜಾಕ್‌ವೆಲ್ ಬಳಿ ಕನಿಷ್ಠ ರಸ್ತೆ ಹಾಗೂ ಮೂಲ ಸವಲತ್ತುಗಳನ್ನು ನೀಡಿಲ್ಲ. ತಾಲ್ಲೂಕಿನಲ್ಲಿ ಎತ್ತಿನಹೊಳೆ ಕಾಮಗಾರಿ ಕೂಡ ಅರ್ಧಕ್ಕೆ ನಿಂತಿದ್ದು, ಬೆಳೆ ನಾಶವಾಗುತ್ತಿದೆ. ಈ ಬಗ್ಗೆ ಅಧಿಕಾರಿಗಳು ಕ್ರಮವಹಿಸಬೇಕು. ರಣಘಟ್ಟ ಯೋಜನೆ ಮಂದಗತಿಯಲ್ಲಿ ನಡೆಯುತ್ತಿರುವ ಬಗ್ಗೆ ಮುಂದಿನ ಅಧಿವೇಶನದಲ್ಲಿ ಚರ್ಚೆ ನಡೆಸುತ್ತೇನೆ ಎಂದರು.

## ಸರ್ಕಾರದ ಶಾಲೆಗಳಲ್ಲಿ ಮಕ್ಕಳನ್ನು ಓದಿಸಿ, ಶಿಕ್ಷಣಕ್ಕಾಗಿ ಸರ್ಕಾರ ಸೌಲಭ್ಯ ನೀಡುತ್ತಿದೆ

• ಉದಯವಾಹಿನಿ ಸಿಂಧನೂರು

ಸರ್ಕಾರದ ಶಾಲೆಗಳಲ್ಲಿ ಮಕ್ಕಳನ್ನು ಒದಿಸಿ ಶಿಕ್ಷಣಕ್ಕಾಗಿ ಸರ್ಕಾರ ಸಾಕಷ್ಟು ಸರ್ಕಾರದ ಸೌಲಭ್ಯಗಳನ್ನು ಒದಗಿಸುವದರಿಂದ ನಿಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳಿಸಿ ಉತ್ತಮ ವಿದ್ಯಾಭ್ಯಾಸ ಕೊಡಿಸುವಂತೆ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ರೂಪಾ. ಸಿ ವಗ್ಗಾ ಹೇಳಿದರು.

ತಾಲ್ಲೂಕು ಕಾನೂನು ಸೇವಾ ಸಮಿತಿ.ತಾಲ್ಲೂಕು ನ್ಯಾಯವಾದಿಗಳ ಸಂಘ. ಸತಾಲ್ಲೂಕು ಪಂಚಾಯತ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಕಾರ್ಮಿಕ ಇಲಾಖೆ ಸಂಯುಕ್ತ ಆಶ್ರಯದಲ್ಲಿ ತಾಲ್ಲೂಕು ಪಂಚಾಯತ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ. ಹಾಗೂ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸರ್ಕಾರದ





ಉದಯವಾಹಿನಿ ಚಿತ್ರ

ಶಾಲೆಗಳಲ್ಲಿ ಶಿಕ್ಷಣಕ್ಕಾಗಿ ಉಚಿತವಾಗಿ ಸಿಗುವ ಸೌಲಭ್ಯಗಳು ಖಾಸಗಿ ಶಾಲೆಗಳಲ್ಲಿ ಸಿಗುವುದಿಲ್ಲ ಅಲ್ಲಿ ಅಧಿಕ ಹಣ ಕೊಟ್ಟು ಖರೀದಿ ಮಾಡಬೇಕಾಗಿದೆ ಎಂದರು. ಮಹಿಳೆಯರಿಗೆ ಮದುವೆ. ವಿದೇಶಗಳಲ್ಲಿ ಕೆಲಸ ಕೊಡಿಸುವ ಸೇರಿದಂತೆ ಇನ್ನಿತರ ಆಸೆ ಆಮೀಷಗಳನ್ನು ತೊರಿಸಿ ನಂತರ ಅವರನ್ನು ದೈಹಿಕ ಶೋಷಣೆ ಮಾಡುವ ಮೂಲಕ ಅನೈತಿಕ ಚಟುವಟಿಕೆಗಳಿಗೆ ಮಾರಾಟ ಮಾಡುವದೆ ಮಾನವ ಕಳ್ಳ ಸಾಗಾಣಿಕೆ ಎಂದರು. ಗ್ರಾಮೀಣ ಪ್ರದೇಶಗಳಲ್ಲಿ ಅತಿ ಹೆಚ್ಚು ಬಡತನ ಇದೆ ಬಡತನವನ್ನು ಕೆಲವರು ದುರುಪಯೋಗ ಮಾಡಿಕೊಂಡು ಹಣ ಕೊಟ್ಟು ಮಹಿಳೆಯರನ್ನು ವಿದೇಶಗಳಿಗೆ ಕರೆದುಕೊಂಡು ಹೋಗುವುದನ್ನು ನಾವು ನೋಡಿದ್ದೆವೆ ಕೇಳಿದ್ದೇವೆ, ಮಾನವ ಕಳ್ಳ ಸಾಗಾಣಿಕೆಗೆ ಬಡತನ ಒಂದು ಕಾರಣವಾಗಿದೆ ಎನ್ನಬಹುದು.

ಅಂಗನವಾಡಿ ಕಾರ್ಯಕರ್ತೆಯರು ನಿಮ್ಮ ಕೇಂದ್ರಗಳ ವ್ಯಾಪ್ತಿಗೆ ಬರುವ ಜನರಲ್ಲಿ ಮಾನವ ಕಳ್ಳ ಸಾಗಾಣಿಕೆ ತಡೆಗಟ್ಟುವ ಬಗ್ಗೆ ಅರಿವು ಮೂಡಿಸಬೇಕು ಎಂದರು.

ವಕೀಲರ ಸಂಘದ ತಾಲ್ಲೂಕು ಅಧ್ಯಕ್ಷರಾದ ಎನ್ ರಾಮನಗೌಡ .ಸಹಾಯಕ ಸರ್ಕಾರಿ ಅಬಿಯೋಜಕರಾದ ಮಾರುತಿ. ಆರ್ ಹನುಮೇಶ ನಾಯಕ .ಸಿಡಿಪಿಓ ಗಳಾದ ಲಿಂಗನಗೌಡ. ಅಶೋಕ. ಕಾರ್ಮಿಕ ನಿರೀಕ್ಷಕರಾದ ವಿಜಯ ಲಕ್ಷ್ಮಿ. ವೇದಿಕೆಯ ಮೇಲೆ ಇದ್ದರು.

# ತೋಟದ ಮನೆ ನಿರ್ಮಾಣ, ಹೈನೋದ್ಯಮಕ್ಕೆ ವಿಡಿಸಿಸಿ ಬ್ಯಾಂಕ್ ಸಾಲ: ಸಚಿವ ಶಿವಾನಂದ

### ರೈತರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನೀಡುವ ಶೂನ್ಯ ಬಡ್ಡಿ ದರದ ಸಾಲದ ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು

• ಉದಯವಾಹಿನಿ ವಿಜಯಪುರ

ಜಿಲ್ಲೆಯ ರೈತರು ಜಿಲ್ಲಾ ಕೇಂದ್ರ, ಸಹಕಾರಿ ಬ್ಯಾಂಕ್ ಮೂಲಕ ನೀಡುವ ಶೂನ್ಯ ಬಡ್ಡಿ ದರದ ಸಾಲದ ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು. ಅದರಿಂದ ರೈತರೇ ಸಾಲ ನೀಡುವಂತೆ ಅಂದರೆ ಜಿಲ್ಲಾ ಕೇಂದ್ರ ಬ್ಯಾಂಕ್‌ನಲ್ಲಿ ಲಕ್ಷಾಂತರ ರೂ. ಠೇವಣಿ ಇಡುವಂತೆ ಆರ್ಥಿಕ ಉನ್ನತಿ ಸಾಧಿಸಬೇಕು ಎಂದು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷರೂ ಆಗಿರುವ ಜವಳಿ, ಕೃಷಿ ಮಾರುಕಟ್ಟೆ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವ ಶಿವಾನಂದ ಪಾಟೀಲ ರೈತರಿಗೆ ಕಿವಿ ಮಾತು ಹೇಳಿದರು.

ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲ್ಲೂಕಿನ ಪಡಗಾನೂರ ಗ್ರಾಮದಲ್ಲಿನ ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ ಅಮೃತ ಮಹೋತ್ಸವ ಹಾಗೂ ಇದರ ಸವಿನೆನಪಿಗಾಗಿ ನಿರ್ಮಿಸಿರುವ ನೂತನ ಕಟ್ಟಡ ಲೋಕಾರ್ಪಣೆ ಮಾಡಿ ಮಾತನಾಡಿ, ಶಾಕಸರಾದ ರಾಜುಗೌಡ ಪಾಟೀಲ ಅವರೊಂದಿಗೆ ಜಂಟಿಯಾಗಿ ಸಮಾರಂಭಕ್ಕೆ ಚಾಲನೆ ನೀಡಿ ಮಾತಗನಾಡಿದ ಸಚಿವರು, ಸಹಕಾರಿ ರಂಗದಲ್ಲಿರುವ ಇರುವವರು ಪ್ರಾಮಾಣಿಕರಾಗಿದ್ದರೆ ಮಾತ್ರ ಸಹಕಾರಿ ಕ್ಷೇತ್ರ ಉಳಿಯಲು ಸಾಧ್ಯ ಎಂದರು. ಸದಾ ಸಮಾಜಮುಖಿ ಚಿಂತನೆ ಮಾಡುವ ಹಣಮಂತ್ರಾಯ



ಉದಯವಾಹಿನಿ ಚಿತ್ರ

> ನೂತನ ಕಟ್ಟಡ ಲೋಕಾರ್ಪಣೆ

ಅವರು ತಮ್ಮ ಪತ್ನಿ ಇಂದಿರಾಬಾಯಿ ಅವರ ಹೆಸರಿನಲ್ಲಿ ಲಕ್ಷಾಂತರ ರೂ. ಬೆಲೆ ಬಾಳುವ ನಿವೇಶನವನ್ನು ಸಂಘದ ಕಟ್ಟಡ ನಿರ್ಮಾಣಕ್ಕೆ ದಾನ ನೀಡಿದ್ದು, ಇದೀಗ ಸ್ವಂತ ಕಟ್ಟಡ ಹೊಂದಲು ಸಾಧ್ಯವಾಗಿದೆ. ಇಂದಿರಾಬಾಯಿ-ಹಣಮಂತ್ರಾಯಗೌಡ ಅವರ ಆದರ್ಶ ದಾಂಪತ್ಯ, ಸಮಾಜಮುಖಿ ಗುಣಗಳು ಇಂದಿನ ಜನರಿಗೆ ಮಾದರಿಯಾಗಲಿ ಎಂದು ಆಶಿಸಿದರು.

ಜಿಲ್ಲೆಯ ರೈತರು ಜಿಲ್ಲಾ ಕೇಂದ್ರ, ಸಹಕಾರಿ ಬ್ಯಾಂಕ್ ಹಾಗೂ ಗ್ರಾಮೀಣ ಸಹಕಾರಿ ಬ್ಯಾಂಗಳ ಮೂಲಕ ರೈತರು ಪಡೆದ ಸಾಲವನ್ನು 2017-18 ಹಾಗೂ 2018-19 ರಲ್ಲಿ ಸರ್ಕಾರ ಸಾಲ ಮನ್ನಾ ಯೋಜನೆಯಲ್ಲಿ ಕೋಟ್ಯಂತರ ರೂ. ಸಾಲ ಮನ್ನಾ ಮಾಡಿದೆ. ನಮ್ಮ ಬ್ಯಾಂಕ್ ಸಾಲ ನೀಡಿದ್ದರಿಂದಲೇ ರೈತರಿಗೆ ಸಾಲಮನ್ನಾ ಯೋಜನೆ ಲಾಭ ಸಿಗುವಂತಾಗಿದೆ ಎಂಬುದು ಗಮನೀಯ ಎಂದರು.

ಜಿಲ್ಲೆಯ ರೈತರು ಒಬ್ಬರು ಬೆಳೆದ ಬೆಳೆಯನ್ನೇ ಎಲ್ಲರೂ ಬೆಳೆದು ಮಾರುಕಟ್ಟೆಗೆ ಕೊಂಡೊಯ್ದಾಗ ಬೆಲೆ ಕುಸಿತವಾಗಿ, ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ಸಿಗದೇ ಆರ್ಥಿಕ ಹಾನಿ ಅನುಭವಿಸಬೇಕಾಗುತ್ತದೆ. ವೈಜ್ಞಾನಿಕವಾಗಿ ಕೃಷಿ ಮಾಡಬೇಕು. ಆರ್ಥಿಕ ಸಬಲೀಕರಣಕ್ಕೆ ಸಹಕಾರಿ ಆಗಬಲ್ಲ ಬೆಳೆಗಳನ್ನು ಬೆಳೆಯಬೇಕು. ಏಕ ಬೆಳೆ ಪದ್ಧತಿಯ ಬದಲಾಗಿ ಬಹು ಬೆಳೆಯ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ಆಗಲೇ ರೈತರು ಆರ್ಥಿಕವಾಗಿ ಸದೃಢರಾಗಲು ಸಾಧ್ಯ ಎಂದು ಸಲಹೆ ನೀಡಿದರು. ಕಡಗಂಚಿ ಶ್ರೀವೀರಭದ್ರ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು, ವಿಡಿಸಿಸಿ ಬ್ಯಾಂಕ್ ನಿರ್ದೇಶಕರೂ ಆಗಿರುವ ಪಡಗಾನೂರ ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಸಹಕಾರಿ ಸಂಘದ ಅಧ್ಯಕ್ಷ ಹಣಮಂತ್ರಾಯಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ದೇವರಹಿಪ್ಪರಗಿ ಶಾಕಸರಾದ ರಾಜುಗೌಡ ಪಾಟೀಲ ಜ್ಯೋತಿ ಬೆಳಗಿಸಿದರು. ಅಯ್ಯಪ್ಪಯ್ಯ ಹಿರೇಮಠ, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಉಪಾಧ್ಯಕ್ಷರಾದ ರಾಜಶೇಖರ ಗುಡದಿನ್ನಿ, ನಿರ್ದೇಶಕರಾದ ಚಂದ್ರಶೇಖರಗೌಡ ಪಾಟೀಲ ಮನಗೂಳಿ, ಸುರೇಶ ಬಿರಾದಾರ, ಬಿ.ಎಸ್.ಪಾಟೀಲ ಯಾಳಗಿ, ಸೇರಿದಂತೆ ಇತರರು ವೇದಿಕೆ ಮೇಲಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ ಸಚಿವ ಶಿವಾನಂದ ಪಾಟೀಲ ಸೇರಿದಂತೆ ಗಣ್ಯರನ್ನು ಪಡಗಾನೂರ ಗ್ರಾಮಸ್ಥರು ಡೊಳ್ಳು ಹಾಗೂ ಜನಪದ ವಾದ್ಯ ಮೇಳಗಳೊಂದಿಗೆ ಭವ್ಯವಾಗಿ ಸ್ವಾಗಸಿದ್ದು ವಿಶೇಷವಾಗಿತ್ತು.

**ರೈತರು ಆರ್ಥಿಕವಾಗಿ ಸಶಕ್ತರಾಗಬೇಕು**


ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಜೊತೆಗೆ, ಸಮಗ್ರ ಕೃಷಿಗಾಗಿ ಹೈನೋದ್ಯಮ ಆರಂಭಿಸಲು ರೈತರಿಗೆ ಶೇ.3 ರ ಬಡ್ಡಿ ದರದಲ್ಲಿ ಸಾಲ ನೀಡುತ್ತಿದೆ. ರೈತರು ತೋಟದಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳಲು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ರೈತರ ಸಾಮರ್ಥ್ಯಕ್ಕೆ ಅನುಗುಣವಾಗಿ 15 ಲಕ್ಷ ರೂ. ವರೆಗೆ ಸಾಲ ನೀಡುವ ಯೋಜನೆ ಜಾರಿಗೆ ತಂದಿದೆ. ಜಿಲ್ಲೆಯ ರೈತರು ಇದರ ಸದ್ಬಳಕೆ ಮಾಡಿಕೊಂಡು ರೈತರು ಆರ್ಥಿಕವಾಗಿ ಸಶಕ್ತರಾಗಬೇಕು ಎಂದು ಸಲಹೆ ನೀಡಿದರು.

> ಕೇವಲ ಎರಡು ದಶಕಗಳ ಹಿಂದೆ 16 ಲಕ್ಷ ರೂ. ಹಾನಿಯಲ್ಲಿದ್ದ ಪಡಗಾನೂರ ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಸಹಕಾರಿ ಸಂಘ, ಇದೀಗ 13.52 ಕೋಟಿ ರೂ. ಲಾಭದಲ್ಲಿದೆ. 60 ಲಕ್ಷ ರೂ. ದುಡಿಯುವ ಬಂಡವಾಳ 6 ಕೋಟಿ ರೂ.ಗೆ ಬೆಳೆದಿದೆ. ಇದಕ್ಕೆಲ್ಲ ಸಮಾಜಮುಖಿ, ಧಾರ್ಮಿಕ ಚಿಂತನೆಯ ದಾನ ಗುಣದ ಹಣಮಂತ್ರಾಯ ಅವರ ಪಾರದರ್ಶಕ ಆಢಳಿತವೇ ಕಾರಣ -ಸಚಿವ ಶಿವಾನಂದ ಪಾಟೀಲ

### ಭಾರತದ ಆರ್ಥಿಕತೆ ಸತ್ತಿದೆ ಮೋದಿ, ನಿರ್ಮಲಾ ಸೀತಾರಾಮನ್‌ರಿಗೆ ಬಿಟ್ಟು ಇನ್ನೆಲ್ಲರಿಗೂ ಇದು ಗೊತ್ತಿದೆ?: ರಾಹುಲ್ ಗಾಂಧಿ

# ಟ್ರಂಪ್ ಹೇಳಿಕೆ ಬಗ್ಗೆ ಮಾತನಾಡಿದ ರಾಹುಲ್ ಗಾಂಧಿ

**ಹೊಸದಿಲ್ಲಿ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತಕ್ಕೆ ಸುಂಕ ಬರೆ ಎಳೆದಿದ್ದಾರೆ. ಭಾರತದಿಂದ ರಫ್ತಾಗುವ ವಸ್ತುಗಳ ಮೇಲಿನ ಆಮದು ಸುಂಕವನ್ನು ಶೇಕಡಾ 25 ರಷ್ಟು ವಿಧಿಸಿದ್ದಾರೆ. ಇಷ್ಟೇ ಅಲ್ಲದೆ ಭಾರತ ಹಾಗೂ ರಷ್ಯಾ ತಮ್ಮ ಸತ್ತ ಆರ್ಥಿಕತೆ ಒಟ್ಟಾಗಿ ಹೂಳಲಿ ಎಂದು ಹೇಳಿದ್ದಾರೆ. ಈ ಹೇಳಿಕೆ ಭಾರತದ ರಾಜಕೀಯ ವಲಯದಲ್ಲಿ ಚರ್ಚೆ ಹುಟ್ಟುಹಾಕಿದೆ. ಸದ್ಯ ಈ ಬಗ್ಗೆ ಲೋಕಸಭಾ ವಿಪಕ್ಷ ನಾಯಕ ರಾಹುಲ್ ಗಾಂಧಿಯೂ ಟೀಕಾಸ್ತ್ರ ಹೂಡಿದ್ದಾರೆ. ಅಮೆರಿಕದೊಂದಿಗೆ ನಡೆಯಲಿರುವ ವ್ಯಾಪಾರ ಒಪ್ಪಂದದಲ್ಲಿ ಟ್ರಂಪ್ ಹೇಳಿದಂತೆ ಮೋದಿ ಕೇಳುತ್ತಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಮೇಲೆ ಶೇ 25ರಷ್ಟು ಸುಂಕ ವಿಧಿಸಿ, ಭಾರತ, ರಷ್ಯಾ ಸತ್ತ ಆರ್ಥಿಕತೆ ಎಂದು ಹೇಳಿದ್ದಾರೆ. ಟ್ರಂಪ್ ಸತ್ಯವನ್ನು ಹೇಳಿದ್ದಕ್ಕೆ ನನಗೆ ಸಂತೋಷವಾಗಿದೆ. ಬಿಜೆಪಿ ಸರ್ಕಾರವು ಉದ್ಯಮಿ ಗೌತಮ್ ಅದಾನಿಗೆ ಸಹಾಯ ಮಾಡಲು ಹೋಗಿ, ಭಾರತದ ಆರ್ಥಿಕತೆಯನ್ನು ನಾಶಪಡಿಸಿದೆ ಎಂದು ಸಂಸತ್ ಭವನದ ಆವರಣದಲ್ಲಿ ಹೇಳಿದರು.



**ಟ್ರಂಪ್ ಹೇಳಿದ್ದನ್ನೇ ಕೇಳ್ತಾರೆ:** ಪೆಹಲ್ಗಾಮ್ ನಂತರ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಸಂಘರ್ಷ ಹೆಚ್ಚಾಗಿತ್ತು. ಆ ನಂತರ ಎರಡು ರಾಷ್ಟ್ರಗಳು ಕದನ ವಿರಾಮ ಘೋಷಿಸಿಕೊಂಡವು. ಇದಕ್ಕೆ ನಾನೇ ಕಾರಣ ಎಂದು ಟ್ರಂಪ್ ಹೇಳಿಕೊಂಡು ತಿರುಗಾಡುತ್ತಿದ್ದರು. ಭಾರತದ ಐದು ವಿಮಾನಗಳನ್ನು ಹೊಡೆದುರುಳಿಸಿದ್ದು, ಜೊತೆಗೆ ಭಾರತಕ್ಕೆ ಶೇ .25 ರಷ್ಟು ಸುಂಕ ವಿಧಿಸುತ್ತೇನೆ ಎಂದು ಟ್ರಂಪ್ ಹೇಳುತ್ತಿದ್ದಾರೆ. ಈ ಎಲ್ಲಾ ವಿಚಾರಗಳ ಬಗ್ಗೆ ಒಟ್ಟುಗೂಡಿಸಿ ಮೋದಿ ಯಾಕೆ ಮಾತನಾಡುತ್ತಿಲ್ಲ. ಟ್ರಂಪ್ ಬಗ್ಗೆ ಪ್ರಧಾನಿ ಮೋದಿ ಮೌನಹಿಸಿರುವುದಕ್ಕೆ ಕಾರಣ ಏನು? ಎಂದು ರಾಹುಲ್ ಮಾತನಾಡಿದರು.

**ಎಕ್ಸ್‌ನಲ್ಲಿ ಮೋದಿ ಬಗ್ಗೆ ರಾಹುಲ್ ಟೀಕೆ:** ಭಾರತದ ಆರ್ಥಿಕತೆ ಸತ್ತುಹೋಗಿದೆ. ಮೋದಿಯವರೇ ಕೊಂದರು ಎಂದು 5 ಪಾಯಿಂಟ್‌ಗಳನ್ನು ಎಕ್ಸ್‌ನಲ್ಲಿ ರಾಹುಲ್ ಗಾಂಧಿಯವರು ಹಂಚಿಕೊಂಡಿದ್ದಾರೆ. ಉದ್ಯೋಗಗಳಿಲ್ಲದೆ, ಮೋದಿ ಅವರು ಭಾರತದ ಯುವಕರ ಭವಿಷ್ಯವನ್ನು ನಾಶಪಡಿಸಿದ್ದಾರೆ ಎಂದು ಆರೋಪಿಸಿದ್ದಾರೆ

**ಅಸಾಸುದ್ದೀನ್ ಹೇಳಿದ್ದೇನು?:** ಎಐಎಂಐಎಂ ನಾಯಕ ಅಸಾದುದ್ದೀನ್ ಓವೈಸಿ ಅವರು ಆಡಳಿತ ಸರ್ಕಾರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶ್ವೇತಭವನದ ಮುಖ್ಯಸ್ಥರಿಂದ ಸರ್ಕಾರ ಬೆದರಿಕೆಗೆ ಒಳಗಾಗುತ್ತಿರುವುದು ದುಃಖಕರ ಸಂಗತಿ. ಟ್ರಂಪ್ ಭಾರತದ ವ್ಯಾಪಾರ ನೀತಿಯನ್ನು ಟೀಕಿಸಿದ್ದಾರೆ. ಭಾರತವು ಅತ್ಯಂತ ಕಠಿಣ ಮತ್ತು ಅಸಹ್ಯಕರ ವ್ಯಾಪಾರ ತಡೆ ಹೊಂದಿದೆ ಎಂದು ಟ್ರಂಪ್ ಹೇಳಿದ್ದಾರೆ. ಇದು 56 ಇಂಚಿನ ಎದೆಯ ಭರವಸೆಯೇ? ಅಥವಾ ಸುಂಕ 56% ತಲುಪುವವರೆಗೆ ರಾಷ್ಟ್ರ ಕಾಯಬೇಕೇ? ಎಂದು ಹೇಳಿದರು.

**ವಿದೇಶಾಂಗ ನೀತಿ ಕೊಂಡಾಡ್ಬೇಡಿ**

**ವಿದೇಶಾಂಗ ಸಚಿವರು ಯಾವಾಗಲೂ ನಮ್ಮದು ಚಾಣಾಕ್ಷ ವಿದೇಶಾಂಗ ನೀತಿ ಎಂದು ಭಾಷಣ ಮಾಡಿ, ಕೊಚ್ಚಿಕೊಳ್ಳುತ್ತಾರೆ.ಆದರೆ, ಇಲ್ಲೊಂದು ಕಡೆ ನಿಮ್ಮನ್ನುಅಮೆರಿಕ ನಿಂದಿಸುತ್ತಿದ್ದರೆ, ಮತ್ತೊಂದೆಡೆ ಚೀನಾದ ಬೆನ್ನು ತಟ್ಟುತ್ತಿದೆ. ಜಗತ್ತಿನಾದ್ಯಂತ ಪಾಕಿಸ್ತಾನದ ಬಗ್ಗೆ ಮಾತನಾಡಲು ನಿಯೋಗ ಕಳುಹಿಸಿದ್ದೀರಿ, ಯಾವೊಂದು ದೇಶವು ಅವರ ವಿರುದ್ಧ ಮಾತನಾಡಿಲ್ಲ ಎಂದು ಲೇವಡಿ ಮಾಡಿದರು.**

- **ಅದಾನಿ-ಮೋದಿ ಪಾಲುದಾರಿಕೆ.**
- **ನೋಟು ಅಮಾನ್ಯೀಕರಣ, ದೋಷಪೂರಿತ ಜೆಎಸ್ಟಿ ನೀತಿ.**
- **ವಿಫಲವಾದ ಮೇಕ್ ಇನ್ ಇಂಡಿಯಾ.**
- **MSMEಗಳನ್ನು ನಾಶಪಡಿಸಲಾಗಿದೆ.**
- **ರೈತರ ಬೇಡಿಕೆ ಈಡೇರಿಕೆಯಲ್ಲಿ ಹಿಂದೇಟು.**

## ಭಾರತೀಯನ ಮೇಲೆ ಜನಾಂಗೀಯ ದಾಳಿ



**ಐರ್ಲೆಂಡ್:** ದೂರದ ಐರ್ಲೆಂಡ್‌ನಲ್ಲಿ ಭಾರತೀಯರ ಮೇಲೆ ಜನಾಂಗೀಯ ದಾಳಿ ನಡೆದಿದೆ. ಇಲ್ಲಿ ವಾಸಿಸುತ್ತಿರುವ ಭಾರತೀಯ ಮೂಲದ ಉದ್ಯಮಿಯೊಬ್ಬರು ತಮ್ಮ ಅಪಾರ್ಟ್‌ಮೆಂಟ್ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಆರು ಹದಿಹರೆಯದವರು ಅವರ ಮೇಲೆ ಹಠಾತ್ತನೆ ದಾಳಿ ನಡೆಸಿದ್ದಾರೆ. ಐರ್ಲೆಂಡ್‌ನಲ್ಲಿ ಪ್ರಚೋದಿತವಲ್ಲದ ಜನಾಂಗೀಯ ದಾಳಿಯನ್ನು ಎದುರಿಸಿರುವುದಾಗಿ ಭಾರತೀಯ ಮೂಲದ ಉದ್ಯಮಿಯೊಬ್ಬರು ಲಿಂಕ್ಡ್ ಇನ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಹದಿಹರೆಯದವರ ಗುಂಪೊಂದು ತನ್ನನ್ನು ಕ್ರೂರವಾಗಿ ಥಳಿಸಿ, ತನ್ನ ಗಾಜನ್ನು ಕಸಿದುಕೊಂಡು, ಥಳಿಸಿ, ವೈದ್ಯಕೀಯ ಆರೈಕೆಯ ಅಗತ್ಯವನ್ನುಂಟುಮಾಡಿದೆ ಎಂದು ಅವರು ಆರೋಪಿಸಿದ್ದಾರೆ.

ತಮ್ಮ ಮೇಲಿನ ದಾಳಿಯು ಪ್ರತ್ಯೇಕ ಘಟನೆಯಲ್ಲ ಎಂದು ಅವರು ಮುಂದುವರಿಸಿದರು, ಈ ಯುರೋಪಿಯನ್ ದೇಶದಲ್ಲಿ ವಾಸಿಸುವ ಭಾರತೀಯರಿಗೆ ಇದು ಹೆಚ್ಚಾಗಿ ಸಂಭವಿಸುತ್ತಿದೆ ಎಂದು ಹೇಳಿಕೊಂಡಿದ್ದಾರೆ.

ಐರ್ಲೆಂಡ್‌ನಲ್ಲಿ ಜನಾಂಗೀಯ ಹದಿಹರೆಯದವರ ಗುಂಪೊಂದು ತನ್ನ ಮೇಲೆ ದಾಳಿ ಮಾಡಿದೆ ಎಂದು ಹೇಳಿಕೊಂಡ ಭಾರತೀಯ ಮೂಲದ ಉದ್ಯಮಿ ಡಾ. ಸಂತೋಷ್ ಯಾದವ್ ಅವರು ಊಟದ ನಂತರ, ನಾನು ನನ್ನ ಅಪಾರ್ಟ್ಮೆಂಟ್ ಬಳಿ ನಡೆದುಕೊಂಡು ಹೋಗುತ್ತಿದ್ದಾಗ, ಆರು ಹದಿಹರೆಯದವರ ಗುಂಪು ಹಿಂದಿನಿಂದ ನನ್ನ ಮೇಲೆ ದಾಳಿ ಮಾಡಿತು.

ಅವರು ನನ್ನ ಕನ್ನಡಕವನ್ನು ಕಸಿದು, ಒಡೆದು, ನಂತರ ನನ್ನ ತಲೆ, ಮುಖ, ಕುತ್ತಿಗೆ, ಎದೆ, ಕೈಗಳು ಮತ್ತು ಕಾಲುಗಳಿಗೆ ನಿರಂತರವಾಗಿ ಹೊಡೆದರು ಪಾದಚಾರಿ ಮಾರ್ಗದಲ್ಲಿ ನನಗೆ ರಕ್ತಸ್ರಾವವಾಯಿತು. ನಾನು ಗಾರ್ಡ್ಸ್‌ಗೆ ಕರೆ ಮಾಡುವಲ್ಲಿ ಯಶಸ್ವಿಯಾದೆ, ಆಂಬ್ಯುಲೆನ್ಸ್ ನನ್ನನ್ನು ಬ್ಲಾಂಚಾರ್ಡ್ಸ್‌ಟೌನ್ ಆಸ್ಪತ್ರೆಗೆ ಕರೆದೊಯ್ಯಿತು. ನನ್ನ ಕೆನ್ನೆಯ ಮೂಳೆ ಮುರಿದಿದೆ ಎಂದು ವೈದ್ಯಕೀಯ ತಂಡ ದೃಢಪಡಿಸಿತು, ಈಗ ನನ್ನನ್ನು ವಿಶೇಷ ಆರೈಕೆಗಾಗಿ ಉಲ್ಲೇಖಿಸಲಾಗಿದೆ ಎಂದು ಡಾ. ಸಂತೋಷ್ ಯಾದವ್ ಲಿಂಕ್ಡ್ ಇನ್‌ನಲ್ಲಿ ಬರೆದಿದ್ದಾರೆ. ಐರ್ಲೆಂಡ್ ಸರ್ಕಾರ, ಡಬ್ಲಿನ್‌ನಲ್ಲಿರುವ ಭಾರತದ ರಾಯಭಾರ ಕಚೇರಿ, ಭಾರತದ ವಿದೇಶಾಂಗ ಸಚಿವಾಲಯ, ಐರ್ಲೆಂಡ್‌ನ ಭಾರತದ ರಾಯಭಾರಿ ಅಖಿಲೇಶ್ ಮಿಶ್ರಾ ಸೇರಿದಂತೆ ಹಲವಾರು ಸರ್ಕಾರಿ ಸಂಸ್ಥೆಗಳನ್ನು ಟ್ಯಾಗ್ ಮಾಡಿದ್ದಾರೆ.

## ಭಾರತದ ಅಭಿವೃದ್ಧಿಗೆ ನೈತಿಕ ಶಿಕ್ಷಣ ಬೇಕಿದೆ: ಸೈನಿ

**ಚಂಡೀಗಢ:** ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಲು ಮಕ್ಕಳಿಗೆ ನೈತಿಕ ಶಿಕ್ಷಣ ಅತ್ಯಗತ್ಯ ಎಂದು ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಹೇಳಿದ್ದಾರೆ. ರಾಜ್ಯದಲ್ಲಿ 10 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗೆ ಐದು ಲಕ್ಷ ಟ್ಯಾಬ್ಲೆಟ್‌ಗಳನ್ನು ವಿತರಿಸಲಾಗಿದೆ, ಸುಮಾರು 40,000 ತರಗತಿ ಕೊಠಡಿಗಳಲ್ಲಿ ಡಿಜಿಟಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ ಮತ್ತು 1,201 ಐಟಿ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಅವರು ಹೇಳಿದರು.

ಕುರುಕ್ಷೇತ್ರ ಜಿಲ್ಲೆಯ ಲಾಡ್ವಾದಲ್ಲಿ ಸಂಪರ್ಕ್ ಫೌಂಡೇಶನ್, ಶಿಕ್ಷಣ ಇಲಾಖೆ ಆಯೋಜಿಸಿದ್ದ ಸ್ಮಾರ್ಟ್ ಕ್ಲಾಸ್ ವಿಸ್ತರಣಾ ಕಾರ್ಯಕ್ರಮವನ್ನು ಉದ್ದೇಶಿಸಿ ಸೈನಿ ಮಾತನಾಡುತ್ತಿದ್ದರು. ಇದಕ್ಕೂ ಮೊದಲು, ಸೈನಿ ಲಡ್ವಾದಿಂದ ಸ್ಮಾರ್ಟ್ ಟಿವಿ ಶಿಕ್ಷಣ ಯೋಜನೆಯನ್ನು ಪ್ರಾರಂಭಿಸಿದರು. ಸಂಪರ್ಕ್ ಫೌಂಡೇಶನ್ 7,000 ರಾಜ್ಯ ಶಾಲೆಗಳಲ್ಲಿ ಸಂಪರ್ಕ್ ಟಿವಿ ಬಾಕ್ಸ್‌ಗಳನ್ನು ಒದಗಿಸಿದೆ ಎಂದು ಅವರು ಹೇಳಿದರು.



ಪ್ಯಾಕೇಜ್ ಹರಿಯಾಣ ಮಂಡಳಿಯ ಪಠ್ಯಪುಸ್ತಕಗಳು, ವಿಡಿಯೋಗಳು, ವರ್ಕ್‌ಶೀಟ್‌ಗಳು, ಮೌಲ್ಯಮಾಪನ ಮಾಡ್ಯೂಲ್‌ಗಳ ಡಿಜಿಟಲ್ ಆವೃತ್ತಿಗಳನ್ನು ಒಳಗೊಂಡಿದೆ.


ಒಟ್ಟು 1,485 ಶಾಲೆಗಳಲ್ಲಿ ಎಲ್‌ಇಡಿ ಟಿವಿಗಳನ್ನು ಅಳವಡಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು. ಲಾಡ್ವಾ ಮತ್ತು ಬಬೈನ್ ಬ್ಲಾಕ್‌ಗಳ 132 ಶಾಲೆಗಳನ್ನು ಅಂತಹ ಟಿವಿಗಳೊಂದಿಗೆ ಸ್ಮಾರ್ಟ್ ತರಗತಿಗಳುಟಿ ಆಗಿ ಅಭಿವೃದ್ಧಿಪಡಿಸಲಾಗಿದೆ ಎಂದು ಅವರು ಹೇಳಿದರು.ಶಿಕ್ಷಣವು ಕೇವಲ ಪುಸ್ತಕ ಜ್ಞಾನಕ್ಕೆ ಸೀಮಿತವಾಗಿಲ್ಲ, ಆದರೆ ವ್ಯಕ್ತಿಗಳು, ಸಮಾಜ ಮತ್ತು ರಾಷ್ಟ್ರದ ಭವಿಷ್ಯವನ್ನು ರೂಪಿಸುವ ಪ್ರಬಲ ಮಾಧ್ಯಮವಾಗಿದೆ ಎಂದು ಸೈನಿ ಹೇಳಿದರು.

ರಾಜ್ಯದ ಎಲ್ಲಾ 22 ಜಿಲ್ಲೆಗಳಲ್ಲಿ ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದೆ ಮತ್ತು 5,000 ಕ್ಕೂ ಹೆಚ್ಚು ಶಾಲೆಗಳಿಗೆ ವೈ-ಫೈ ಸಂಪರ್ಕವನ್ನು ಒದಗಿಸಲಾಗಿದೆ ಎಂದು ಅವರು ಹೇಳಿದರು. ಮಕ್ಕಳಲ್ಲಿ ಕಲಿಕೆಯ ಕುತೂಹಲವನ್ನು ಮೂಡಿಸುವುದು, ಜ್ಞಾನದ ಅನ್ವಯದ ಮೇಲೆ ಕೇಂದ್ರೀಕರಿಸುವುದು ತಮ್ಮ ಪ್ರತಿಷ್ಠಾನದ ಗುರಿಯಾಗಿದೆ ಎಂದು ಸಂಪರ್ಕ್ ಫೌಂಡೇಶನ್ ಸಂಸ್ಥಾಪಕ ವಿನೀತ್ ನಾಯರ್ ಹೇಳಿದರು. ಲಾಡ್ವಾದಲ್ಲಿ ನಡೆದ ಮತ್ತೊಂದು ಕಾರ್ಯಕ್ರಮದಲ್ಲಿ, ಈ ವರ್ಷ ಒಂದು ಲಕ್ಷ ಮನೆಗಳ ಮೇಲೆ ಸೌರ ಫಲಕಗಳನ್ನು ಸ್ಥಾಪಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದು ಸೈನಿ ಹೇಳಿದರು. ಪ್ರಧಾನ ಮಂತ್ರಿ ಮಫ್ತ್ ಬಿಜ್ಲಿ ಯೋಜನೆಯಡಿಯಲ್ಲಿ ಯೋಜನೆಗಾಗಿ ಅಧಿಕಾರಿಗಳ ತಂಡವು ಪ್ರತಿ ಹಳ್ಳಿಗೆ ಭೇಟಿ ನೀಡಲಿದೆ ಎಂದು ಅವರು ಹೇಳಿದರು.

**ವಾರ್ಷಿಕ 1.80 ಲಕ್ಷ ರೂ. ಗಿಂತ ಕಡಿಮೆ ಆದಾಯವಿರುವ ಕುಟುಂಬಗಳಿಗೆ ಈ ಯೋಜನೆಯಡಿಯಲ್ಲಿ 2 ಕಿ.ವ್ಯಾಟ್ ಸೌರ ಫಲಕವನ್ನು ಒದಗಿಸಲಾಗುವುದು. ಒಟ್ಟು ವೆಚ್ಚದಲ್ಲಿ 70,000 ರೂ.ಗಳನ್ನು ಕೇಂದ್ರ ಸರ್ಕಾರ ಭರಿಸಲಿದ್ದು, ಉಳಿದ ಹಣವನ್ನು ರಾಜ್ಯ ಸರ್ಕಾರ ಭರಿಸಲಿದೆ ಎಂದು ಅವರು ಹೇಳಿದರು. ಸೌರಫಲಕಗಳನ್ನು ಹೊಂದಿರುವ ಮನೆಗಳು ಯಾವುದೇ ವಿದ್ಯುತ್ ಬಿಲ್‌ಗಳನ್ನು ಪಾವತಿಸಬೇಕಾಗಿಲ್ಲ ಎಂದು ಅವರು ಹೇಳಿದರು.**

## ಆರು ಭಾರತೀಯ ಕಂಪನಿಗಳಿಗೆ ಅಮೆರಿಕ ನಿರ್ಬಂಧ

**ನ್ಯೂಯಾರ್ಕ್:** ಇರಾನ್ ಮೂಲದ ಪೆಟ್ರೋಕೆಮಿಕಲ್ ಉತ್ಪನ್ನಗಳ ಮಹತ್ವದ ಮಾರಾಟ ಮತ್ತು ಖರೀದಿಗಾಗಿ ಟ್ರಂಪ್ ಆಡಳಿತವು ಆರು ಭಾರತೀಯ ಕಂಪನಿಗಳ ಮೇಲೆ ನಿರ್ಬಂಧ ಹೇರಿದೆ. ಇರಾನ್ ಆಡಳಿತವು ತನ್ನ ಅಸ್ಥಿರಗೊಳಿಸುವ ಚಟುವಟಿಕೆಗಳಿಗೆ ಹಣಕಾಸು ಒದಗಿಸಲು ಮಧ್ಯಪ್ರಾಚ್ಯದಲ್ಲಿ ಸಂಘರ್ಷವನ್ನು ಉತ್ತೇಜಿಸುತ್ತಲೇ ಇದೆ. ಇಂದು, ವಿದೇಶಗಳಲ್ಲಿ ಭಯೋತ್ಪಾದನೆಯನ್ನು ಬೆಂಬಲಿಸಲು, ತನ್ನದೇ ಆದ ಜನರನ್ನು ದಮನಿಸಲು ಆಡಳಿತವು ಬಳಸುವ ಆದಾಯದ ಹರಿವನ್ನು ತಡೆಯಲು ಯುನೈಟೆಡ್ ಸ್ಟೇಟ್ಸ್ ಕ್ರಮ ಕೈಗೊಳ್ಳುತ್ತಿದೆ ಎಂದು ಇರಾನಿನ ಪೆಟ್ರೋಲಿಯಂ, ಪೆಟ್ರೋಲಿಯಂ ಉತ್ಪನ್ನಗಳು, ಪೆಟ್ರೋಕೆಮಿಕಲ್ ವ್ಯಾಪಾರದಲ್ಲಿ ತೊಡಗಿರುವ 20 ಜಾಗತಿಕ ಸಂಸ್ಥೆಗಳ ಮೇಲೆ ನಿರ್ಬಂಧಗಳನ್ನು ವಿಧಿಸುವುದಾಗಿ ಅಮೆರಿಕ ಹೇಳಿದೆ. ಇರಾನಿನ ಮೂಲದ ಪೆಟ್ರೋಕೆಮಿಕಲ್ ಉತ್ಪನ್ನಗಳ ಗಮನಾರ್ಹ ಮಾರಾಟ ಖರೀದಿಗಾಗಿ ಭಾರತ, ಯುನೈಟೆಡ್ ಅರಬ್ ಎಮಿರೇಟ್ಸ್, ಟರ್ಕಿ, ಇಂಡೋನೇಷ್ಯಾದಲ್ಲಿ ಬಹು ಕಂಪನಿಗಳನ್ನು ಗೊತ್ತುಪಡಿಸಲಾಗುತ್ತಿದೆ ಎಂದು



ವಿದೇಶಾಂಗ ಇಲಾಖೆ ತಿಳಿಸಿದೆ.

ಇರಾನ್‌ನ ಪೆಟ್ರೋಕೆಮಿಕಲ್ ವ್ಯಾಪಾರವನ್ನು ಗುರಿಯಾಗಿಸಿಕೊಂಡು, ಅಮೆರಿಕವು ಬಹು ನ್ಯಾಯ ವ್ಯಾಪ್ತಿಗಳಲ್ಲಿ 13 ಘಟಕಗಳನ್ನು ಗೊತ್ತುಪಡಿಸಿದೆ, ಅವು ಇರಾನ್ ಮೂಲದ ಪೆಟ್ರೋಕೆಮಿಕಲ್‌ಗಳ ಸಾಗಣೆ, ಮಾರಾಟ, ಖರೀದಿಯಲ್ಲಿ ತೊಡಗಿವೆ. ಭಾರತ ಮೂಲದ ಕಂಪನಿಗಳಾದ ಕಾಂಚನ್ ಪಾಲಿಮರ್ಸ್‌ಮ ಆಲ್ಕೆಮಿಕಲ್ ಸೊಲ್ಯೂಷನ್, ರಾಮ್ನಿಕ್‌ಲಾಲ್ ಎಸ್ ಗೋಸಾಲಿಯಾ ಕೋ, ಜುಪಿಟರ್ ಡೈ ಕೆಮ್ ಪ್ರೈವೇಟ್ ಲಿಮಿಟೆಡ್ ಕೂಡ ನಿರ್ಬಂಧಗಳ ಪಟ್ಟಿಯಲ್ಲಿದೆ. ಇನ್ನುಳಿದ ಎರಡು ಅನುಮೋದಿತ ಭಾರತೀಯ ಕಂಪನಿಗಳು ಗ್ಲೋಬಲ್ ಇಂಡಸ್ಟ್ರಿಯಲ್ ಕೆಮಿಕಲ್ಸ್ ಲಿಮಿಟೆಡ್, ಪರ್ಸಿಸ್ಟೆಂಟ್ ಪೆಟ್ರೋಕೆಮ್ ಪ್ರೈವೇಟ್ ಲಿಮಿಟೆಡ್ ಆಗಿದ್ದು, ಇವು ಕ್ರಮವಾಗಿ 51 ಮಿಲಿಯನ್ ಡಾಲರ್, 14 ಮಿಲಿಯನ್ ಡಾಲರ್‌ಗಳಿಗಿಂತ ಹೆಚ್ಚು ವ್ಯವಹಾರ ನಡೆಸಿವೆ, ಕಳೆದ ವರ್ಷದಲ್ಲಿ ಮುಖ್ಯವಾಗಿ ಬಹು ಕಂಪನಿಗಳೊಂದಿಗೆ. ಇರಾನ್‌ನಿಂದ ಪೆಟ್ರೋಕೆಮಿಕಲ್ ಉತ್ಪನ್ನಗಳ ಖರೀದಿ, ಸ್ವಾಧೀನ, ಮಾರಾಟ, ಸಾಗಣೆ ಅಥವಾ ಮಾರುಕಟ್ಟೆಗಾಗಿ ಉದ್ದೇಶಪೂರ್ವಕವಾಗಿ ಮಹತ್ವದ ವಹಿವಾಟಿನಲ್ಲಿ ತೊಡಗಿಸಿಕೊಂಡಿದ್ದಕ್ಕಾಗಿ ಕಂಪನಿಗಳನ್ನು ಗೊತ್ತುಪಡಿಸಲಾಗುತ್ತಿದೆ.

**ಟ್ರಂಪ್ ಹೇಳಿದಂತೆ, ಇರಾನಿನ ತೈಲ, ಪೆಟ್ರೋಕೆಮಿಕಲ್‌ಗಳನ್ನು ಖರೀದಿಸಲು ಆಯ್ಕೆ ಮಾಡುವ ಯಾವುದೇ ದೇಶ ಅಥವಾ ವ್ಯಕ್ತಿ ಯುಎಸ್ ನಿರ್ಬಂಧಗಳ ಅಪಾಯಕ್ಕೆ ತಮ್ಮನ್ನು ಒಡ್ಡಿಕೊಳ್ಳುತ್ತಾರೆ, ಯುನೈಟೆಡ್ ಸ್ಟೇಟ್ಸ್ ನೊಂದಿಗೆ ವ್ಯವಹಾರ ನಡೆಸಲು ಅನುಮತಿಸಲಾಗುವುದಿಲ್ಲ ಎಂದು ಅದು ಹೇಳಿದೆ.**

## ಕ್ಯಾಲಿಫೋರ್ನಿಯಾದಲ್ಲಿ ಅಪಘಾತಕ್ಕಿಡಾದ ಅಮೆರಿಕದ ಎಫ್-35 ಯುದ್ಧ ವಿಮಾನ

**ಕ್ಯಾಲಿಫೋರ್ನಿಯಾ:** ಕಿಂಗ್ಸ್ ಕೌಂಟಿಯಲ್ಲಿರುವ ಲೀಮೋರ್ ವಾಯುನೆಲೆಯ ಬಳಿ ಯುಎಸ್ ನೌಕಾಪಡೆಯ ಎಫ್ -35 ಸಿ ಲೈಟ್ನಿಂಗ್ ಜೆಟ್‌ಅಪಘಾತಕ್ಕೀಡಾಗಿದೆ ಎಂದು ವರದಿಯಾಗಿದೆ.ಆರಂಭಿಕ ವರದಿಗಳ ಪ್ರಕಾರ, ಪೊಲೀಸ್ ಮತ್ತು ಅಗ್ನಿಶಾಮಕ ಅಧಿಕಾರಿಗಳು ಅಪಘಾತದ ಸ್ಥಳಕ್ಕೆ ಆಗಮಿಸಿದ್ದಾರೆ.ಯುಎಸ್ ನೇವಲ್ ಅಕಾಡೆಮಿ ಪ್ರಕಾರ ಎಫ್ -35 ಸಿ ಲೈಟ್ನಿಂಗ್ ವಿಮಾನವು ವಿಶ್ವದ ಏಕೈಕ ಐದನೇ ತಲೆಮಾರಿನ ವಿಮಾನವಾಗಿದೆ. ಪೈಲಟ್ ಯಶಸ್ವಿಯಾಗಿ ಹೊರಹೋಗಿದ್ದಾರೆ, ಸುರಕ್ಷಿತರಾಗಿದ್ದಾರೆ. ಯಾವುದೇ ಹೆಚ್ಚುವರಿ ಪೀಡಿತ ಸಿಬ್ಬಂದಿ ಇಲ್ಲ ಎಂದು ಎನ್‌ಎಎಸ್ ಲೆಮೂರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಪಘಾತದ ಕುರಿತು ಹೆಚ್ಚಿನ ವಿವರಗಳನ್ನು ಒದಗಿಸಲಾಗಿಲ್ಲ. ಎಫ್ -35 ಫೈಟರ್ ಜೆಟ್‌ಗಳ ತಯಾರಕರಾದ ಯುಎಸ್ ರಕ್ಷಣಾ ಗುತ್ತಿಗೆದಾರ ಲಾಕ್‌ಹೀಡ್ ಮಾರ್ಟಿನ್ ನಿಯಮಿತ ವ್ಯವಹಾರ ಸಮಯದ ಹೊರಗೆ ಕಾಮೆಂಟ್‌ಗಾಗಿ ವಿನಂತಿಗೆ ತಕ್ಷಣ ಪ್ರತಿಕ್ರಿಯಿಸಲಿಲ್ಲ. 35 ಫೈಟರ್ ಜೆಟ್ ಬಗ್ಗೆ



ಯುಎಸ್ ನೇವಲ್ ಅಕಾಡೆಮಿಯ ಪ್ರಕಾರ, ಎಫ್ -35 ಸಿ ಲೈಟ್ನಿಂಗ್ ವಿಮಾನವು ವಿಶ್ವದ ಏಕೈಕ ಐದನೇ ತಲೆಮಾರಿನ ವಿಮಾನವಾಗಿದೆ.ಎಫ್ -35 ಕ್ಯಾರಿಯರ್ ರೂಪಾಂತರವು ಶಸ್ತ್ರಾಸ್ತ್ರ ವ್ಯವಸ್ಥೆಯ ಏಕೀಕರಣ, ಮಾರಕತೆ, ನಿರ್ವಹಣೆ, ಯುದ್ಧ ತ್ರಿಜ್ಯ ಮತ್ತು ಪೇಲೋಡ್‌ನಲ್ಲಿ ಹೊಸ ಮಾನದಂಡಗಳನ್ನು ಹೊಂದಿಸುತ್ತದೆ, ಅದು ಸಮುದ್ರದಿಂದ ನಿಜವಾದ ಬಹು-ಮಿಷನ್ ಪವರ್ ಪ್ರೊಜೆಕ್ಷನ್ ಸಾಮರ್ಥ್ಯವನ್ನು ತರುತ್ತದೆ.

## ಭಾರತೀಯ ಪ್ರಜೆಗೆ 14 ವರ್ಷ ಜೈಲು ಶಿಕ್ಷೆ

**ಸಿಂಗಾಪುರ:** ಅಪ್ರಾಪ್ತ ಬಾಲಕಿಯ ಮೇಲೆ ಎರಡು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ ಭಾರತೀಯ ಪ್ರಜೆಗೆ ಸಿಂಗಾಪುರ ಹೈಕೋರ್ಟ್ 14 ವರ್ಷ ಹೆಚ್ಚು ಜೈಲು ಶಿಕ್ಷೆ ವಿಧಿಸಲಾಗಿದೆ. ಅಪರಾಧಿ ರಾಮಲಿಂಗಂ ಸೆಲ್ವಶೇಖರನ್(58)ಗೆ ಶಿಕ್ಷೆಗೆ ಒಳಗಾದ ಭಾರತೀಯ. 50 ವರ್ಷಕ್ಕಿಂತ ಮೇಲ್ಪಟ್ಟವರಾಗಿರುವುದರಿಂದ ಅವರಿಗೆ ಛಡಿಯೇಟು ನೀಡಲಾಗುವುದಿಲ್ಲ.



ಆದಾಗ್ಯೂ, ಅವರು 14 ವರ್ಷ, ಮೂರು ತಿಂಗಳು, ಎರಡು ವಾರಗಳ ಜೈಲು ಶಿಕ್ಷೆ ಅನುಭವಿಸಬೇಕು . 15 ಛಡಿಯೇಟುಗಳ ಬದಲಿಗೆ ಹೆಚ್ಚುವರಿ ಜೈಲು ಶಿಕ್ಷೆಯನ್ನು ಒಳಗೊಂಡಿದೆ ಎಂದು ಸಿಂಗಾಪುರ ದಿ ಸ್ಟ್ರೈಟ್ಸ್ ಟೈಮ್ಸ್‌ವರದಿ ಮಾಡಿದೆ. ಕಳೆದ ಜು. 7 ರಂದು ಅವರು ಮೂರು ಆರೋಪಗಳಲ್ಲಿ ತಪ್ಪಿತಸ್ಥರೆಂದು ಸಾಬೀತಾಯಿತು. ಅವರು ಸ್ವತಃ ಪ್ರತಿನಿಧಿಸಿದ ವಿಚಾರಣೆಯ ನಂತರ ಜು. 30 ರಂದು ಶಿಕ್ಷೆ ವಿಧಿಸುವ ವಾದಗಳ ಸಮಯದಲ್ಲಿ, ರಾಮಲಿಂಗಂ ತಮ ಮುಗ್ಧತೆಯನ್ನು ಸಮರ್ಥಿಸಿಕೊಂಡರು, ತಮ ಅಪರಾಧದ ವಿರುದ್ಧ ಮೇಲನವಿ ಸಲ್ಲಿಸುವುದಾಗಿ ಹೇಳಿದರು.

ಎಲೆಕ್ಟ್ರಾನಿಕ್ ಟ್ಯಾಗ್ ತೆಗೆದುಹಾಕಲು ಮತ್ತು ಪೊಲೀಸ್ ಕಂಟೋನೆಂಟ್ ಸಂಕೀರ್ಣದಲ್ಲಿ ನಿಯಮಿತ ಚೆಕ್ -ಇನ್‌ಗಳನ್ನು ತ್ಯಜಿಸಲು ಮಾಡಿದ ಮನವಿಗಳನ್ನು ನ್ಯಾಯಮೂರ್ತಿ ಐದನ್ ಕ್ಸುತಿರಸ್ಕರಿಸಿದರು. ಕಳೆದ ಅಕ್ಟೋಬರ್ 28, 2021 ರಂದು ಸುಮಾರು ಸಂಜೆ 4.50 ರಿಂದ 5.5 ರ ನಡುವೆ ಸಿಂಗಾಪುರದ ಪಶ್ಚಿಮ ಕರಾವಳಿಯ ಜುರಾಂಗ್ ವೆಸ್ಟ್‌ನಲ್ಲಿರುವ ಅವರ ದಿನಸಿ ಅಂಗಡಿಯಲ್ಲಿ ಹುಡುಗಿ ಮೇಲೆ ದೌರ್ಜನ್ಯ ನಡೆದಿದೆ ಎಂಬ ಆರೋಪವಿತ್ತು, ಸುಧೀರ್ಘ ವಿಚಾರಣೆ ನಂತರ ಆರೋಪ ಸಾಭೀತಾಗಿದೆ ಎಂದು ನ್ಯಾಯಾಧೀಶರು ತೀರ್ಪು ನೀಡಿದ್ದರು.

## ಆಪರೇಷನ್ ಸಿಂಧೂರ್ ಕುರಿತ ಶಾ ಭಾಷಣಕ್ಕೆ ಮೋದಿ ಶ್ಲಾಘನೆ

**ನವದೆಹಲಿ:** ರಾಜ್ಯಸಭೆಯಲ್ಲಿ ಆಪರೇಷನ್ ಸಿಂಧೂರ್ ಕುರಿತ ಚರ್ಚೆಗೆ ಗೃಹ ಸಚಿವ ಅಮಿತ್ ಶಾ ನೀಡಿದ ಉತ್ತರವನ್ನು ಅದ್ಭುತ ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಭಯೋತ್ಪಾದಕ ಜಾಲಗಳನ್ನು ಬೇರುಸಹಿತ ಕಿತ್ತುಹಾಕುವುದು ಸೇರಿದಂತೆ ರಾಷ್ಟ್ರೀಯ ಭದ್ರತೆಯ ಕುರಿತು ಸರ್ಕಾರದ ನಿಲುವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ ಎಂದು ಅವರು ಎಕ್ಸ್ ಮಾಡಿದ್ದಾರೆ. ವಿದೇಶಾಂಗ ಸಚಿವ ಜೈಶಂಕರ್ ಅವರ ಅಸಾಧಾರಣ ಭಾಷಣವನ್ನೂ ಮೋದಿ ಶ್ಲಾಘಿಸಿದರು. ಭಯೋತ್ಪಾದನೆಯನ್ನು ಜಾಗತಿಕ ಗಮನ ಸೆಳೆಯುವ ವಿಷಯವನ್ನಾಗಿ ಮಾಡಲು ಭಾರತದ ಪ್ರಯತ್ನಗಳನ್ನು ಅವರು ಒತ್ತಿ ಹೇಳಿದರು.

ಆಪರೇಷನ್ ಸಿಂಧೂರ್ ಮೂಲಕ ದೇಶದ ಸೂಕ್ತ ಪ್ರತಿಕ್ರಿಯೆಯನ್ನು, ಸರ್ಕಾರ ನಾಗರಿಕರ ಸುರಕ್ಷತೆಯನ್ನು ಹೇಗೆ ಹೆಚ್ಚಿಸುತ್ತಿದೆ ಎಂಬುದನ್ನು ಎತ್ತಿ ತೋರಿಸಿದರು ಎಂದು ಮೋದಿ ಹೇಳಿದರು.



ಶಾ ಅವರ ಭಾಷಣದ ಲಿಂಕ್ ಅನ್ನು ಪೋಸ್ಟ್ ಮಾಡಿದ ಅವರು, ರಾಜ್ಯಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ ಅವರ ಅದ್ಭುತ ಭಾಷಣ. ರಾಷ್ಟ್ರೀಯ ಭದ್ರತೆ, ಭಯೋತ್ಪಾದಕ ಜಾಲಗಳನ್ನು ಬೇರುಸಹಿತ ಕಿತ್ತುಹಾಕುವುದು ಮತ್ತು ಆಪರೇಷನ್ ಸಿಂಧೂರ್‌ನ ಯಶಸ್ಸಿಗೆ ಸಂಬಂಧಿಸಿದ ಪ್ರಮುಖ ಅಂಶಗಳ ಕುರಿತು ನಮ್ಮ ಸರ್ಕಾರದ ದೃಷ್ಟಿಕೋನವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದರು ಎಂದು ಹೇಳಿದರು.

ಪೆಹಲ್ಗಾಮ್ ಭಯೋತ್ಪಾದಕ ದಾಳಿ, ಆಪರೇಷನ್ ಸಿಂಧೂರ್‌ಗೆ ಸಂಬಂಧಿಸಿದ ಚರ್ಚೆ ಮುಗಿದಾಗ ಶಾ ಮತ್ತು ಜೈಶಂಕರ್ ಇಬ್ಬರೂ ನಿನ್ನೆ ಸದನದಲ್ಲಿ ಮಾತನಾಡಿದರು.

**ರಾಜ್ಯಸಭೆಯಲ್ಲಿ ಸಭಾ ನಾಯಕರಾಗಿರುವ ಬಿಜೆಪಿ ಅಧ್ಯಕ್ಷ ಜೆ ಪಿ ನಡ್ಡಾ ಅವರು ರಾಷ್ಟ್ರೀಯ ಭದ್ರತೆಗೆ ಆದ್ಯತೆ ನೀಡುವಾಗ ಆಪರೇಷನ್ ಸಿಂಧೂರ್ ತನ್ನ ಉದ್ದೇಶಗಳನ್ನು ಹೇಗೆ ಸಾಧಿಸಿತು ಎಂಬುದರ ಕುರಿತು ವಿವರವಾಗಿ ಮಾತನಾಡಿದ್ದಾರೆ ಎಂದು ಮೋದಿ ಗಮನಿಸಿದ್ದರು. ಎಪ್ರಿಲ್ 22 ರ ಭಯೋತ್ಪಾದಕ ದಾಳಿಗೆ ತಮ್ಮ ಸರ್ಕಾರ ಸಂಪೂರ್ಣ ದೃಢನಿಶ್ಚಯ ಮತ್ತು ದೃಢಸಂಕಲ್ಪದಿಂದ ಪ್ರತಿಕ್ರಿಯಿಸಿದೆ ಎಂದು ಅವರು ಹೇಳಿದ್ದರು.**

### ಭಾರತ-ರಷ್ಯಾ ತಮ್ಮ ಸತ್ತ ಆರ್ಥಿಕತೆಯನ್ನು ಒಟ್ಟಿಗೆ ಹೂಳಲಿ; ಡೊನಾಲ್ಡ್ ಟ್ರಂಪ್ ಶಾಕಿಂಗ್ ಹೇಳಿಕೆ

# ಭಾರತಕ್ಕೆ ಶೇ. 25ರಷ್ಟು ಸುಂಕ ವಿಧಿಸುವ ನಿರ್ಧಾರದ ಅಸಲಿ ಕಾರಣ ಬಹಿರಂಗ


**ಅಮೆರಿಕ ಪದೇ ಪದೇ ಗಡುವು**

**ವಾಷಿಂಗ್ಟನ್:** ಭಾರತದ ಸರಕುಗಳ ಮೇಲೆ ಶೇ. 25ರಷ್ಟು ಸುಂಕವನ್ನು ಘೋಷಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಈ ಘೋಷಣೆಯ ಒಂದು ದಿನದ ಬಳಿಕ ಶಾಕಿಂಗ್ ಹೇಳಿಕೆಯೊಂದನ್ನು ನೀಡಿದ್ದಾರೆ. ಭಾರತ ಮತ್ತು ರಷ್ಯಾವನ್ನು ತೀವ್ರವಾಗಿ ಟೀಕಿಸಿರುವ ಡೊನಾಲ್ಡ್ ಟ್ರಂಪ್, ಹೊಸದಿಲ್ಲಿ ಮತ್ತು ಮಾಸ್ಕೋ ಜೊತೆಗಿನ ವ್ಯವಹಾರಗಳ ಬಗ್ಗೆ ಯಾವ ಕಾರಣಕ್ಕೂ ತಲೆ ಕೆಡಿಸಿಕೊಳ್ಳುವುದಿಲ್ಲ. ಅವೆರೆಡೂ ರಾಷ್ಟ್ರಗಳು ಏನು ಮಾಡುತ್ತವೆ ಎಂಬುದು ನಮಗೆ ಮುಖ್ಯವಲ್ಲ ಎಂದು ಹೇಳಿದ್ದಾರೆ. ಇಷ್ಟಕ್ಕೇ ಸುಮ್ಮನಾಗದ ಡೊನಾಲ್ಡ್ ಟ್ರಂಪ್, ಭಾರತ ಮತ್ತು ರಷ್ಯಾ ತಮ್ಮ ಸತ್ತ ಆರ್ಥಿಕತೆಗಳನ್ನು ಜೊತಯಾಗಿ ಹೂಳಲಿ ಎಂದು ಶಾಂಕಿಂಗ್ ಹೇಳಿಕೆ ನೀಡಿದ್ದಾರೆ. ಈ ಮೂಲಕ ತಾವು ಉದ್ದೇಶಪೂರ್ವಕವಾಗಿಯೇ ಭಾರತದ ಮೇಲೆ ಶೇ. 25ರಷ್ಟು ಸುಂಕವನ್ನು ವಿಧಿಸಿರುವುದಾಗಿ ಅಮೆರಿಕ ಅಧ್ಯಕ್ಷರು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ.

ಭಾರತವನ್ನು ಗೆಳೆಯ ಎಂದು ಹೇಳುತ್ತಲೇ ಭಾರತದ ಸರಕುಗಳ ಮೇಲೆ ಶೇ. 25ರಷ್ಟು ಸುಂಕ ವಿಧಿಸಿರುವ ಡೊನಾಲ್ಡ್ ಟ್ರಂಪ್, ರಷ್ಯಾ ಜೊತೆ ತೈಲ ವ್ಯಾಪಾರ ಮಾಡುತ್ತಿರುವುವದಕ್ಕೆ ಹೆಚ್ಚುವರಿ ದಂಡಗಳನ್ನೂ ವಿಧಿಸಿದ್ದಾರೆ. ಟ್ರಂಪ್ ಅವರ ಈ ನಿರ್ಧಾರ ಅಚ್ಚರಿಕೆ ಕಾರಣವಾಗಿತ್ತು. ಈ ನಿರ್ಧಾರಕ್ಕೆ ಪ್ರತಿಕ್ರಿಯೆ ನೀಡಿದ್ದದ ಭಾರತ, ರಾಷ್ಟ್ರೀಯ ಹಿತಾಸಕ್ತಿ ಬಲಿ ಕೊಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಇಲ್ಲಿಯವರೆಗೆ ಡೊನಾಲ್ಡ್ ಟ್ರಂಪ್ ಅವರ ಅಸಂಬದ್ಧ ಹೇಳಿಕೆಗಳಿಗೆ ಸಮಚಿತ್ತದ ಪ್ರತಿಕ್ರಿಯೆ ನೀಡುತ್ತಲೇ ಬಂದಿದ್ದ ಭಾರತ, ಇನ್ನು ಮುಂದೆ ಖಾರದ ಪ್ರತಿಕ್ರಿಯೆ ನೀಡುವ ಸಾಧ್ಯತೆ ಇದೆ. ಭಾರತದ ಆರ್ಥಿಕತೆಯನ್ನು ಸತ್ತಿರುವ ಆರ್ಥಿಕತೆ ಎಂದು ಕರೆದು ದರ್ಪ ತೋರಿರುವ ಡೊನಾಲ್ಡ್ ಟ್ರಂಪ್, ಈ ಕುರಿತು ಭಾರತದಿಂದ ತೀಕ್ಷ್ಣ ಪ್ರತಿಕ್ರಿಯೆಯನ್ನು ಪಡೆಯಲಿರುವುದು ಖಚಿತ. ಡಿಮಿಟ್ರಿ ಅವರು ಅಮೆರಿಕ ಪದೇ ಪದೇ ಗಡುವು ನೀಡುತ್ತಿದ್ದರೆ, ಅಮೆರಿಕದೊಂದಿಗೆ ರಷ್ಯಾ ಯುದ್ಧ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು. ಅದೇನೆ ಇರಲಿ, ಡೊನಾಲ್ಡ್ ಟ್ರಂಪ್ ಅವರು ಭಾರತ ಮತ್ತು ರಷ್ಯಾ ಸತ್ತ ಆರ್ಥಿಕತೆಯನ್ನು ಹೊಂದಿವೆ ಎಂದು ಹೇಳಿದ್ದು, ಈ ಹೇಳಿಕೆ ಸಹಜವಾಗಿ ಭಾರತ, ರಷ್ಯಾವನ್ನು ಕೆರಳಿಸಿದೆ.

ತಮ್ಮ ದ್ವಿಪಕ್ಷೀಯ ವ್ಯಾಪಾರವನ್ನು ಟೀಕಿಸುತ್ತಿರುವ ಟ್ರಂಪ್, ಇದೀಗ ನೀವು ಏನೂ ಮಾಡಿದರೂ ನಾನು ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಹೇಳುತ್ತಿರುವುದನ್ನು ನೋಡಿ ಭಾರತ ಮತ್ತು ರಷ್ಯಾ ಆಶ್ಚರ್ಯಚಕಿತವಾಗಿವೆ.



**ತುಂಬಾ ಕಡಿಮೆ ವ್ಯಾಪಾರ**

**ರಷ್ಯಾ ಜೊತೆ ಭಾರತ ಯಾವುದೇ ವ್ಯಾಪಾರ ಒಪ್ಪಂದ ಮಾಡಿಕೊಂಡರೂ ನಮಗೆ ಚಿಂತೆಯಿಲ್ಲ. ಅವರು ತಮ್ಮ ಸತ್ತ ಆರ್ಥಿಕತೆಗಳನ್ನು ಒಟ್ಟಿಗೆ ಹೂಳಬಹುದು. ಭಾರತವು ಅಧಿಕ ಸುಂಕ ದರಗಳನ್ನು ಹೊಂದಿರುವುದರಿಂದ, ನಾವು ಅವರೊಂದಿಗೆ ತುಂಬಾ ಕಡಿಮೆ ವ್ಯಾಪಾರ ವಿಶ್ವದಲ್ಲಿಯೇ ಅತ್ಯಧಿಕ ಸುಂಕ ದರಗಳನ್ನು ಹೊಂದಿರುವ ಭಾರತ, ರಷ್ಯಾ, ಯುಎಸ್‌ಎ ಜೊತೆಗೆ ಅದು ಹೇಗೆ ಒಂದೇ ರೀತಿಯ ವ್ಯಾಪಾರ ಮಾಡುತ್ತದೆ ಎಂಬುದನ್ನು ನೋಡೋಣ ಎಂದು ಟ್ರಂಪ್ ತಮ್ಮ ಟ್ರೂತ್ ಸೋಷಿಯಲ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.**

**ಡಿಮಿಟ್ರಿ ವಿರುದ್ಧ ಕಿಡಿ**

**ಇದೇ ವೇಳೆ ರಷ್ಯಾದೊಂದಿಗಿನ ವಾಷಿಂಗ್ಟನ್ ಡಿಸಿಯ ಅಲ್ಟಿಮೇಟಮ್ ಆಟ ಯುದ್ಧಕ್ಕೆ ಕಾರಣವಾಗಬಹುದು ಎಂಬ ರಷ್ಯಾ ಮಾಜಿ ಅಧ್ಯಕ್ಷ ಡಿಮಿಟ್ರಿ ಮೆಡ್ವೆಡೆವ್ ಅವರ ಹೇಳಿಕೆಯನ್ನು ಡೊನಾಲ್ಡ್ ಟ್ರಂಪ್ ಟೀಕಿಸಿದ್ದಾರೆ. ಡಿಮಿಟ್ರಿ ತಾವು ಇನ್ನೂ ರಷ್ಯಾದ ಅಧ್ಯಕ್ಷರು ಎಂದು ಭಾವಿಸದಂತಿದೆ. ಅವರೊಬ್ಬ ವಿಫಲ ಅಧ್ಯಕ್ಷರಾಗಿದ್ದು, ಅಮೆರಿಕದ ಬಗ್ಗೆ ಹಗುರವಾಗಿ ಮಾತನಾಡಿ ರಷ್ಯಾವನ್ನು ಅಪಾಯಕ್ಕೆ ಸಿಲುಕಿಸುತ್ತಿದ್ದಾರೆ ಎಂದು ಡೊನಾಲ್ಡ್ ಟ್ರಂಪ್ ಸೂಕ್ಷ್ಮವಾಗಿ ಎಚ್ಚರಿಸಿದ್ದಾರೆ.**

## ಮಿನಿ ನ್ಯೂಸ್

### ಪತ್ನಿಯೊಂದಿಗೆ ಜಗಳವಾಡಿ ಯಮುನಾ ನದಿಗೆ ಹಾರಿದ ಪತಿ

**ನವದೆಹಲಿ:** ಪತ್ನಿಯೊಂದಿಗಿನ ಜಗಳದ ನಂತರ ಪತಿ ವ್ಯಕ್ತಿ ಯಮುನಾ ನದಿಗೆ ಹಾರಿದ್ದ ಘಟನೆ ದೆಹಲಿಯಲ್ಲಿ ನಡೆದಿದೆ.ಅದೃಷ್ಟವಶಾತ್ ನದಿಯಲ್ಲಿದ್ದ ದೋಣಿ ಚಾಲಕರು ಆತನನ್ನು ರಕ್ಷಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.ಬೈಕ್‌ನಲ್ಲಿ ಬಂದ ಲೋಕೇಂದ್ರ ಸಿಂಗ್ (30). ದೆಹಲಿಯ ಸಿಗ್ನೇಚರ್ ಸೇತುವೆಯಿಂದ ನದಿಗೆ ಹಾರಿದ್ದರು. ಅಲ್ಲೇ ಇದ್ದ ಕೆಲವು ಅಧಿಕಾರಿಗಳು ನದಿಯಲ್ಲಿ ಮುಳುಗುತ್ತಿರುವ ವ್ಯಕ್ತಿಯನ್ನು ಗಮನಿಸಿ, ಅವರು ಹತ್ತಿರದ ದೋಣಿ ಚಾಲಕರಿಗೆ ಮಾಹಿತಿ ನೀಡಿದರು, ಅವರಲ್ಲಿ ಇಬ್ಬರು ಸ್ಥಳಕ್ಕೆ ಧಾವಿಸಿ ಲೋಕೇಂದ್ರ ಸಿಂಗ್‌ರನ್ನು ನೀರಿನಿಂದ ಹೊರತೆಗೆದರು ಎಂದು ಪೊಲೀಸರು ಹೇಳಿದರು.

ತನ್ನ ಹೆಂಡತಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಸಂದೇಶವನ್ನು ಕಳುಹಿಸಿ ಮಬೈಲ್‌ನ್ನು ಬೈಕ್‌ನಲ್ಲೆ ಬಿಟ್ಟು ಹೋಗಿದ್ದರು. ಅಸ್ವಸ್ಥಗೊಂಡಿದ್ದ ಲೋಕೇಂದ್ರ ಅವರನ್ನು ಮಜ್ನು ಕಾ ತಿಲಾದ ಟಿಬೆಟಿಯನ್ ಶಿಬಿರದಲ್ಲಿರುವ ಔಷಧಾಲಯಕ್ಕೆ ಕರೆದೊಯ್ಯಲಾಯಿತು, ಅಲ್ಲಿ ಅವರಿಗೆ ಪ್ರಜ್ಞೆ ಬಂದಿತು. ಪತ್ನಿಯೊಂದಿಗೆ ಜಗಳವಾಡಿದ ನಂತರ ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದಾಗಿ ಮತ್ತು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದಾಗಿ ಆತ ಪೊಲೀಸರಿಗೆ ತಿಳಿಸಿದ್ದಾನೆ. ಲೋಕೇಂದ್ರ ಅವರ ಪತ್ನಿ ತನ್ನ ಸಹೋದರನೊಂದಿಗೆ ಸ್ಥಳಕ್ಕೆ ಬಂದು ಮನೆಗೆ ಕರೆದೊಯ್ದರು ಎಂದು ತಿಳಿಸಿದ್ದಾರೆ.

### ಬೀಜಿಂಗ್‌ನಲ್ಲಿ ಭಾರಿ ಮಳೆ: 44 ಸಾವು, 9 ಮಂದಿ ನಾಪತ್ತೆ

**ಬೀಜಿಂಗ್:** ಭಾರಿ ಮಳೆಯಿಂದಾಗಿ ಬೀಜಿಂಗ್‌ನಲ್ಲಿ ಪ್ರವಾಹ ಪರಿಸ್ಥಿತಿ ಏರ್ಪಟ್ಟಿದೆ. ಒಂದು ವಾರದಲ್ಲಿ ಮಳೆ ಸಂಬಂಧಿತ ಅವಘಡಗಳಲ್ಲಿ 44 ಮಂದಿ ಮೃತಪಟ್ಟಿದ್ದು, 9 ಮಂದಿ ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

ಮಿಯುನ್ ಹಾಗೂ ಯಾಕಿಂಗ್ ಜಿಲ್ಲೆಯಲ್ಲಿ ಈ ಸಾವುಗಳು ವರದಿಯಾಗಿವೆ. ನಾಪತ್ತೆಯಾಗಿರುವರ ಪತ್ತೆಗಾಗಿ ವಿಪತ್ತು ನಿರ್ವಹಣಾ ತಂಡ ರಕ್ಷಣಾ ಕಾರ್ಯಾಚರಣೆಗಳನ್ನು ತೀವ್ರಗೊಳಿಸಿರುವುದಾಗಿ ಅವರು ತಿಳಿಸಿದ್ದಾರೆ. ಮಳೆಯ ತೀವ್ರತೆಗೆ ಬೀಜಿಂಗ್‌ನ ವಿವಿಧ ಜಿಲ್ಲೆಯ ಹಲವು ರಸ್ತೆಗಳು ಹಾನಿಗೊಳಗಾಗಿವೆ. 136 ಗ್ರಾಮಗಳಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

### ಚೀನಾದಿಂದ ಪಾಕಿಸ್ತಾನದ ರಿಮೋಟ್ ಸೆನ್ಸಿಂಗ್ ಉಪಗ್ರಹ ಉಡ್ಡಯನ

**ಇಸ್ಲಾಮಾಬಾದ್:** ಹವಾಮಾನ ಬದಲಾವಣೆಗಳಿಗೆ ಸಂಬಂಧಿಸಿದಂತ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಪಾಕಿಸ್ತಾನವು ಗುರುವಾರ ಚೀನಾದ ಸಹಾಯದಿಂದ ದೂರಸಂವೇದಿ ಉಪಗ್ರಹದ ಉಡ್ಡಯನ ಮಾಡಿದೆ. ಚೀನಾದ ನೈಋತ್ಯ ಸಿಚುವಾನ್ ಪ್ರಾಂತ್ಯದಲ್ಲಿರುವ ಕ್ಸಿಚಾಂಗ್ ಉಪಗ್ರಹ ಉಡಾವಣಾ ಕೇಂದ್ರದಿಂದ ಪಾಕಿಸ್ತಾನ ರಿಮೋಟ್ ಸೆನ್ಸಿಂಗ್ ಉಪಗ್ರಹವನ್ನು ಕುವಾ-ಐಿಎ ರಾಕೆಟ್ ಮೂಲಕ ಉಡ್ಡಯನ ಮಾಡಲಾಯಿತು ಎಂದು ಮೂಲಗಳು ತಿಳಿಸಿವೆ. ಪಾಕಿಸ್ತಾನದ ಸ್ಪೇಸ್ ಆ್ಯಂಡ್ ಅಪ್ಪರ್ ಅಟ್ಮ್ಯಾಸ್ಫಿಯರ್ ರಿಸರ್ಚ್ ಕಮಿಷನ್ ತಾಂತ್ರಿಕ ನೆರವನ್ನು ಒದಗಿಸಿತು. ಚೀನಾದ ಸರ್ಕಾರಿ ಸ್ವಾಮ್ಯದ ಕ್ಸಿನ್‌ಹುವಾ ಸುದ್ದಿ ಸಂಸ್ಥೆ ವರದಿ ಪ್ರಕಾರ, ಉಪಗ್ರಹವು ನಿಗದಿತ ಕಕ್ಷೆಯನ್ನು ಸೇರಿತು. ಪ್ರಸಕ್ತ ಸಾಲಿನಲ್ಲಿ ಚೀನಾ ಉಡ್ಡಯನ ಮಾಡಿದ ಪಾಕಿಸ್ತಾನದ ಎರಡನೇ ಉಪಗ್ರಹ ಇದಾಗಿದೆ. ಭೂ ಸಂಪನ್ಮೂಲ ಸಮೀಕ್ಷೆ, ನೈಸರ್ಗಿಕ ವಿಪತ್ತು ತಡೆಗಟ್ಟುವುದು ಉಪಗ್ರಹದ ಪ್ರಾಥಮಿಕ ಉದ್ದೇಶವಾಗಿದೆ.

ಪ್ರವಾಹ, ಭೂಕುಸಿತ, ಹಿಮ ಕರಗುವುದು, ಅರಣ್ಯನಾಶ ಸೇರಿದಂತೆ ನೈಸರ್ಗಿಕ ಸವಾಲುಗಳನ್ನು ಎದುರಿಸುವಲ್ಲಿ ನಿರ್ಣಾಯಕ ಪಾತ್ರವಹಿಸಲಿದೆ ಎನ್ನಲಾಗಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಚೀನಾ, ಪಾಕಿಸ್ತಾನ ನಡುವಣ ಸಹಕಾರ ವೃದ್ಧಿಯಲ್ಲಿ ಈ ಯೋಜನೆಯು ಪ್ರತಿಬಿಂಬಿಸುತ್ತದೆ ಎಂದು ಹೇಳಲಾಗಿದೆ.

### ತಮಿಳುನಾಡು ಬಿಜೆಪಿ ಉಪಾಧ್ಯಕ್ಷೆಯಾಗಿ ನಟಿ ಖುಷ್ಬೂ ಸುಂದರ್ ನೇಮಕ

**ಚೆನ್ನೈ:** ನಟಿ ಖುಷ್ಬೂ ಸುಂದರ್ ಅವರನ್ನು ತಮಿಳುನಾಡು ರಾಜ್ಯ ಬಿಜೆಪಿ ಉಪಾಧ್ಯಕ್ಷೆಯನ್ನಾಗಿ ನೇಮಕ ಮಾಡಲಾಗಿದೆ. ಮಾಜಿ ಸಂಸದರಾದ ವಿ.ಪಿ ದೊರೈಸಾಮಿ, ಕೆ.ಪಿ.ರಾಮಲಿಂಗಂ, ಶಶಿಕಲಾ ಪುಷ್ಪಾ ಮತ್ತು ಎಂ. ಚಕ್ರವರ್ತಿ ಸೇರಿದಂತೆ ಇತರರು ಪಕ್ಷದ ರಾಜ್ಯ ಉಪಾಧ್ಯಕ್ಷರಾಗಿ ಮುಂದುವರಿದಿದ್ದಾರೆ. ಅವರ ನೇಮಕಾತಿಗಳನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅನುಮೋದಿಸಿದ್ದಾರೆ ಎಂದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ನೈನಾರ್ ನಾಗೇಂದ್ರನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕೇಶವ ವಿನಾಯಕನ್ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ, ಪ್ರೊ.ರಾಮ ಶ್ರೀನಿವಾಸನ್ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ. ಕರಾಟೆ ಆರ್. ತ್ಯಾಗರಾಜನ್ ರಾಜ್ಯ ಕಾರ್ಯದರ್ಶಿಯಾಗಿ ಮುಂದುವರಿಯಲಿದ್ದಾರೆ. 2025ರ ಏಪ್ರಿಲ್‌ನಲ್ಲಿ ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ನೈನಾರ್ ನಾಗೇಂದ್ರನ್ ಅಧಿಕಾರ ವಹಿಸಿಕೊಂಡಿದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ನಟಿ ಖುಷ್ಬೂ ಸುಂದರ್, ನನಗೆ ನಿಜಕ್ಕೂ ತುಂಬಾ ಸಂತೋಷವಾಗಿದೆ. ನನ್ನ ಮೇಲೆ ನಂಬಿಕೆ ಇರಿಸಿ, ಈ ಹುದ್ದೆ ನೀಡಿದ್ದಕ್ಕಾಗಿ ನೈನಾರ್ ನಾಗೇಂದ್ರನ್, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ.

### ಸುಳ್ಳು ಪೋಕ್ಸ್ ಪ್ರಕರಣ: 9 ತಿಂಗಳು ಜೈಲಿನಲ್ಲಿ ಕಳೆದ 75 ವರ್ಷದ ವ್ಯಕ್ತಿ

**ತಿರುವನಂತಪುರ:** ಸುಳ್ಳು ಪೋಕ್ಸೋ ಪ್ರಕರಣವೊಂದರಲ್ಲಿ ಕೇರಳದ ಆಲಪ್ಪುಳ ಮೂಲದ 75 ವರ್ಷದ ವ್ಯಕ್ತಿಯೊಬ್ಬರು ಸುಮಾರು 9 ತಿಂಗಳು ಜೈಲು ಶಿಕ್ಷೆ ಅನುಭವಿಸಿದ್ದಾರೆ. ಇಲ್ಲಿನ ಶಾಲೆಯೊಂದರಲ್ಲಿ ಸೆಕ್ಯೂರಿಟಿಯಾಗಿ ಕೆಲಸ ಮಾಡುತ್ತಿದ್ದ ಜೋಸೆಫ್ ಎಂಬುವವರ ಮೇಲೆ, ಅದೇ ಶಾಲೆಯ ಬಾಲಕಿಯೊಬ್ಬಳು ಲೈಂಗಿಕ ದೌರ್ಜನ್ಯದ ಆರೋಪ ಹೊರಿಸಿದ್ದಳು. ಬಾಲಕಿ ನೀಡಿದ ದೂರಿನ ಅನ್ವಯ 2022ರ ನವೆಂಬರ್‌ನಲ್ಲಿ ಜೋಸೆಫ್ ಅವರನ್ನು ಬಂಧಿಸಲಾಗಿತ್ತು. ಬಳಿಕ ವಿಚಾರಣೆ ವೇಳೆ ಬಾಲಕಿ ನಿಜವಾದ ಅಪರಾಧಿ ಯಾರೆಂದು ಬಹಿರಂಗಪಡಿಸಿದ್ದಳು. ಅಲ್ಲದೇ ಅವನನ್ನು ಕಾಪಾಡಲು ಜೋಸೆಫ್ ವಿರುದ್ಧ ಸುಳ್ಳು ಆರೋಪ ಮಾಡಿದ್ದಾಗಿ ಒಪ್ಪಿಕೊಂಡಿದ್ದಳು. 2023ರ ಜುಲೈನಲ್ಲಿ ನ್ಯಾಯಾಲಯವು ಜೋಸೆಫ್ ಅವರಿಗೆ ಜಾಮೀನು ನೀಡಿದೆ. ಆ ಬಾಲಕಿ ಮತ್ತು ಆಕೆಯ ಕುಟುಂಬಸ್ಥರ ಬಗ್ಗೆ ನನಗೆ ಚೆನ್ನಾಗಿ ತಿಳಿದಿದೆ. ಈ ಘಟನೆ ನಿಜಕ್ಕೂ ನನಗೆ ಆಘಾತವನ್ನುಂಟುಮಾಡಿತು. ಈಗಲೂ ನಾನು ಬಾಲಕಿಗಾಗಿ ದೇವರಲ್ಲಿ ಪ್ರಾರ್ಥಿಸುತ್ತೇನೆ. ಅವಳು ನನ್ನ ಮೊಮ್ಮಕ್ಕಳಿಗಿಂತ ಚಿಕ್ಕವಳು ಎಂದು ಜೋಸೆಫ್ ಹೇಳಿದ್ದಾರೆ.

### ಕೃಷ್ಣಮೃಗ ಭೇಟೆ ಪ್ರಕರಣ

# ಸಲ್ಮಾನ್ ಖಾನ್‌ಗೆ ಅರ್ಜಿ ಮತ್ತೆ ವಿಚಾರಣೆಗೆ



ಸಲ್ಮಾನ್ ಖಾನ್ ಹಾಗೂ ವಿವಾದಗಳಿಗೆ ಬಲು ಆತ್ಮೀಯ ನಂಟು. 1998 ರಲ್ಲಿ ನಡೆದ ಕೃಷ್ಣಮೃಗ ಭೇಟೆ ಪ್ರಕರಣ ಈಗಲೂ ಸಲ್ಮಾನ್ ಖಾನ್ ಬೆನ್ನುಬಿಡದೆ ಕಾಡುತ್ತಿದೆ. ಪ್ರಕರಣದಲ್ಲಿ ಈಗಾಗಲೇ ಸಲ್ಮಾನ್ ಖಾನ್‌ಗೆ ಐದು ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ. ತೀರ್ಪಿನ ವಿರುದ್ಧ ಸಲ್ಮಾನ್ ಖಾನ್ ಮೇಲ್ಮನವಿ ಸಲ್ಲಿಸಿದ್ದು, ಅರ್ಜಿಯ ವಿಚಾರಣೆ ನಡೆಸಲು ದಿನಾಂಕ ನಿಗದಿ ಆಗಿದೆ. ಅಪಘಾತ ಪ್ರಕರಣ ಮತ್ತು ಕೃಷ್ಣಮೃಗ ಭೇಟೆ ಪ್ರಕರಣ ಸಲ್ಮಾನ್ ಖಾನ್ ಅನ್ನು ದಶಕಗಳಿಂದಲೂ ಬೆನ್ನು ಬಿದ್ದಿವೆ. ಸಲ್ಮಾನ್ ಖಾನ್ ಸಹ ಕಾನೂನಿನ ಸಿಕ್ಕುಗಳನ್ನು ಬಳಸಿಕೊಂಡು ಶಿಕ್ಷೆಯಿಂದ ತಪ್ಪಿಸಿಕೊಂಡೆ ಬರುತ್ತಿದ್ದಾರೆ. ಅಪಘಾತ ಪ್ರಕರಣದಲ್ಲಂತೂ ಸಲ್ಮಾನ್ ಖಾನ್ ವಿರುದ್ಧ ಪ್ರಕರಣವನ್ನೇ ಕೈಬಿಡಲಾಗಿದೆ. ಆದರೆ ಕೃಷ್ಣಮೃಗ ಪ್ರಕರಣ ಸಲ್ಮಾನ್ ಖಾನ್ ಅನ್ನು ಜೈಲಿಗೆ ಕಳಿಸಿಯೇ ತೀರುವಂತಿದೆ. ಇದೀಗ ಸೆಪ್ಟೆಂಬರ್ ತಿಂಗಳಲ್ಲಿ ಮತ್ತೊಮ್ಮೆ ಪ್ರಕರಣದ ವಿಚಾರಣೆ ಇದೆ. ಕೃಷ್ಣಮೃಗ ಭೇಟೆ ಪ್ರಕರಣದಲ್ಲಿ 2018ರಲ್ಲಿಯೇ ಸಲ್ಮಾನ್ ಖಾನ್ ದೋಷಿ ಎಂದು ರಾಜಸ್ಥಾನದ ಟ್ರಯಲ್ ಕೋರ್ಟ್ ತೀರ್ಪು ನೀಡಿದೆ. ಅದೇ ಪ್ರಕರಣದಲ್ಲಿ ಇತರೆ ಆರೋಪಿಗಳಾಗಿದ್ದ ಸೈಫ್ ಅಲಿ ಖಾನ್, ನಟಿಯರಾದ ಟಬು, ಸೊನಾಲಿ ಬೇಂದ್ರೆ, ನೀಲಂ ಸ್ಥಳೀಯ ವ್ಯಕ್ತಿಯಾಗಿದ್ದ ದುಶ್ಯಂತ್ ಸಿಂಗ್ ಪ್ರಕರಣದಿಂದ ಮುಕ್ತಿಯನ್ನು ಸಹ ನೀಡಿದೆ. ಆ ಬಳಿಕ ಸಲ್ಮಾನ್ ಖಾನ್, ತಮಗೆ ವಿಧಿಸಲಾಗಿರುವ ಐದು ವರ್ಷದ ಸಜೆಯನ್ನು ವಿರೋಧಿಸಿ ಮೇಲ್ಮನವಿ ಸಲ್ಲಿಸಿದ್ದು, ಅರ್ಜಿಯ ವಿಚಾರಣೆಗೆ ರಾಜಸ್ಥಾನ ಹೈಕೋರ್ಟ್ ಒಪ್ಪಿಗೆ ಸೂಚಿಸಿದ್ದು, ಸೆಪ್ಟೆಂಬರ್ 22 ರಂದು ಅರ್ಜಿಯ ವಿಚಾರಣೆ ನಡೆಯಲಿದೆ. 1998 ರಲ್ಲಿ 'ಹಮ್ ಸಾಥ್ ಸಾಥ್ ಹೈ' ಸಿನಿಮಾದ ಚಿತ್ರೀಕರಣದ ಸಮಯದಲ್ಲಿ ಸಲ್ಮಾನ್ ಖಾನ್ ಕೃಷ್ಣಮೃಗ ಕೊಂದಿದ್ದಾರೆ ಎಂದು ಆರೋಪಿಸಲಾಗಿತ್ತು. ಅದೇ ವರ್ಷ ಸಲ್ಮಾನ್ ಖಾನ್ ಬಂಧನವಾಗಿ ಬಳಿಕ ಜಾಮೀನಿನ ಮೇಲೆ ಬಿಡುಗಡೆ ಸಹ ಮಾಡಲಾಯ್ತು. ಅದಾದ ಬಳಿಕ 2006 ರಲ್ಲಿ ಕೆಳಹಂತದ ನ್ಯಾಯಾಲಯ ಸಲ್ಮಾನ್ ಖಾನ್ ಗೆ ಐದು ವರ್ಷದ ಶಿಕ್ಷೆ ನೀಡಿತು.



ರಜನಿಕಾಂತ್ ಅಭಿನಯದ 'ಕೂಲಿ' ಸಿನಿಮಾ ಪ್ರಚಾರಕ್ಕೆ ಅಮೇಜಾನ್ ಜೊತೆ ಕೈಜೋಡಿಸಿದೆ. ಅಮೇಜಾನ್ ಮೂಲಕ ಆರ್ಡರ್ ಮಾಡುವ ಪ್ರತಿ ಪಾರ್ಸೆಲ್‌ನಲ್ಲೂ

# ಮನೆ ಮನೆಗೆ ಬರಲಿದೆ ಕೂಲಿ ಸಿನಿಮಾ ಪೋಸ್ಟರ್

'ಕೂಲಿ' ಸಿನಿಮಾದ ಪೋಸ್ಟರ್ ಇರುತ್ತದೆ. ಇದು ಹೊಸ ರೀತಿಯ ಮಾರ್ಕೆಟಿಂಗ್ ತಂತ್ರ. ಇ-ಕಾಮರ್ಸ್ ಮೂಲಕ ಸಿನಿಮಾ ಪ್ರಚಾರ ಮಾಡುವುದು ಇದೇ ಮೊದಲು. ಸಿನಿಮಾ ಪ್ರಚಾರಕ್ಕೆ ಒಬ್ಬರು ಒಂದೊಂದು ತಂತ್ರವನ್ನು ಉಪಯೋಗಿಸುತ್ತಾರೆ. ಇತ್ತೀಚೆಗೆ ಇದಕ್ಕೆ ಹೊಸ ಹೊಸ ಮಾರ್ಗಗಳನ್ನು ಕಂಡು ಹಿಡಿಯಲಾಗುತ್ತಿದೆ. ಸಿನಿಮಾ ಮಂದಿರದ ಸೀಟ್‌ಗಳ ಮೇಲೆ ಸಿನಿಮಾ ಪೋಸ್ಟರ್‌ನ ಕವರ್ ಹಾಕಲಾಗುತ್ತದೆ. ನೀರಿನ ಬಾಟಲಿಗಳ ಮೇಲೆ ಸಿನಿಮಾದ ಪೋಸ್ಟರ್‌ನ ಕಾಣಬಹುದು. ಪಾಪ್‌ಕಾರ್ನ್ ಡಬ್ಬಿ ಹಾಗೂ ಕೂಲ್ಡ್ರಿಂಗ್ಸ್ ನೀಡುವ ಕಪ್‌ಗಳ ಮೇಲೂ ಸಿನಿಮಾ ಪೋಸ್ಟರ್ ಅಂಟಿಸಿ ಪ್ರಚಾರ ಮಾಡಿದ ಉದಾಹರಣೆ ಇದೆ. ಆದರೆ, 'ಕೂಲಿ' ಸಿನಿಮಾ ಈ ವಿಚಾರದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. 'ಕೂಲಿ' ಸಿನಿಮಾದಲ್ಲಿ ರಜನಿಕಾಂತ್ ನಟಿಸಿದ್ದು, ಲೋಕೇಶ್ ಕನಗರಾಜ್ ಅವರು ನಿರ್ದೇಶನ ಮಾಡಿದ್ದಾರೆ. ಈ ಚಿತ್ರ ಆಗಸ್ಟ್ 14ರಂದು ರಿಲೀಸ್ ಆಗಲಿದೆ.

ಸಿನಿ ವಾಹಿನಿ

# ಲೈಂಗಿಕ ದೌರ್ಜನ್ಯ ಆರೋಪ ಸೇತುಪತಿ ಹೇಳಿದ್ದೇನು?



ಖ್ಯಾತ ನಟ ವಿಜಯ್ ಸೇತುಪತಿ ವಿರುದ್ಧ ಮಹಿಳೆಯೊಬ್ಬರು ಲೈಂಗಿಕ ದೌರ್ಜನ್ಯದ ಆರೋಪವನ್ನು ಮಾಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಪೋಸ್ಟ್ ಒಂದನ್ನು ಹಂಚಿಕೊಂಡಿದ್ದಾರೆ. ಇದೀಗ ಸಂದರ್ಶನವೊಂದರಲ್ಲಿ ವಿಜಯ ಸೇತುಪತಿಗೆ ಈ ಆರೋಪದ ಬಗ್ಗೆ ಪ್ರಶ್ನೆ ಮಾಡಲಾಗಿದ್ದು, ವಿಜಯ್ ಸೇತುಪತಿ ಪ್ರತಿಕ್ರಿಯೆ ನೀಡಿದ್ದಾರೆ.

ವಿಜಯ್ ಸೇತುಪತಿ ದಕ್ಷಿಣ ಭಾರತದ ಬಲು ಜನಪ್ರಿಯ ನಟ. ಯಾವುದೇ ಹಿನ್ನೆಲೆ ಇಲ್ಲದೆ ಕೇವಲ ನಟನಾ ಪ್ರತಿಭೆಯಿಂದಲೇ ಸ್ಟಾರ್ ಪಟ್ಟಕ್ಕೆ ಏರಿರುವ ನಟ. 47 ವರ್ಷ ವಯಸ್ಸಿನ ವಿಜಯ್ ಸೇತುಪತಿ ಭಾರತದ ಬಲು ಬ್ಯುಸಿ ನಟರಲ್ಲಿ ಒಬ್ಬರು.ಹೀರೋ, ವಿಲನ್, ಪೋಷಕ ಪಾತ್ರ ಎಲ್ಲಾ ರೀತಿಯ ಪಾತ್ರಗಳಲ್ಲಿ ನಟಿಸುವ ಮೂಲಕ ಪ್ರೇಕ್ಷಕರನ್ನು ರಂಜಿಸುತ್ತಿದ್ದಾರೆ. ಇದೀಗ ವಿಜಯ್ ಸೇತುಪತಿ ವಿರುದ್ಧ ಎಕ್ಸ್ ಖಾತೆ ಬಳಕೆದಾರರೊಬ್ಬರು ಲೈಂಗಿಕ ದೌರ್ಜನ್ಯ ಆರೋಪ ಮಾಡಿದ್ದಾರೆ. ಆರೋಪದ ಬಗ್ಗೆ ವಿಜಯ್ ಸೇತುಪತಿ ಪ್ರತಿಕ್ರಿಯೆ ನೀಡಿದ್ದಾರೆ. ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿರುವ ವಿಜಯ್ ಸೇತುಪತಿ ತಮ್ಮ ಮೇಲೆ ಮಾಡಲಾಗಿರುವ ಆರೋಪಗಳೆಲ್ಲ ಸತ್ಯಕ್ಕೆ ದೂರ ಎಂದಿದ್ದಾರೆ. ಅಲ್ಲದೆ, ಈ ಆರೋಪಗಳಿಂದಾಗಿ ತಮ್ಮ ಕುಟುಂಬದವರು, ಆಪ್ತರು ಬೇಸರಗೊಂಡಿದ್ದಾರೆ. ಇದರಿಂದಾಗಿ ನನಗೆ ಬೇಸರವಾಗಿದೆ, ಇಲ್ಲವಾದರೆ ಇಂಥಹುದರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ ಎಂದಿದ್ದಾರೆ. ತಮ್ಮ ವಿರುದ್ಧ ಸುಳ್ಳು ಆರೋಪ ಮಾಡಿರುವ ಮಹಿಳೆಯರ ವಿರುದ್ಧ ತಾವು ಸೈಬರ್ ಪೊಲೀಸರಿಗೆ ದೂರು ನೀಡಿರುವುದಾಗಿಯೂ ಸಹ ವಿಜಯ್ ಸೇತುಪತಿ ಹೇಳಿದ್ದಾರೆ.




ಗೋಂಡ್ ಹಾಡಿಗೆ ಡಾನ್ಸ್

# ಪಾಪಿಗಳ ಲೋಕದಲ್ಲಿ ದಮನಿತರ ದೇವರಾಗುವನೇ ಗೂಢಚಾರಿ?

ವಿಜಯ್ ದೇವರಕೊಂಡ ನಟಿಸಿರುವ, 'ಕಿಂಗ್ಡಮ್' ಸಿನಿಮಾ ಇಂದು ಬಿಡುಗಡೆ ಆಗಿದೆ. 'ಈ ಸಿನಿಮಾಕ್ಕೆ ವೃತ್ತಿ ಜೀವನದಲ್ಲೇ ಅತ್ಯಂತ ಶ್ರಮ ಹಾಕಿದ್ದೇನೆ' ಎಂದು ವಿಜಯ್ ದೇವರಕೊಂಡ ಹೇಳಿದ್ದರು. ಅದು ಸಿನಿಮಾದ ಪ್ರತಿ ದೃಶ್ಯದಲ್ಲೂ ಕಾಣುತ್ತದೆ. ವಿಜಯ್ ದೇವರಕೊಂಡ ಮಾತ್ರವೇ ಅಲ್ಲ ಸಿನಿಮಾದ ಎಲ್ಲಾ ಪ್ರಮುಖ ತಂತ್ರಜ್ಞರೂ ಸಹ ತಮ್ಮ ಪಾಲಿನ ಬೆಸ್ಟ್ ಅನ್ನು ಕೊಟ್ಟಿರುವುದು ಪ್ರತಿ ದೃಶ್ಯದಲ್ಲೂ ಸ್ಪಷ್ಟವಾಗಿ ಕಾಣುತ್ತದೆ. ಸ್ಪೈ ಥ್ರಿಲ್ಲರ್ ಆಗಿದ್ದರೂ ಸಹ ಸಿನಿಮಾದಲ್ಲಿ ಸಹೋದರರ ಸೆಂಟಿಮೆಂಟ್ ಅನ್ನು ಹದವಾಗಿ ಬೆರೆಸಿ ಒಂದೊಳ್ಳೆ ಕಮರ್ಶಿಯಲ್ ಸಿನಿಮಾವನ್ನು ನಿರ್ದೇಶಕ ಗೌತಮ್ ತಿನ್ನನೂರಿ 'ಕಿಂಗ್ಡಮ್' ಸಿನಿಮಾ ಮೂಲಕ ನೀಡಿದ್ದಾರೆ. ಸಿನಿಮಾದ ನಾಯಕ ಸೂರಿ ಸಾಮಾನ್ಯ ಕಾನ್‌ಸ್ಟೇಬಲ್, ಅವನ ಗುರಿ ಒಂದೇ ಅಪ್ಪನನ್ನು ಕೊಂದು ಮನೆ ಬಿಟ್ಟು ಓಡಿ ಹೋಗಿರುವ ಅಣ್ಣನನ್ನು ವಾಪಸ್ ಮನೆಗೆ ಕರೆದುಕೊಂಡು ಬರಬೇಕು. ಆದರೆ ಅವರ ಅಣ್ಣ ಬಿಡುಗಡೆಯೇ ಇಲ್ಲದ ಪಾತಕಿಗಳ ಲೋಕದಲ್ಲಿ ಸಿಲುಕಿಕೊಂಡಿದ್ದಾನೆ. ಅಲ್ಲಿ ಅವನನ್ನೇ ನಂಬಿರುವ ದೊಡ್ಡ ಜನಸಮೂಹವೆ ಇದೆ. ಅವರೆಲ್ಲ ತಮ್ಮನ್ನು ರಕ್ಷಿಸಲು ಬರುವ ರಾಜನಿಗಾಗಿ ಕಾಯುತ್ತಿದ್ದಾರೆ. ಇಂಥಹಾ ಸಮಯದಲ್ಲಿ ನಾಯಕನಿಗೆ ಗೂಢಚಾರಿಯಾಗಿ ಆ ಪಾತಕ ಲೋಕಕ್ಕೆ ಹೋಗುವ ಅವಕಾಶ ದೊರೆಯುತ್ತದೆ. ಅಣ್ಣನನ್ನು ಬಿಡಿಸುವ ಅವಕಾಶ ದೊರೆಯುತ್ತದೆ. ಆದರೆ ಅದು ಅಷ್ಟು ಸುಲಭವಿಲ್ಲ. ಇಲ್ಲಿ ಕೈಯ್ಯಲ್ಲಿ ಕತ್ತಿ, ಬಂದೂಕು ಹಿಡಿದು ಕ್ರೂರ ಮೃಗಳಂತೆ ಜನರನ್ನು ಕೊಲ್ಲುವ ಪಾತಕಿಗಳ ಜೊತೆಗೆ ಕಾನೂನಿನ ಚೌಕಟ್ಟಿನಡಿ ಅಧಿಕಾರ ಬಳಸಿ ಮನುಷ್ಯರೊಂದಿಗೆ ಚದುರಂಗ ಆಡುವ ಕಿರಾತಕರೂ ಇದ್ದಾರೆ. ಅಣ್ಣನನ್ನು ಚಕ್ರವ್ಯೂಹದಿಂದ ಬಿಡಿಸಲು ಹೋಗುವ ನಾಯಕ ಇನ್ನೊಂದು ಚಕ್ರವ್ಯೂಹದಲ್ಲಿ ಸಿಲುಕಿಕೊಳ್ಳುತ್ತಾನೆ.

# ಕಾಲೇಜು ಹೋಗೋ ವಯಸ್ಸಲ್ಲಿ 'ಸು ಫ್ರಮ್ ಸೋ'ಗೆ ಮ್ಯೂಸಿಕ್



'ಸು ಫ್ರಮ್ ಸೋ' ಚಿತ್ರದ ಯಶಸ್ಸಿಗೆ ಸಂಗೀತದ ಪಾತ್ರ ಅತ್ಯಂತ ಪ್ರಮುಖ. ಕಾಲೇಜು ವಿದ್ಯಾರ್ಥಿ ಸುಮೇಧ್ ಕೆ. ಅವರ ಸಂಗೀತ ಸಂಯೋಜನೆಯು ಚಿತ್ರಕ್ಕೆ ಹೊಸ ಆಯಾಮ ನೀಡಿದೆ. ರಾಜ್ ಬಿ. ಶೆಟ್ಟಿ ಅವರ ಮಾರ್ಗದರ್ಶನದೊಂದಿಗೆ ಸುಮೇಧ್ ಅವರು ಚಿತ್ರದ ಹಾಡುಗಳನ್ನು ಕಂಪೋಸ್ ಮಾಡಿದ್ದಾರೆ. ರಾಜ್ ಬಿ. ಶೆಟ್ಟಿ ನಿರ್ಮಾಣದ, ಜೆಪಿ ತುಮಿನಾಡ್ ನಿರ್ದೇಶನದ 'ಸು ಫ್ರಮ್ ಸೋ' ಯಶಸ್ಸು ಕಾಣಲು ಸಿನಿಮಾದ ಹಾಡುಗಳು ಕೂಡ ಪ್ರಮುಖ ಕಾರಣ. ಎಲ್ಲಾ ಹಾಡುಗಳು ಸಾಕಷ್ಟು ಗಮನ ಸೆಳೆದಿವೆ. ಮೆಲೋಡಿ, ಭರ್ಜರಿ ಸ್ಟೆಪ್ ಹಾಕೋ ಸಾಂಗ್‌ಗಳು ಚಿತ್ರದಲ್ಲಿ ಇವೆ. ಈ ಹಾಡಿಗೆ ಸಂಗೀತ ಸಂಯೋಜನೆ ಮಾಡಿದ್ದು ಸುಮೇಧ್ ಕೆ. ಅವರು. ಅವರಿನ್ನೂ ಕಾಲೇಜು ಓದುತ್ತಿದ್ದಾರೆ.

ರಾಜ್ ಬಿ. ಶೆಟ್ಟಿ ಹಾಗೂ ತಂಡ ಹಾಡನ್ನು ಕಂಪೋಸ್ ಮಾಡಲು ಹೇಗೆ ಸಹಾಯ ಮಾಡಿತು ಎಂಬುದನ್ನು ಸುಮೇಧ್ ವಿವರಿಸಿದ್ದಾರೆ. 'ಸಿನಿಮಾದ ಗೆಲುವು ತುಂಬಾನೆ ಖುಷಿ ಕೊಟ್ಟಿದೆ. ಕಷ್ಟಪಟ್ಟಿದ್ದಕ್ಕೆ ಪ್ರತಿಫಲ ಸಿಕ್ಕಿದೆ. ಜನ ಸಾಂಗ್‌ಗೆ ರಿಯಾಕ್ಟ್ ಮಾಡಿದ್ದು ನೋಡಿದಾಗ ಖುಷಿ ಆಗುತ್ತದೆ. ರಾಜ್ ಹಾಗೂ ತಂಡಕ್ಕೆ ಸಿನಿಮಾದಲ್ಲಿ ಏನು ಬೇಕು ಎಂಬ ಕ್ಲ್ಯಾರಿಟಿ ಇತ್ತು. ಸಿಚ್ಯುವೇಶನ್ ಹೀಗೆ ಎಂದು ವಿವರಿಸುತ್ತಿದ್ದರು. ಕಥೆ ಎಲ್ಲೂ ಬ್ರೇಕ್ ಆಗಬಾರದು ಆ ರೀತಿಯಲ್ಲಿ ಮ್ಯೂಸಿಕ್ ಮಾಡಬೇಕು ಎಂದು ಹೇಳುತ್ತಿದ್ದರು. ಅದರ ಆಧಾರದ ಮೇಲೆ ನಾನು ಎಕ್ಸ್‌ಪ್ಲೋರ್ ಮಾಡಲು ಅವಕಾಶ ಇತ್ತು' ಎಂದಿದ್ದಾರೆ ಅವರು.

# ಐಸಿಸಿ ರ್‍ಯಾಂಕಿಂಗ್‌ನಲ್ಲಿ ಭಾರತದ ಐವರು ನಂಬರ್ 1

ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಪ್ರಕಟಿಸಿರುವ ನೂತನ ಶ್ರೇಯಾಂಕ ಪಟ್ಟಿಯಲ್ಲಿ ಭಾರತದ ಐವರು ಆಟಗಾರರು ಅಗ್ರಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ. ಇನ್ನು ಏಕದಿನ ಹಾಗೂ ಟಿ20 ಕ್ರಿಕೆಟ್ ಬ್ಯಾಟರ್‌ಗಳ ಶ್ರೇಯಾಂಕದಲ್ಲಿ ಟೀಮ್ ಇಂಡಿಯಾದ ಇಬ್ಬರು ಯುವ ದಾಂಡಿಗರು ಮೊದಲ ಸ್ಥಾನದಲ್ಲಿ ಕಾಣಿಸಿಕೊಂಡರೆ, ಟೆಸ್ಟ್ ಹಾಗೂ ಟಿ20 ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಅನುಭವಿಗಳಿಬ್ಬರು ಅಗ್ರಸ್ಥಾನ ಅಲಂಕರಿಸಿದ್ದಾರೆ. ಇಂಟರ್‌ನ್ಯಾಷನಲ್ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ನೂತನ ರ್‍ಯಾಂಕಿಂಗ್ ಪಟ್ಟಿಯನ್ನು ಪ್ರಕಟಿಸಿದೆ. ಹೊಸ ಶ್ರೇಯಾಂಕ ಪಟ್ಟಿಯಲ್ಲಿ ಟೀಮ್ ಇಂಡಿಯಾದ ಐವರು ಆಟಗಾರರು ಅಗ್ರಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ತಂಡಗಳ ಪಟ್ಟಿಯಲ್ಲೂ ಭಾರತ ಮೊದಲ ಸ್ಥಾನವನ್ನು ಅಲಂಕರಿಸಿದೆ. ನೂತನ ಶ್ರೇಯಾಂಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಟೀಮ್ ಇಂಡಿಯಾದ ಆಟಗಾರರ ಪಟ್ಟಿ ಈ ಕೆಳಗಿನಂತಿದೆ...

**ಅಭಿಷೇಕ್ ಶರ್ಮಾ:** ಟಿ20 ಬ್ಯಾಟರ್‌ಗಳ ಶ್ರೇಯಾಂಕ ಪಟ್ಟಿಯಲ್ಲಿ ಯುವ ಎಡಗೈ ದಾಂಡಿಗ ಅಭಿಷೇಕ್ ಶರ್ಮಾ ಮೊದಲ ಸ್ಥಾನಕ್ಕೇರಿದ್ದಾರೆ. ಕಳೆದ ಬಾರಿ ಅಗ್ರಸ್ಥಾನದಲ್ಲಿದ್ದ ಟ್ರಾವಿಡ್ ಹೆಡ್ ಅವರನ್ನು ಹಿಂದಿಕ್ಕಿ ಅಭಿಷೇಕ್ ಶರ್ಮಾ 829 ಅಂಕಗಳೊಂದಿಗೆ ಮೊದಲ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

**ಶುಭ್‌ಮನ್ ಗಿಲ್:** ಏಕದಿನ ಕ್ರಿಕೆಟ್ ಬ್ಯಾಟರ್‌ಗಳ ಪಟ್ಟಿಯಲ್ಲಿ ಶುಭ್‌ಮನ್ ಗಿಲ್ ಅಗ್ರಸ್ಥಾನಕ್ಕೇರಿದ್ದಾರೆ. ಪಾಕಿಸ್ತಾನ್ ತಂಡದ ಮಾಜಿ ನಾಯಕ ಬಾಬರ್ ಆಝಂ ಅವರನ್ನು ಹಿಂದಿಕ್ಕಿರುವ ಗಿಲ್ 784 ಅಂಕಗಳೊಂದಿಗೆ ಮೊದಲ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ.

ರ್‍ಯಾಂಕಿಂಗ್ ಪಟ್ಟಿಯಲ್ಲಿ ಮೊದಲ ಸ್ಥಾನ ಹಾರ್ದಿಕ್



**ಹಾರ್ದಿಕ್ ಪಾಂಡ್ಯ:** ಟಿ20 ಆಲ್‌ರೌಂಡರ್‌ಗಳ ರ್‍ಯಾಂಕಿಂಗ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವುದು ಹಾರ್ದಿಕ್ ಪಾಂಡ್ಯ. 252 ಅಂಕಗಳನ್ನು ಹೊಂದಿರುವ ಹಾರ್ದಿಕ್ ಕಳೆದ ಕೆಲ ವಾರಗಳಿಂದ ನಂಬರ್ 1 ಸ್ಥಾನವನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

**ರವೀಂದ್ರ ಜಡೇಜಾ:** ಭಾರತ ಟೆಸ್ಟ್ ತಂಡದ ಸ್ಟಾರ್ ಆಟಗಾರ ರವೀಂದ್ರ ಜಡೇಜಾ ಟೆಸ್ಟ್ ಆಲ್ ರೌಂಡರ್‌ಗಳ ಪಟ್ಟಿಯಲ್ಲಿ ಮೊದಲ ಸ್ಥಾನವನ್ನು ಕಾಯ್ದುಕೊಂಡಿದ್ದಾರೆ. ಒಟ್ಟು 422 ಅಂಕಗಳನ್ನು ಹೊಂದಿರುವ ಜಡೇಜಾ ಕಳೆದ ಒಂದು ತಿಂಗಳಿಂದ ಮೊದಲ ಸ್ಥಾನದಿಂದ ಕೆಳಗಿಳಿದಿಲ್ಲ ಎಂಬುದು ವಿಶೇಷ.

**ಜಸ್‌ಪ್ರೀತ್ ಬುಮ್ರಾ:** ಟೆಸ್ಟ್ ಬೌಲರ್‌ಗಳ ಟಾಪ್-10 ಪಟ್ಟಿಯಲ್ಲಿ ಟೀಮ್ ಇಂಡಿಯಾ ವೇಗಿ ಜಸ್‌ಪ್ರೀತ್ ಬುಮ್ರಾ ಮೊದಲ ಸ್ಥಾನದಲ್ಲಿದ್ದಾರೆ. 898 ಅಂಕಗಳನ್ನು ಹೊಂದಿರುವ ಬುಮ್ರಾ ಇಂಗ್ಲೆಂಡ್ ವಿರುದ್ಧದ ಸರಣಿಯ ಮೂಲಕ ಅಗ್ರಸ್ಥಾನ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನು ಐಸಿಸಿ ತಂಡಗಳ ಶ್ರೇಯಾಂಕ ಪಟ್ಟಿಯಲ್ಲೂ ಟೀಮ್ ಇಂಡಿಯಾ ಅಗ್ರಸ್ಥಾನದಲ್ಲಿ ಕಾಣಿಸಿಕೊಂಡಿದೆ. ಏಕದಿನ ಹಾಗೂ ಟಿ20 ತಂಡಗಳ ರ್‍ಯಾಂಕಿಂಗ್‌ನಲ್ಲಿ ಭಾರತ ತಂಡವು ಮೊದಲ ಸ್ಥಾನದಲ್ಲಿದ್ದು, ಇನ್ನು ಟೆಸ್ಟ್ ತಂಡಗಳ ಶ್ರೇಯಾಂಕ ಪಟ್ಟಿಯಲ್ಲಿ 4ನೇ ಸ್ಥಾನದಲ್ಲಿ ಕಾಣಿಸಿಕೊಂಡಿದೆ.

# ಕರುಣ್, ಪ್ರಸಿದ್ಧ್‌ಗೆ ಕೊನೆಯ ಅವಕಾಶ; ಕುಲ್ದೀಪ್‌ಗೆ ಒಲಿಯದ ಅದೃಷ್ಟ





ಓವಲ್‌ನಲ್ಲಿ ಭಾರತ ಮತ್ತು ಇಂಗ್ಲೆಂಡ್ ನಡುವಿನ ಕೊನೆಯ ಟೆಸ್ಟ್ ಪಂದ್ಯ ಆರಂಭವಾಗಿದೆ. ಗಾಯದಿಂದಾಗಿ ರಿಷಭ್ ಪಂತ್ ಹೊರಗುಳಿದಿದ್ದು, ಧ್ರುವ್ ಜುರೆಲ್ ಅವರಿಗೆ ಅವಕಾಶ ದೊರೆತಿದೆ. ಜಸ್ಪ್ರೀತ್ ಬುಮ್ರಾ ಬದಲಿಗೆ ಪ್ರಸಿದ್ಧ್ ಕೃಷ್ಣ, ಶಾರ್ದೂಲ್ ಠಾಕೂರ್ ಬದಲಿಗೆ ಕರುಣ್ ನಾಯರ್ ಮತ್ತು ಅನ್ಶುಲ್ ಕಾಂಬೋಜ್ ಬದಲಿಗೆ ಆಕಾಶ್ ದೀಪ್ ಆಡುತ್ತಿದ್ದಾರೆ.

ಈ ಪಂದ್ಯ ಕರುಣ್ ಮತ್ತು ಪ್ರಸಿದ್ಧ್‌ಗೆ ತಮ್ಮ ವೃತ್ತಿಜೀವನವನ್ನು ಉಳಿಸಿಕೊಳ್ಳುವ ಅವಕಾಶವಾಗಿದೆ. ಭಾರತ ಮತ್ತು ಇಂಗ್ಲೆಂಡ್ ನಡುವಿನ ಕೊನೆಯ ಟೆಸ್ಟ್ ಪಂದ್ಯ ಓವಲ್ ಕ್ರಿಕೆಟ್ ಮೈದಾನದಲ್ಲಿ ಆರಂಭವಾಗಿದೆ. ಈ ಪಂದ್ಯಕ್ಕೆ ಟೀಂ ಇಂಡಿಯಾದಲ್ಲಿ ನಾಲ್ಕು ಪ್ರಮುಖ ಬದಲಾವಣೆಗಳನ್ನು ಮಾಡಲಾಗಿದೆ. ಗಾಯಗೊಂಡ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಿಷಭ್ ಪಂತ್ ಬದಲಿಗೆ ಧ್ರುವ್ ಜುರೆಲ್‌ಗೆ ಅವಕಾಶ ಸಿಕ್ಕಿದೆ. ವೇಗದ ಬೌಲರ್ ಜಸ್ಪ್ರೀತ್ ಬುಮ್ರಾ ಬದಲಿಗೆ ಪ್ರಸಿದ್ಧ್ ಕೃಷ್ಣ, ಶಾರ್ದೂಲ್ ಠಾಕೂರ್ ಬದಲಿಗೆ ಕರುಣ್ ನಾಯರ್, ಅನ್ಶುಲ್ ಕಾಂಬೋಜ್ ಬದಲಿಗೆ ಆಕಾಶ್ ದೀಪ್‌ಗೆ ಅವಕಾಶ ನೀಡಲಾಗಿದೆ.

ಕನ್ನಡಿಗ ಕರುಣ್ ನಾಯರ್‌ಗೆ ಕೊನೆಯ ಅವಕಾಶ ಸಿಕ್ಕಿದೆ. ಇಡೀ ಸರಣಿಯಲ್ಲಿ ಹೇಳಿಕೊಳ್ಳುವಂತಹ ಪ್ರದರ್ಶನ ನೀಡದ ಕರುಣ್‌ರನ್ನು 4ನೇ ಟೆಸ್ಟ್ ಪಂದ್ಯದಿಂದ ಹೊರಗಿಡಲಾಗಿತ್ತು. ಇದೀಗ ಶಾರ್ದೂಲ್ ಠಾಕೂರ್ ಬದಲಿಗೆ ಕರುಣ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ. ಹೀಗಾಗಿ ತನ್ನ ವೃತ್ತಿಜೀವನದ ಉಳಿವಿಗೆ ಮಾಡು ಇಲ್ಲವೇ ಮಡಿ ಪಂದ್ಯವಾಗಿರುವ ಓವಲ್ ಟೆಸ್ಟ್ ಪಂದ್ಯದಲ್ಲಿ ಕರುಣ್ ಮಿಂಚಲೇ ಬೇಕಾಗಿದೆ. ಕೆಲಸದ ಹೊಣೆ ನಿರ್ವಹಣೆಯ ಕಾರಣ ನೀಡಿ ತಂಡದ ವೇಗಿ ಜಸ್ಪ್ರೀತ್ ಬುಮ್ರಾ ಅವರನ್ನು ತಂಡದಿಂದ ಹೊರಗಿಡಲಾಗಿದೆ. ಅವರ ಬದಲಿಗೆ ಪ್ರಸಿದ್ಧ್ ಕೃಷ್ಣ ಅವರಿಗೆ ಪ್ಲೇಯಿಂಗ್ ಇಲೆವೆನ್‌ನಲ್ಲಿ ಸ್ಥಾನ ನೀಡಲಾಗಿದೆ. ಪ್ರಸಿದ್ಧ್ ಕೂಡ ಇಡೀ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿರಲಿಲ್ಲ. ಹೀಗಾಗಿ ಅವರನ್ನು ಸಹ ತಂಡದಿಂದ ಕೈಬಿಡಲಾಗಿತ್ತು. ಆದರೀಗ ಕೊನೆಯ ಟೆಸ್ಟ್‌ನಲ್ಲಿ ಪ್ರಸಿದ್ಧ್‌ಗೆ ಕೊನೆಯ ಅವಕಾಶ ನೀಡಲಾಗಿದೆ. ಟೀಮ್ ಇಂಡಿಯಾದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಿಷಭ್ ಪಂತ್ ಗಾಯಗೊಂಡಿರುವುದರಿಂದ ಅವರನ್ನು ಕೊನೆಯ ಟೆಸ್ಟ್‌ನಿಂದ ಹೊರಗಿಡಲಾಗಿದೆ. ಹೀಗಾಗಿ ಧ್ರುವ್ ಜುರೆಲ್‌ಗೆ ಅವಕಾಶ ಸಿಕ್ಕಿದೆ.

ಈ ಟೆಸ್ಟ್ ಸರಣಿಯಲ್ಲಿ ರಿಷಭ್ ಪಂತ್ ಉತ್ತಮ ಫಾರ್ಮ್‌ನಲ್ಲಿದ್ದರು, ಆದರೆ ಗಾಯದಿಂದಾಗಿ ಅವರು ತಂಡದಿಂದ ಹೊರಗುಳಿದಿದ್ದಾರೆ. ಈಗ ತಂಡದಲ್ಲಿ ಸ್ಥಾನ ಪಡೆದಿರುವ ಧ್ರುವ್ ಜುರೆಲ್ ಉತ್ತಮ ಪ್ರದರ್ಶನ ನೀಡಬೇಕಾಗುತ್ತದೆ. ಇಡೀ ಸರಣಿಯಲ್ಲಿ ಒಂದೇ ಒಂದು ಅವಕಾಶ ಪಡೆಯದ ಕೆಲವೇ ಕೆಲವು ಆಟಗಾರರಲ್ಲಿ ಕುಲ್ದೀಪ್ ಕೂಡ ಒಬ್ಬರು. ಪ್ರಮುಖ ಸ್ಪಿನ್ನರ್ ಆಗಿ ತಂಡದೊಂದಿಗೆ ಇಂಗ್ಲೆಂಡ್‌ಗೆ ಬಂದಿದ್ದ ಕುಲ್ದೀಪ್ ಬೆಂಚ್ ಕಾಯುವುದನ್ನು ಬಿಟ್ಟು ಬೇರೇನು ಮಾಡಲು ಸಾಧ್ಯವಾಗಲಿಲ್ಲ. ಇವರೊಂದಿಗೆ ಅಭಿಮನ್ಯು ಈಶ್ವರನ್, ಅರ್ಷದೀಪ್ ಸಿಂಗ್ ಕೂಡ ಅವಕಾಶ ಸಿಗದೆ ಬೆಂಚ್ ಮೇಲೆ ಕುಳಿತುಕೊಳ್ಳಬೇಕಾಯಿತು.

**ಭಾರತ ತಂಡ:** ಶುಭ್‌ಮನ್ ಗಿಲ್ (ನಾಯಕ), ಯಶಸ್ವಿ ಜೈಸ್ವಾಲ್, ಸಾಯಿ ಸುದರ್ಶನ್, ಕರುಣ್ ನಾಯರ್, ಕೆಎಲ್ ರಾಹುಲ್, ಧ್ರುವ್ ಜುರೆಲ್ (ವಿಕೆಟ್ ಕೀಪರ್), ರವೀಂದ್ರ ಜಡೇಜಾ, ವಾಷಿಂಗ್ಟನ್ ಸುಂದರ್, ಪ್ರಸಿದ್ಧ್ ಕೃಷ್ಣ, ಮೊಹಮ್ಮದ್ ಸಿರಾಜ್, ಆಕಾಶ್ ದೀಪ್.

# ಸಿರಾಜ್‌ಗೆ 5 ವಿಕೆಟ್ ಖಚಿತ: ಡೇಲ್ ಸ್ಟೈನ್



ಭಾರತ ಮತ್ತು ಇಂಗ್ಲೆಂಡ್ ನಡುವಣ ಐದನೇ ಟೆಸ್ಟ್ ಪಂದ್ಯವು ಇಂದಿನಿಂದ ಶುರುವಾಗಲಿದೆ. ಕೆನ್ನಿಂಗ್ಟನ್‌ನ ಓವಲ್ ಮೈದಾನದಲ್ಲಿ ನಡೆಯಲಿರುವ ಈ ಪಂದ್ಯವು ಟೀಮ್ ಇಂಡಿಯಾ ಪಾಲಿಗೆ ನಿರ್ಣಾಯಕ. ಏಕೆಂದರೆ 5 ಪಂದ್ಯಗಳ ಸರಣಿಯಲ್ಲಿ 2-1 ಅಂತರದಿಂದ ಇಂಗ್ಲೆಂಡ್ ಮುನ್ನಡೆ ಸಾಧಿಸಿದ್ದು, ಅಂತಿಮ ಪಂದ್ಯದಲ್ಲಿ ಗೆದ್ದರೆ ಮಾತ್ರ ಭಾರತ ತಂಡ ಸರಣೀಯನ್ನು ಡ್ರಾ ಮಾಡಿಕೊಳ್ಳಬಹುದು. ಭಾರತ ಮತ್ತು ಇಂಗ್ಲೆಂಡ್ ನಡುವಣ 5ನೇ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ವೇಗಿ ಮೊಹಮ್ಮದ್ ಸಿರಾಜ್ 5 ವಿಕೆಟ್ ಕಬಳಿಸಿದ್ದಾರೆ. ಇಂತಹದೊಂದು ಭವಿಷ್ಯ ನುಡಿದಿರುವುದು ಮತ್ಯಾರೂ ಅಲ್ಲ. ಸೌತ್ ಆಫ್ರಿಕಾ ತಂಡದ ಮಾಜಿ ವೇಗಿ ಡೇಲ್ ಸ್ಟೈನ್. ಲಂಡನ್‌ನ ಕೆನ್ನಿಂಗ್ಟನ್ ಓವಲ್ ಮೈದಾನದಲ್ಲಿ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ಕೊನೆಯ ಟೆಸ್ಟ್ ಪಂದ್ಯದಲ್ಲಿ ಸಿರಾಜ್ ಮಾರಕ ದಾಳಿ ಸಂಘಟಿಸಲಿದ್ದಾರೆ ಎಂದು ಸ್ಟೈನ್ ಭವಿಷ್ಯ ನುಡಿದಿದ್ದಾರೆ. ಡೇಲ್ ಸ್ಟೈಲ್ ಪ್ರಕಾರ, ಮೊಹಮ್ಮದ್ ಸಿರಾಜ್ ಓವಲ್ ಮೈದಾನದಲ್ಲಿ 5 ವಿಕೆಟ್ ಕಬಳಿಸುವುದು ಖಚಿತ. ಅಂತಹದೊಂದು ಪ್ರದರ್ಶನವನ್ನು ಟೀಮ್ ಇಂಡಿಯಾ ವೇಗಿಯಿಂದ ನಿರೀಕ್ಷಿಸಬಹುದು ಎಂದು ಲೇಟ್ ಸ್ವಿಂಗ್ ಸ್ಪೆಷಲಿಸ್ಟ್ ಡೇಲ್ ಸ್ಟೈನ್ ಹೇಳಿದ್ದಾರೆ. ಇದಕ್ಕೂ ಮುನ್ನ ಬರ್ಮಿಂಗ್‌ಹ್ಯಾಮ್‌ನ ಎಡ್ಜ್‌ಬಾಸ್ಟನ್ ಸ್ಟೇಡಿಯಂನಲ್ಲಿ ನಡೆದ ದ್ವಿತೀಯ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಮೊಹಮ್ಮದ್ ಸಿರಾಜ್ 6 ವಿಕೆಟ್ ಪಡೆದಿದ್ದರು. ಅಲ್ಲದೆ 7 ಇನಿಂಗ್ಸ್‌ಗಳಿಂದ 14 ವಿಕೆಟ್ ಕಬಳಿಸಿ ಈ ಸರಣಿಯಲ್ಲಿ ಟೀಮ್ ಇಂಡಿಯಾ ಪರ ಅತ್ಯಧಿಕ ವಿಕೆಟ್ ಪಡೆದ ಭಾರತೀಯ ಬೌಲರ್ ಎನಿಸಿಕೊಂಡಿದ್ದಾರೆ. ಇದೀಗ ಟೀಮ್ ಇಂಡಿಯಾ ಪಾಲಿಗೆ ನಿರ್ಣಾಯಕವಾಗಿರುವ ಕೊನೆಯ ಟೆಸ್ಟ್ ಪಂದ್ಯದಲ್ಲಿ ಮೊಹಮ್ಮದ್ ಸಿರಾಜ್ ಭಾರತೀಯ ಬೌಲಿಂಗ್ ವಿಭಾಗವನ್ನು ಮುನ್ನಡೆಸಲಿದ್ದಾರೆ. ಏಕೆಂದರೆ ಈ ಪಂದ್ಯದಿಂದ ಜಸ್‌ಪ್ರೀತ್ ಬುಮ್ರಾ ಹೊರಗುಳಿದಿದ್ದು, ಹೀಗಾಗಿ ಸಿರಾಜ್ ಮುಂದಾಳತ್ವದಲ್ಲಿ ಟೀಮ್ ಇಂಡಿಯಾ ದಾಳಿ ಸಂಘಟಿಸಲಿದೆ.

ಇತ್ತ ಬುಮ್ರಾ ಅನುಪಸ್ಥಿತಿ ನಡುವೆ 2ನೇ ಟೆಸ್ಟ್ ಮ್ಯಾಚ್‌ನ ಮೊದಲ ಇನಿಂಗ್ಸ್‌ನಲ್ಲಿ 6 ವಿಕೆಟ್ ಕಬಳಿಸಿದ್ದ ಮೊಹಮ್ಮದ್ ಸಿರಾಜ್, ಇದೀಗ ನಿರ್ಣಾಯಕ ಪಂದ್ಯದಲ್ಲೂ 5 ವಿಕೆಟ್ ಪಡೆದು ಮಿಂಚಲಿದ್ದಾರೆ ಎಂದು ಡೇಲ್ ಸ್ಟೈನ್ ಭವಿಷ್ಯ ನುಡಿದಿದ್ದಾರೆ.

**ಭಾರತ ಸಂಭಾವ್ಯ ಪ್ಲೇಯಿಂಗ್ 11:** ಕೆಎಲ್ ರಾಹುಲ್, ಯಶಸ್ವಿ ಜೈಸ್ವಾಲ್, ಸಾಯಿ ಸುದರ್ಶನ್, ಶುಭ್‌ಮನ್ ಗಿಲ್, ಕರುಣ್ ನಾಯರ್, ಧ್ರುವ್ ಜುರೇಲ್, ರವೀಂದ್ರ ಜಡೇಜಾ, ವಾಷಿಂಗ್ಟನ್ ಸುಂದರ್, ಮೊಹಮ್ಮದ್ ಸಿರಾಜ್, ಆಕಾಶ್ ದೀಪ್, ಪ್ರಸಿದ್ಧ್ ಕೃಷ್ಣ.

# ಬರೋಬ್ಬರಿ 25 ಕೋಟಿ ರೂ. ಕೆಕೆಆರ್‌ಗೆ ಕೆಎಲ್ ರಾಹುಲ್

ಕೆಎಲ್ ರಾಹುಲ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿಯು ಕಳೆದ ಸೀಸನ್‌ನಲ್ಲಿ 14 ಕೋಟಿ ರೂ.ಗೆ ಖರೀದಿಸಿದ್ದರು. ಅಲ್ಲದೆ ಡೆಲ್ಲಿ ಪರ 13 ಇನಿಂಗ್ಸ್ ಆಡಿದ್ದ ರಾಹುಲ್ ಬರೋಬ್ಬರಿ 539 ರನ್ ಕಲೆಹಾಕಿ ಮಿಂಚಿದ್ದರು. ಇದೀಗ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಸ್ಟಾರ್ ಆಟಗಾರನನ್ನೇ ಟ್ರೇಡ್ ಮಾಡಿಕೊಳ್ಳಲು ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿ ಮುಂದಾಗಿದೆ.

ಹೌದು, ಕೆಎಲ್ ರಾಹುಲ್ ಅವರನ್ನು ಟ್ರೇಡ್ ಮಾಡಿಕೊಳ್ಳಲು ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿ ತೆರೆ ಮರೆಯ ಪ್ರಯತ್ನಕ್ಕೆ ಕೈ ಹಾಕಿದೆ. ಇದರ ಮೊದಲ ಹೆಜ್ಜೆಯಾಗಿ ಇದೀಗ ಡೆಲ್ಲಿ ಕ್ಯಾಪಿಟಲ್ಸ್ ಜೊತೆ ಮಾತುಕತೆಯನ್ನು ಸಹ ನಡೆಸಿದೆ ಎಂದು ವರದಿಯಾಗಿದೆ. ಈ ಮಾತುಕತೆಯು ಯಶಸ್ವಿಯಾದರೆ ಕನ್ನಡಿಗ ಕೆಕೆಆರ್ ತಂಡದ ಪಾಲಾಗಲಿದ್ದಾರೆ. ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ಮುಂದಿನ ಸೀಸನ್‌ಗಾಗಿ ಹೊಸ ನಾಯಕನನ್ನು ಹುಡುಕುತ್ತಿದೆ. ಕಳೆದ ಸೀಸನ್‌ನಲ್ಲಿ ಅಜಿಂಕ್ಯ ರಹಾನೆ ಮುಂದಾಳತ್ವದಲ್ಲಿ ಕಣಕ್ಕಿಳಿದಿದ್ದ ಕೆಕೆಆರ್ ನಿರೀಕ್ಷಿತ ಪ್ರದರ್ಶನ ನೀಡಿರಲಿಲ್ಲ. ಹೀಗಾಗಿ ಈ ಮುಂಬರುವ ಐಪಿಎಲ್ ಹರಾಜಿಗೂ ಮುನ್ನ ಕೆಲ ಆಟಗಾರರನ್ನು ತಂಡದಿಂದ ಕೈ ಬಿಡಲು ನಿರ್ಧರಿಸಿದೆ.



ಕನ್ನಡಿಗ ಕೆಕೆಆರ್ ತಂಡದ ಪಾಲು?

ಇತ್ತ ಹಿರಿಯ ಆಟಗಾರರನ್ನು ಕೈ ಬಿಡಲು ನಿರ್ಧರಿಸಿರುವ ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ಮತ್ತೊಂದೆಡೆ ಕೆಎಲ್ ರಾಹುಲ್ ಅವರನ್ನು ತಂಡಕ್ಕೆ ಸೇರ್ಪಡೆಗೊಳಿಸಲು ಆಸಕ್ತಿ ಹೊಂದಿದೆ. ಕೆಎಲ್ ರಾಹುಲ್ ಆಯ್ಕೆಯಿಂದ ಕೆಕೆಆರ್ ಫ್ರಾಂಚೈಸಿಯು ತನ್ನ ಮೂರು ಸಮಸ್ಯೆಗಳಿಗೆ ಪರಿಹಾರ ಕಾಣಲು ಬಯಸುತ್ತಿದೆ. ಅಂದರೆ ಕೆಕೆಆರ್ ತಂಡಕ್ಕೆ ಮುಂದಿನ ಸೀಸನ್‌ಗೆ ಉತ್ತಮ ನಾಯಕನ ಅಗತ್ಯವಿದೆ. ಇದರ ಜೊತೆಗೆ ವಿಕೆಟ್ ಕೀಪರ್ ಬ್ಯಾಟರ್‌ನ ಅವಶ್ಯಕತೆ ಕೂಡ. ಹಾಗೆಯೇ ಅತ್ಯುತ್ತಮ ಆರಂಭಿಕನ ಅಗತ್ಯತೆ ಕೂಡ ಕೆಕೆಆರ್ ತಂಡಕ್ಕಿದೆ. ಇತ್ತ ಕೆಎಲ್ ರಾಹುಲ್ ಅವರನ್ನು ಟ್ರೇಡ್ ಮಾಡಿಕೊಂಡರೆ ಒಂದೇ ಆಯ್ಕೆಯ ಮೂಲಕ ಮೂರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಹೀಗಾಗಿಯೇ ಇದೀಗ ಕೆಕೆಆರ್ ಫ್ರಾಂಚೈಸಿಯು ಡೆಲ್ಲಿ ಕ್ಯಾಪಿಟಲ್ಸ್ ಜೊತೆ ಟ್ರೇಡಿಂಗ್ ಮಾತುಕತೆ ನಡೆಸುತ್ತಿದೆ. ಅಲ್ಲದೆ ಕೆಎಲ್ ರಾಹುಲ್ ಅವರಿಗಾಗಿ ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ಬರೋಬ್ಬರಿ 25 ಕೋಟಿ ರೂ. ವ್ಯಯಿಸಲು ಕೂಡ ಸಿದ್ಧವಾಗಿದೆ ಎಂಬ ಮಾತುಗಳು ಕೂಡ ಕೇಳಿ ಬರುತ್ತಿದೆ. ಹೀಗಾಗಿ ಐಪಿಎಲ್ 2026ರ ಮಿನಿ ಹರಾಜಿಗೂ ಮುನ್ನ ಕೆಎಲ್ಆರ್ ಕೊಲ್ಕತ್ತಾ ನೈಟ್ ರೈಡರ್ಸ್ ತಂಡದ ಪಾಲಾದರೂ ಅಚ್ಚರಿಪಡಬೇಕಿಲ್ಲ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966